ಸಂಪುಟ: 05 ಸಂಚಿಕೆ: 25 ಪುಟಗಳು: 08 ಬುಧವಾರ 09 ಏಪ್ರಿಲ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5

**ಮುಂಜಾನೆ ಮಾತು**

ಯಶಸ್ಸಿನ ಬಗೆಗಿನ ನನ್ನ ವ್ಯಾಖ್ಯಾನವು ಸಾಕಷ್ಟು ಪ್ರಬಲವಾಗಿದ್ದರೆ ಸೋಲು ನನ್ನನ್ನು ಎಂದಿಗೂ ಹಿಂದಿಕ್ಕುವುದಿಲ್ಲ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಮೊಮ್ಮಗನ ಕಾರಣಕ್ಕಾಗಿ ಒಂದು ಹೆಜ್ಜೆ ಹಿಂದೆ ಇಟ್ಟಿದ್ದೇನೆ : ಸುಮಲತಾ

• ಉದಯವಾಹಿನಿ, ಬೆಂಗಳೂರು

ನಾನು ಬಿಜೆಪಿ ಜೊತೆಗೆ ಅಂತರ ಕಾಯ್ದುಕೊಂಡಿಲ್ಲ. ಬದಲಾಗಿ ಮನೆಗೆ ಮೊಮ್ಮಗ ಬಂದಿದ್ದಾನೆ. ಕುಟುಂಬದ ಜೊತೆಗೆ ಕಾಲ ಕಳೆಯಬೇಕಾಗಿದೆ. ಹಾಗಾಗಿ ರಾಜಕೀಯವಾಗಿ ಒಂದು ಹೆಜ್ಜೆ ಹಿಂದೆ ಇಟ್ಟಿದ್ದೇನೆ ಎಂದು ಮಾಜಿ ಸಂಸದೆ ಸುಮಲತಾ ಅಂಬರೀಶ್ ಹೇಳಿದರು.

ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಗಾಳಿಯೊಂದು ಬಿಟ್ಟರೆ ಪ್ರತಿಯೊಂದಕ್ಕೂ ಟ್ಯಾಕ್ಸ್ ಹಾಕಿದ್ದಾರೆ. ದರ ಏರಿಕೆ ಬಹಳ ಮುಖ್ಯವಾದ ವಿಚಾರ. ಆದಾಯ ಹೆಚ್ಚಾಗ್ತಿಲ್ಲ, ಖರ್ಚು ಹೆಚ್ಚಾಗ್ತಿದೆ. ಪ್ರತಿಯೊಂದಕ್ಕೂ ಟ್ಯಾಕ್ಸ್ ಹಾಕ್ತಾ ಹೋದ್ರೆ, ಎಲ್ಲಿಗೆ ಹೋಗಿ ಮುಟ್ಟೋದು ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಿಲಿಂಡರ್ ದರ ಏರಿಕೆ ವಿಚಾರಕ್ಕೆ ಕಾಂಗ್ರೆಸ್ ಟೀಕೆಗೆ ತಿರುಗೇಟು ನೀಡಿದ ಅವರು, ರಾಜಕೀಯವಾಗಿ ಮಾತಾಡಲು ಹೋದರೆ ಅದು ಬೇರೆ. ಆದ್ರೆ ಜನರ ಮೇಲೆ ಹೆಚ್ಚುವರಿಯಾಗಿ ದರ ಏರಿಕೆ ಮಾಡಿದರೆ ಸಮಸ್ಯೆ ಆಗುತ್ತೆ. ಜನಸಾಮಾನ್ಯರು ಎದುರಿಸುತ್ತಿರುವ ಸಮಸ್ಯೆಗಳ ವಿಚಾರದಲ್ಲಿ ನಾವು ಹೋರಾಟ ಮಾಡ್ತಿದೀವಿ. ಇಂಧನ, ಚಿನ್ನದ ದರಗಳು ಜಾಗತಿಕವಾಗಿ ನಿರ್ಧಾರ ಆಗುತ್ತದೆ. ಇದರ ಮೇಲೆ ಇನ್ನಷ್ಟು ಟ್ಯಾಕ್ಸ್ ಹಾಕಿದ್ರೆ, ಜನರ ಮೇಲೆ ಇನ್ನಷ್ಟು ಭಾರ ಆಗುತ್ತೆ. ಎರಡು ರೂ. ಕೊಟ್ಟು ಇಪ್ಪತ್ತು ರೂ. ಕಿತ್ಕೊಳ್ಳೋ ಕೆಲಸ ಆಗ್ತಿದೆ ಎಂದರು.

## ಬೂಕರ್ ಪ್ರಶಸ್ತಿಯ ಶಾರ್ಟ್ ಲಿಸ್ಟ್ ನಲ್ಲಿ ಸ್ಥಾನ ಪಡೆದ ಹಾಸನದ ಸಾಹಿತಿ

• ಉದಯವಾಹಿನಿ, ಹಾಸನ

ಹಾಸನದ ಹಿರಿಯ ಸಾಹಿತಿ, ಖ್ಯಾತ ಲೇಖಕಿ ಬಾನು ಮುಷ್ತಾಕ್ ಅವರ ''ಹಾರ್ಟ್ ಲ್ಯಾಂಪ್'' ಕೃತಿಯು ಪ್ರತಿಷ್ಠಿತ ಬೂಕರ್ ಅವಾರ್ಡ್ ಶಾರ್ಟ್ ಲಿಸ್ಟ್‌ನಲ್ಲಿ ಸ್ಥಾನ ಪಡೆದಿದೆ. ಈ ಮೂಲಕ ಬೂಕರ್ ಅವಾರ್ಡ್‌ನ ಶಾರ್ಟ್ ಲಿಸ್ಟ್‌ನಲ್ಲಿ ಸ್ಥಾನ ಪಡೆದ ಕನ್ನಡದ ಮೊದಲ ಸಾಹಿತಿ ಎಂಬ ಹೆಗ್ಗಳಿಕೆಗೆ ಬಾನು ಮುಷ್ತಾಕ್ ಅವರು ಪಾತ್ರವಾಗಿದ್ದಾರೆ. ಬಾನು ಮುಷ್ತಾಕ್ ಅವರ 'ಹಸಿನಾ ಮತ್ತು ಇತರ ಕತೆಗಳು' ಕಥಾಸಂಕಲನವನ್ನು ಇಂಗ್ಲೀಷ್‌ಗೆ ದೀಪಾ ಬಸ್ತಿ ಅವರು ''ಹಾರ್ಟ್ ಲ್ಯಾಂಪ್'' ಎಂದು ಅನುವಾದಿಸಿದ್ದಾರೆ. ಈ ಕೃತಿ ಫೆಬ್ರವರಿ ತಿಂಗಳಲ್ಲಿ ಬೂಕರ್ ಅವಾರ್ಡ್‌ನ ಲಾಂಗ್ ಲಿಸ್ಟ್‌ನಲ್ಲಿ ಸ್ಥಾನ ಪಡೆದಿತ್ತು. ಇದೀಗ, ಶಾರ್ಟ್ ಲಿಸ್ಟ್‌ನಲ್ಲಿ ಸ್ಥಾನ ಪಡೆದಿದೆ. ಒಟ್ಟು ಬೂಕರ್ ಅವಾರ್ಡ್‌ಗೆ 153 ಕೃತಿಗಳು ನಿರ್ದೇಶಿತವಾಗಿದ್ದವು. ಇದರಲ್ಲಿ ಬಾನು ಮುಷ್ತಾಕ್ ಅವರ ಹಾರ್ಟ್ ಲ್ಯಾಂಪ್ ಕೃತಿಯೂ ಸೇರಿತ್ತು. ಇದೀಗ ಶಾರ್ಟ್ ಲಿಸ್ಟ್‌ನಲ್ಲಿ ಆಯ್ಕೆಯಾಗುವ ಮೂಲಕ ಅನುವಾದಿತ ಕೃತಿ ಪ್ರಶಸ್ತಿಯ ಸನಿಹಕ್ಕೆ ತಲುಪಿದೆ. ಸದ್ಯ ಶಾರ್ಟ್ ಲಿಸ್ಟ್‌ನಲ್ಲಿ ಆರು ಕೃತಿ ಗಳು ಸ್ಥಾನ ಪಡೆದಿವೆ. ಮೇ 21ರಂದು ಲಂಡನ್‌ನಲ್ಲಿ ವಿಜೇತ ಕೃತಿಯನ್ನು ಘೋಷಿಸಲಾಗುತ್ತದೆ. ಶಾರ್ಟ್ ಲಿಸ್ಟ್‌ನಲ್ಲಿ ಆಯ್ಕೆಯಾಗಿರುವ ಎಲ್ಲಾರನ್ನೂ ಲಂಡನ್‌ನಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಆಹ್ವಾನಿಸಿ, ಪ್ರಶಸ್ತಿಯನ್ನು ಘೋಷಿಸಲಾಗುತ್ತದೆ. ವಿಜೇತರಿಗೆ 50 ಸಾವಿರ ಪೌಂಡ್ ಬಹುಮಾನ ದೊರೆಯಲಿದೆ. ಈ ಪ್ರಶಸ್ತಿ ಕರ್ನಾಟಕಕ್ಕೆ ಲಭಿಸಲಿ ಎಂಬುವುದು ಕನ್ನಡಿಗರ ಆಶಯವಾಗಿದೆ.

## ಕನಕಪುರ ರಸ್ತೆಯ 2 ಸ್ಥಳಗಳನ್ನ ವೀಕ್ಷಿಸಿದ ಎಐಐ ತಂಡ

• ಉದಯವಾಹಿನಿ, ಬೆಂಗಳೂರು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪರ್ಯಾಯವಾಗಿ ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಾಜ್ಯ ಸರ್ಕಾರವು 3 ಸ್ಥಳಗಳನ್ನು ಗುರುತಿಸಿದೆ. ಈ ಪೈಕಿ ಕನಕಪುರ ರಸ್ತೆಯಲ್ಲಿರುವ ಎರಡು ತಾಣಗಳ ಪರಿಶೀಲನೆಯನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (ಎಎಐ) ಉನ್ನತ ಮಟ್ಟದ ತಂಡವು ಮಂಗಳವಾರ ನಡೆಸಿತು. ನಂತರ ತಂಡದ ಸದಸ್ಯರು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ ಬಿ ಪಾಟೀಲ್ ಅವರನ್ನು ಭೇಟಿಯಾಗಿ ವಿಚಾರ ವಿನಿಮಯ ನಡೆಸಿದರು. ಈ ಸಂದರ್ಭದಲ್ಲಿ ಸಚಿವರು ಕೂಡ ಉದ್ದೇಶಿತ ವಿಮಾನ ನಿಲ್ದಾಣದ ಅಗತ್ಯ, ಬೆಂಗಳೂರಿನ ನಾಗರಿಕ ಮತ್ತು ಕೈಗಾರಿಕಾ ಅಗತ್ಯ ಇತ್ಯಾದಿಗಳನ್ನು ತಂಡದ ಸದಸ್ಯರಿಗೆ ವಿವರಿಸಿ, ಪ್ರಾತ್ಯಕ್ಷಿಕೆ ಪ್ರದರ್ಶಿಸಿದರು. ಅತ್ಯಂತ ಪಾರದರ್ಶಕವಾಗಿ ಸ್ಥಳ ಗುರುತಿಸುವ ಕೆಲಸ ಆಗಲಿ ಎಂದು ತಂಡಕ್ಕೆ ಸಲಹೆ ನೀಡಿದರು. ಬುಧವಾರ ಈ ತಂಡ ನೆಲಮಂಗಲ – ಕುಣಿಗಲ್ ರಸ್ತೆಯ ಸ್ಥಳ ಪರಿಶೀಲನೆ ನಡೆಸಲಿದೆ. ಉದ್ದೇಶಿತ ಎರಡನೆಯ ವಿಮಾನ ನಿಲ್ದಾಣವನ್ನು ಬೆಂಗಳೂರಿನ ಅಗತ್ಯಗಳನ್ನು ಗಮನದಲ್ಲಿ ಇಟ್ಟುಕೊಂಡು ನಿರ್ಮಿಸಲು ಸರಕಾರ ತೀರ್ಮಾನಿಸಿದೆ. ಸ್ಥಳ ಪರಿಶೀಲನೆಯ ಬಳಿಕ ಪ್ರಾಧಿಕಾರದ ಅಭಿಪ್ರಾಯ ಏನೆಂಬುದನ್ನು ತಿಳಿದುಕೊಂಡು, ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು. ಪ್ರಾಧಿಕಾರದ ತಂಡದಲ್ಲಿ ಜನರಲ್ ಮ್ಯಾನೇಜರ್ ವಿಕ್ರಮ್ ಸಿಂಗ್, ಜಂಟಿ ಜನರಲ್ ಮ್ಯಾನೇಜರ್ ಕೆ. ಶ್ರೀನಿವಾಸರಾವ್, ಸಹಾಯಕ ಜನರಲ್ ಮ್ಯಾನೇಜರ್ ಮನುಜ್ ಭಾರದ್ವಾಜ್, ಪ್ರಧಾನ ಕಚೇರಿಯ ಅಧಿಕಾರಿಗಳಾದ ಸಚ್ಚಿದಾನಂದ್, ಸಂತೋಷಕುಮಾರ್ ಭಾರತಿ, ಅಮನ್ ಚಿಪಾ ಇದ್ದರು. ಸರಕಾರದ ಪರವಾಗಿ ಮೂಲಸೌಕರ್ಯ ಇಲಾಖೆ ಕಾರ್ಯದರ್ಶಿ ಎನ್.ಮಂಜುಳಾ, ಹೆಚ್ಚುವರಿ ಕಾರ್ಯದರ್ಶಿ ಹೆಪ್ಸಿಬಾ ರಾಣಿ, ಕರ್ನಾಟಕ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಖುಷ್ಬೂ ಗೋಯಲ್, ಸಚಿವರ ತಾಂತ್ರಿಕ ಸಲಹೆಗಾರ ಅರವಿಂದ ಗಲಗಲಿ ಹಾಜರಿದ್ದರು.

# ಬಾಲಕಿಯರದ್ದೇ ಮೇಲುಗೈ

**ಪಿಯುಸಿ ಪರೀಕ್ಷೆಯ ಫಲಿತಾಂಶ ಪ್ರಕಟ**

- ಶೇ.73.45ರಷ್ಟು ವಿದ್ಯಾರ್ಥಿಗಳು ಉತ್ತೀರ್ಣ
- ಕಳೆದ ಸಾಲಿಗಿಂತ ಶೇ.8ರಷ್ಟು ಫಲಿತಾಂಶ ಕುಸಿತ
- ಶೇ.100 & ಶೂನ್ಯ ಸುತ್ತಿದ ಕಾಲೇಜುಗಳೆಷ್ಟು...
- ಉತ್ತಮ ಅಂಕಗಳಿಸಿದ ವಿದ್ಯಾರ್ಥಿನಿಯರಿಗೆ ಗೌರವ




## ಉಡುಪಿ ಫಸ್ಟ್
## ಯಾದಗಿರಿ ಲಾಸ್ಟ್


| ಉಡುಪಿ ಫಸ್ಟ್, ಯಾದಗಿರಿ ಲಾಸ್ಟ್ | |
|---|---|
| ಉಡುಪಿ | ಶೇ.93.90 |
| ದಕ್ಷಿಣ ಕನ್ನಡ | 93.57 |
| ಬೆಂಗಳೂರು ದಕ್ಷಿಣ | 85.36 |
| ಕಲಬುರಗಿ | 55.70 |
| ರಾಯಚೂರು | 58.75) |
| ಯಾದಗಿರಿ | ಶೇ.48.45 |
| ಒಟ್ಟಾರೆ ಉತ್ತೀರ್ಣ | ಶೇ.73.45 |

• ಉದಯವಾಹಿನಿ, ಬೆಂಗಳೂರು

ಪ್ರತಿವರ್ಷದಂತೆ ಈ ಬಾರಿಯೂ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆಗೆ 3,45,694 ಬಾಲಕಿಯರು ಹಾಜರಾಗಿದ್ದರು. ಈ ಪೈಕಿ 2,69,212 ಬಾಲಕಿಯರು ಉತ್ತೀರ್ಣರಾಗಿದ್ದಾರೆ. ಶೇಕಡಾ 77.88ರಷ್ಟು ಬಾಲಕಿಯರು ಉತ್ತೀರ್ಣರಾದಂತಾಗಿದೆ. ದ್ವಿತೀಯ ಪಿಯುಸಿ ಪರೀಕ್ಷೆಗೆ 2,92,111 ಬಾಲಕರು ಹಾಜರಾಗಿದ್ದರು. ಈ ಪೈಕಿ 1,99,227 ಬಾಲಕರು ಉತ್ತೀರ್ಣರಾಗಿದ್ದಾರೆ. 2024–25ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿದ್ದು, ಈ ಬಾರಿ ಪರೀಕ್ಷೆ ಬರೆದಿದ್ದ 6,37,805 ಲಕ್ಷ ವಿದ್ಯಾರ್ಥಿಗಳ ಪೈಕಿ 4,68,439 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಈ ಮೂಲಕ ಶೇ.73.45ರಷ್ಟು ಫಲಿತಾಂಶ ಬಂದಿದೆ. ಕಳೆದ ಸಾಲಿಗೆ ಹೋಲಿಸಿದರೆ ಶೇ.8ರಷ್ಟು ಕುಸಿತವಾಗಿದೆ.

**ಭಯ ಬೇಡ:** ಈಬಾರಿ ನಡೆದ ಪರೀಕ್ಷೆಯಲ್ಲಿ ಪಾಸಾಗದ ಅಥವಾ ಫಲಿತಾಂಶದಿಂದ ತೃಪ್ತಿಯಾಗದ ವಿದ್ಯಾರ್ಥಿಗಳು ಇನ್ನೂ ಎರಡು ಪರೀಕ್ಷೆ ಬರೆಯಬಹುದಾಗಿದೆ. ಪರೀಕ್ಷೆ–2 ಏ.24ರಿಂದ ಮೇ 8ರವರೆಗೆ ನಡೆಯಲಿದೆ. ಪರೀಕ್ಷೆ–3 ಜೂನ್ 9ರಿಂದ 21ರವರೆಗೆ ನಡೆಯಲಿದ್ದು, ಈಗಾಗಲೇ ವೇಳಾಪಟ್ಟಿ ಪ್ರಕಟಿಸಲಾಗಿದೆ. ಪರೀಕ್ಷೆ–2ಕ್ಕೆ ಬರೆಯಲಿರುವ ವಿದ್ಯಾರ್ಥಿಗಳು ಇಂದಿನಿಂದ ಏ.15ರವರೆಗೆ ಹೆಸರು ನೋಂದಾಯಿಸಬಹುದು. ಮರು ಪರೀಕ್ಷೆ ಬರೆಯುವ ಈ ಎಲ್ಲಾ ವಿದ್ಯಾರ್ಥಿಗಳಿಗೂ ಪರೀಕ್ಷಾ ಶುಲ್ಕ ಇರುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು. ಉತ್ತರ ಪತ್ರಿಕೆಯ ಸ್ಕ್ಯಾನಿಂಗ್ ಪ್ರತಿ ಪಡೆಯಲು ಹಾಗೂ ಮರುಮೌಲ್ಯಮಾಪನ ಬಯಸುವ ವಿದ್ಯಾರ್ಥಿಗಳು ಆನ್‌ಲೈನ್ ಹಾಗೂ ಆಫ್‌ಲೈನ್ ಮೂಲಕವೂ ಅರ್ಜಿ ಸಲ್ಲಿಸಬಹುದಾಗಿದೆ. ಉತ್ತರ ಪತ್ರಿಕೆಯ ಸ್ಕ್ಯಾನಿಂಗ್ ಪ್ರತಿಗಾಗಿ ಏ.8ರಿಂದ 14ರವರೆಗೆ ಅರ್ಜಿ ಸಲ್ಲಿಬಹುದಾಗಿದೆ. ಏ.12ರಿಂದ 16ರವರೆಗೆ ಉತ್ತರ ಪತ್ರಿಕೆಯ ಸ್ಕ್ಯಾನ್ ಪ್ರತಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮೌಲ್ಯಮಾಪನ ಹಾಗೂ ಮರುಎಣಿಕೆಗಾಗಿ ಅರ್ಜಿ ಸಲ್ಲಿಸಲು (ಸ್ಕ್ಯಾನ್ ಪ್ರತಿ ಪಡೆದುಕೊಂಡವರಿಗೆ ಮಾತ್ರ) ಏ.12ರಿಂದ 17ರವರೆಗೆ ಅರ್ಜಿ ಸಲ್ಲಿಸಬಹುದು. ಪ್ರತಿ ವಿಷಯದ ಸ್ಕ್ಯಾನ್ ಪ್ರತಿಗಾಗಿ 530 ರೂ. ಹಾಗೂ ಮರುಮೌಲ್ಯಮಾಪನ ಶುಲ್ಕ 1,670 ರೂ. ಪಾವತಿಸಬೇಕಿದೆ ಎಂದು ಸಚಿವ ಮಧು ಬಂಗಾರಪ್ಪ ಮಾಹಿತಿ ನೀಡಿದರು.


ಸಂಜನಾಬಾಯಿ 597 ಕಲಾ ವಿಭಾಗ


ದೀಪಾಶ್ರೀ ಎಸ್ 599 ವಾಣಿಜ್ಯ ವಿಭಾಗ


ಅಮೂಲ್ಯ ಕಾಮತ್ 599 ವಿಜ್ಞಾನ ವಿಭಾಗ

## 7 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು

### ಲಾರಿ ಡ್ರೈವರ್ ಮಗಳು ರಾಜ್ಯಕ್ಕೆ ಪ್ರಥಮ

ದ್ವಿತೀಯ ಪಿಯು ಫಲಿತಾಂಶದಲ್ಲಿ ವಿಜಯನಗರ ಜಿಲ್ಲೆ ಮೊದಲ ಎರಡು ರ್‍ಯಾಂಕ್‌ಗಳನ್ನು ಪಡೆದುಕೊಂಡಿದೆ. ಕೊಟ್ಟೂರಿನ ಇಂದು ಪಿಯು ಕಾಲೇಜು ಮತ್ತೆ ಮೊದಲ ಸ್ಥಾನ ಪಡೆದಿದ್ದು, ಸತತವಾಗಿ ಇಲ್ಲಿನ ವಿದ್ಯಾರ್ಥಿಗಳು ಅಂಕಗಳಿಕೆಯಲ್ಲಿ ಮೇಲುಗೈ ಸಾಧಿಸಿದ್ದಾರೆ. ಇಂದು ಕಾಲೇಜಿನ ವಿದ್ಯಾರ್ಥಿನಿ ಸಂಜನಾಬಾಯಿ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. 600ಕ್ಕೆ 597 ಅಂಕ ಪಡೆದ ಸಂಜನಾಬಾಯಿ ಕಲಾ ವಿಭಾದಲ್ಲಿ ಮೊದಲ ಸ್ಥಾನ ಪಡೆದಿದ್ದು, ಇವರ ತಂದೆ ರಾಮನಾಯ್ಕ ಲಾರಿ ಡ್ರೈವರ್ ಆಗಿದ್ದಾರೆ. ಹೊಸಪೇಟೆ ತಾಲ್ಲೂಕಿನ ಗುಂಡಾ ಸ್ಟೇಷನ್ ಗ್ರಾಮದ ನಿವಾಸಿಯಾಗಿದ್ದಾರೆ. ಜಿಲ್ಲೆಯ ಹಡಗಲಿ ತಾಲ್ಲೂಕಿನ ಇಟಗಿಯ ಪಂಚಮಸಾಲಿ ಪಿಯು ಕಾಲೇಜಿನ ವಿದ್ಯಾರ್ಥಿನಿ ನಿರ್ಮಲಾ 600ಕ್ಕೆ 596 ಅಂಕಗಳಿಸಿ, ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

### ದ್ವಿತೀಯ ಪಿಯು ಪರೀಕ್ಷೆ–2 ರ ನೋಂದಣಿ ಪ್ರಾರಂಭ

ಶುಲ್ಕ ಪಾವತಿ ಮತ್ತು ಅರ್ಜಿ ನಮೂನೆಗಳನ್ನು ದಂಡವಿಲ್ಲದೆ ಡಿಡಿಪಿಯು ಕಚೇರಿಗೆ ಸಲ್ಲಿಸಲು ಕೊನೆಯ ದಿ.ಏಪ್ರಿಲ್ 16 ಆಗಿದೆ. ತಡವಾದ ಶುಲ್ಕದೊಂದಿಗೆ, ನೋಂದಣಿ ವಿಂಡೋ ಏಪ್ರಿಲ್ 16 ಮತ್ತು ಏಪ್ರಿಲ್ 17 ರವರೆಗೆ ತೆರೆದಿರುತ್ತದೆ, ಅಂತಿಮ ಸಲ್ಲಿಕೆ ದಿನಾಂಕ ಏಪ್ರಿಲ್ 19 ಆಗಿದೆ. ವಿದ್ಯಾರ್ಥಿಗಳು ಇಂದಿನಿಂದ ಏಪ್ರಿಲ್ 17ರ ನಡುವೆ ತಮ್ಮ ಕಾಲೇಜುಗಳಲ್ಲಿ ಪೂರಕ ಪರೀಕ್ಷೆಗೆ ನೋಂದಾಯಿಸಿಕೊಳ್ಳಬಹುದು. 2023 ರ ಅಥವಾ ನಂತರದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದವರು ತಮ್ಮ ಫಲಿತಾಂಶ ಆಧಾರದ ಮೇಲೆ ನೋಂದಾಯಿಸಿಕೊಳ್ಳಬಹುದು, 2022 ರಲ್ಲಿ ಅಥವಾ ಅದಕ್ಕಿಂತ ಮೊದಲು ಅನುತ್ತೀರ್ಣರಾದವರು ನೋಂದಣಿಗಾಗಿ KSEAB ಒದಗಿಸಿದ MCA ಅಗತ್ಯವಿರುತ್ತದೆ.

| ಶೇ.100ರಷ್ಟು ಫಲಿತಾಂಶ | |
|---|---|
| ಸರ್ಕಾರಿ ಪದವಿ ಪೂರ್ವ ಕಾಲೇಜು | 13 |
| ಅನುದಾನಿತ ಪದವಿಪೂರ್ವ ಕಾಲೇಜು | 3 |
| ಅನುದಾನರಹಿತ ಪದವಿಪೂರ್ವ ಕಾಲೇಜು | 103 |
| ವಿಭಜಿತ ಪದವಿಪೂರ್ವ ಕಾಲೇಜು | 0 |
| ವಸತಿ ಶಾಲಾ ಪದವಿಪೂರ್ವ ಕಾಲೇಜು | 15 |
| ಒಟ್ಟು | 134 |

ದ್ವಿತೀಯ ಪಿಯುಸಿ ಪರೀಕ್ಷೆ–1 ರ ಫಲಿತಾಂಶಗಳನ್ನು ಆಯಾ ಕಾಲೇಜುಗಳಿಗೆ ಕೆಎಸ್‌ಇಎಬಿ ಪಿಯು ಪರೀಕ್ಷಾ ಪೋರ್ಟಲ್ ಮೂಲಕ ಲಭ್ಯವಾಗುವಂತೆ ಮಾಡಲಾಗಿದೆ. ವಿದ್ಯಾರ್ಥಿಗಳು ತಮ್ಮ ಉತ್ತರ ಪತ್ರಿಕೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಏಪ್ರಿಲ್ 8 ರಿಂದ ಏಪ್ರಿಲ್ 13 ರವರೆಗೆ ಅರ್ಜಿ ಸಲ್ಲಿಸಬಹುದು.




### ಮರು ಮೌಲ್ಯಮಾಪನ ಮತ್ತು ಮರು ಎಣಿಕೆ

ಈ ಪ್ರತಿಗಳನ್ನು ಏಪ್ರಿಲ್ 12 ರಿಂದ ಏಪ್ರಿಲ್ 16, 2025 ರ ನಡುವೆ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮರುಮೌಲ್ಯಮಾಪನ ಮತ್ತು ಮರು ಎಣಿಕೆಗೆ ಅರ್ಜಿ ಸಲ್ಲಿಸುವ ಸಮಯ ಏಪ್ರಿಲ್ 12 ರಿಂದ ಏಪ್ರಿಲ್ 17 ರವರೆಗೆ ತೆರೆದಿರುತ್ತದೆ .ಸ್ಕ್ಯಾನ್ ಮಾಡಿದ ಪ್ರತಿಯನ್ನು ಪಡೆಯಲು ಪ್ರತಿ ವಿಷಯಕ್ಕೆ 530 ರೂ. ಮರು ಮೌಲ್ಯಮಾಪನಕ್ಕೆ ಪ್ರತಿ ವಿಷಯಕ್ಕೆ 1,670 ರೂ ಪಾವತಿಸಬೇಕು. ಮರು ಎಣಿಕೆಯನ್ನು ಉಚಿತವಾಗಿ ಮಾಡಲಾಗುತ್ತದೆ. ಪರೀಕ್ಷೆ–2 ಕ್ಕೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಮರು ಮೌಲ್ಯಮಾಪನ ಫಲಿತಾಂಶಗಳಿಗಾಗಿ ಕಾಯಬೇಕಾಗಿಲ್ಲ. ಪರೀಕ್ಷೆ–1 ಕ್ಕೆ ಮರು ಮೌಲ್ಯಮಾಪನ ಅಂಕಗಳನ್ನು ಅಂತಿಮವೆಂದು ಪರಿಗಣಿಸಲಾಗುತ್ತದೆ ಮತ್ತು ಮರು ಮೌಲ್ಯಮಾಪನ ಸಮಿತಿಯ ನಿರ್ಧಾರವು ಬದ್ಧವಾಗಿರುತ್ತದೆ.





# ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಡಿಕೆಶಿ ಬದಲಾದರೆ ಕಾಂಗ್ರೆಸ್ ಹೈಕಮಾಂಡ್ ಆಯ್ಕೆ

• ಉದಯವಾಹಿನಿ, ಬೆಂಗಳೂರು



ಕರ್ನಾಟಕ ಕಾಂಗ್ರೆಸ್‌ನಲ್ಲಿ ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ಚರ್ಚೆ ವೇಗ ಪಡೆದುಕೊಳ್ಳುತ್ತಿದೆ. ಈಗಾಗಲೇ ಪಕ್ಷದಲ್ಲಿ ಎರಡು ಬಣಗಳಾಗಿದ್ದು, ಸಿದ್ದರಾಮಯ್ಯ ಆಪ್ತ ಬಣ ಡಿಕೆ ಶಿವಕುಮಾರ್ ಬದಲಾವಣೆಗೆ ಪಟ್ಟು ಹಿಡಿದಿದೆ. ದೆಹಲಿಯಲ್ಲಿ ಹಲವು ಸುತ್ತುಗಳನ್ನು ಹೊಡೆದಿರುವ ಸಿದ್ದು ಆಪ್ತರು ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ಮಾಡುವಂತೆ ಹೈಕಮಾಂಡ್ ಬಳಿ ಬೇಡಿಕೆ ಇಟ್ಟಿದ್ದಾರೆ. ಆದರೆ ಡಿಕೆಶಿ ಬದಲಿಗೆ ಯಾರಿಗೆ ಕೆಪಿಸಿಸಿ ಪಟ್ಟ ನೀಡಬಹುದು ಎಂಬ ಪ್ರಶ್ನೆಗೆ ಉತ್ತರ ಕುತೂಹಲವಾಗಿದೆ.

ಹೈಕಮಾಂಡ್ ನಾಯಕರ ಬಳಿ ಕೆಲವು ಹೆಸರುಗಳು ಇದ್ದು, ಈ ಪೈಕಿ ಈಶ್ವರ್ ಖಂಡ್ರೆ ಹೆಸರು ಮುಂಚೂಣಿಯಲ್ಲಿದೆ.



ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಸತೀಶ್ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ಆದರೆ ಅವರಿಗೆ ಪಟ್ಟ ನೀಡಲು ಡಿಕೆ ಶಿವಕುಮಾರ್ ಬಣ ಸಮ್ಮತಿ ಸೂಚಿಸುವುದು ಸಾಧ್ಯವಿಲ್ಲ. ಹೀಗಾಗಿ ಒಂದು ವೇಳೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ಮಾಡುವುದಾದರೆ, ಎರಡೂ ಬಣಗಳನ್ನ ಸರಿದೂಗಿಸಿಕೊಂಡು ಹೋಗುವ ನಾಯಕನಿಗೆ ಮಣೆ ಹಾಕಲು ತೀರ್ಮಾನ ಮಾಡಲಾಗಿದೆ.

ಈ ನಿಟ್ಟಿನಲ್ಲಿ ಸಚಿವ ಈಶ್ವರ್ ಖಂಡ್ರೆಗೆ ಕೆಪಿಸಿಸಿ ಅಧ್ಯಕ್ಷ ಪಟ್ಟ ಕಟ್ಟುವ ಸಾಧ್ಯತೆ ಹೆಚ್ಚಾಗಿದೆ.

**ಕೆಸಿವಿ ಭೇಟಿಯಾಗಿದ್ದ ಈಶ್ವರ್ ಖಂಡ್ರೆ**

**ಕುತೂಹಲ ಕೆರಳಿಸಿದ ಕೆಸಿ ವೇಣುಗೋಪಾಲ್ ಭೇಟಿ**

ಈಶ್ವರ್ ಖಂಡ್ರೆ ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿ ( ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ ಕಳೆದ ವಾರ ಪುತ್ರ, ಸಂಸದ ಸಾಗರ್ ಖಂಡ್ರೆ ಜೊತೆ ಕೆಸಿವಿ ಭೇಟಿಯಾಗಿದ್ದ ಈಶ್ವರ್ ಖಂಡ್ರೆ ಕೆಲಹೊತ್ತು ಚರ್ಚಿಸಿದ್ದರು.

**ಈಶ್ವರ್ ಖಂಡ್ರೆಗೆ ಪಟ್ಟ ಕಟ್ಟುವ ಹಿಂದೆ ಹೈಕಮಾಂಡ್ ಲೆಕ್ಕಾಚಾರ ಏನೇನು**

- ಬಹುಸಂಖ್ಯಾತ ವೀರಶೈವ ಲಿಂಗಾಯತ ಸಮಾಜದ ಮತಗಳನ್ನ ಸೆಳೆಯಬಹುದು
- ಸಮುದಾಯದ ಹಿಡಿತ ಸಾಧಿಸಿರುವ ಈಶ್ವರ್ ಖಂಡ್ರೆ
- ಅಖಿಲ ಭಾರತ ವೀರಶೈವ ಮಹಾಸಭಾ ಕಾರ್ಯಾಧ್ಯಕ್ಷರಾಗಿದ್ದಾರೆ
- ಅವರ ತಂದೆ ಭೀಮಣ್ಣ ಖಂಡ್ರೆಗೂ ಒಳ್ಳೆಯ ಹೆಸರು
- ಪಕ್ಷ ನಿಷ್ಠೆ, ಹಿರಿತನ ಯಾವುದೇ ವಿವಾದ ಇಲ್ಲ
- ಬಣ ರಾಜಕೀಯದಿಂದ ದೂರ, ಎರಡೂ ಬಣಗಳ ವಿಶ್ವಾಸ ಸಾಧಿಸಿದ್ದಾರೆ
- ಪಕ್ಷ ಸಂಘಟನೆಯ ಅನುಭವ. ಈಗಾಗಲೇ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡಿದ ಅನುಭವ
- ಕಾರ್ಯಕರ್ತರು, ಮುಖಂಡರ ಜೊತೆ ಉತ್ತಮ ಒಡನಾಟ, ಫೇಸ್ ವ್ಯಾಲ್ಯೂ ಇರುವ ನಾಯಕ

# ಬರೆಯ ಮೇಲೆ ಬರೆ: ಏ.8ರಿಂದಲೇ ಎಲ್‌ಪಿಜಿ ದರ 50 ರೂ. ಹೆಚ್ಚಳ

■ ರಾಜ್ಯದ ಬಳಿಕ ಬೆಲೆಯೇರಿಕೆ ಈಗ ಕೇಂದ್ರ ಸರ್ಕಾರದ ಸರದಿ! ■ ಅಗತ್ಯವಸ್ತುಗಳ ಬೆಲೆ ಏರಿಕೆಯೊಂದಿಗೆ ಜೀವನ ವೆಚ್ಚ ಗಗನಕ್ಕೆ

• ಉದಯವಾಹಿನಿ, ಬೆಂಗಳೂರು

ಹೊಸ ಆರ್ಥಿಕ ವರ್ಷದ ಆರಂಭದಲ್ಲೇ ಒಂದರ ನಂತರ ಒಂದರಂತೆ ಅಗತ್ಯವಸ್ತುಗಳ ಬೆಲೆ ಏರಿಕೆಯೊಂದಿಗೆ ಜೀವನ ವೆಚ್ಚ ಗಗನಕ್ಕೇರಿದೆ. ಜನರಿಗೆ ಶಾಕ್ ಮೇಲೆ ಶಾಕ್ ತಟ್ಟುತ್ತಿದೆ. ಕೇಂದ್ರ ಸರಕಾರ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ದರವನ್ನು 50 ರೂ. ಏರಿಕೆ ಮಾಡಿದೆ. ಜನಸಾಮಾನ್ಯರ ಜತೆಗೆ ಬಡಜನತೆಗೆ ರಿಯಾಯಿತಿ ದರದಲ್ಲಿ ಒದಗಿಸುವ ಉಜ್ವಲಾ ಯೋಜನೆ ಸಿಲಿಂಡರ್‌ಗೂ ದರವನ್ನೂ ಇಷ್ಟೇ ಪ್ರಮಾಣದಲ್ಲಿ ಏರಿಕೆ ಮಾಡಲಾಗಿದೆ. ಏಪ್ರಿಲ್ 8 ರಿಂದಲೇ ಪರಿಷ್ಕೃತ ದರ ಜಾರಿಯಾಗಿದೆ.

ವಿಶೇಷವೆಂದರೆ, 2025ರ ಏಪ್ರಿಲ್ 1 ರಿಂದ ವಾಣಿಜ್ಯ ಬಳಕೆ ಸಿಲಿಂಡರ್ ದರವನ್ನು 40 ರೂ. ಇಳಿಸಿದ್ದ ಸರಕಾರ, ಮನೆ ಬಳಕೆ ಸಿಲಿಂಡರ್ ಬೆಲೆಯನ್ನು ಏರಿಸಿದೆ. ಪೆಟ್ರೋಲಿಯಂ ಖಾತೆ ಸಚಿವ ಹರ್ದೀಪ್ ಸಿಂಗ್ ಪುರಿ ಬೆಲೆ ಏರಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಭಾರತವು ಎಲ್‌ಪಿಜಿಗಾಗಿ ಆಮದನ್ನು ಅವಲಂಬಿಸಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ಎಲ್‌ಪಿಜಿ ದರ 2023ರ ಜುಲೈಗೆ ಹೋಲಿಸಿದರೆ 63% ಹೆಚ್ಚಿದೆ. ಪ್ರತಿ ಸಿಲಿಂಡರ್‌ಗೆ 1,028.50 ರೂ. ವೆಚ್ಚವಾಗುತ್ತಿದೆ. ತೈಲ ಮಾರಾಟ ಸಂಸ್ಥೆಗಳು ಹೆಚ್ಚುವರಿ ವೆಚ್ಚವನ್ನು ಭರಿಸಿ ನಷ್ಟದಲ್ಲಿವೆ. ಇದನ್ನು ಸರಿದೂಗಿಸಲು ಬೆಲೆ ಹೆಚ್ಚಿಸಲಾಗಿದೆ ಎಂದು ಪುರಿ ಹೇಳಿದ್ದಾರೆ.




**ಜನರಿಗೆ ಶಾಕ್ ಮೇಲೆ ಶಾಕ್**

| ವಾರದಲ್ಲಿ ಏನೆಲ್ಲಾ ದುಬಾರಿ | |
|---|---|
| ಹಾಲು | ಲೀಟರ್‌ಗೆ 4 ರೂ. |
| ಮೊಸರು | ಲೀಟರ್‌ಗೆ 4 ರೂ. |
| ಡೀಸೆಲ್ | ಲೀಟರ್‌ಗೆ 2 ರೂ. |
| ವಿದ್ಯುತ್ ದರ | 25 ರೂ. |
| ಸಿಲಿಂಡರ್ | 50 ರೂ. |
| ಟೋಲ್ | 5% |
| ಬಿಬಿಎಂಪಿ ಕಸದ ಶುಲ್ಕ | ಕನಿಷ್ಠ 50 ರೂ./ತಿಂಗಳಿಗೆ |

ಕಳೆದ ಒಂದು ವಾರದಿಂದ ಈಚೆಗೆ ರಾಜ್ಯದಲ್ಲಿ ಹಾಲು, ಮೊಸರು, ವಿದ್ಯುತ್ ದರ, ಡೀಸೆಲ್ ದರ, ಹೆದ್ದಾರಿ ಟೋಲ್, ಕಸದ ಶುಲ್ಕ ಏರಿಕೆಯ ಬಿಸಿ ಜನರಿಗೆ ತಟ್ಟಿದೆ. ಇದರ ಬೆನ್ನಲ್ಲೇ ಸಿಲಿಂಡರ್ ಶಾಕ್ ಕೂಡಾ ತಟ್ಟಿದೆ.

| ಸಿಲಿಂಡರ್ ಬೆಲೆ (14.2 ಕೆ.ಜಿ ) | |
|---|---|
| ಸಾಮಾನ್ಯ | 803 ರೂ. ನಿಂದ 853 ರೂ. |
| ಉಜ್ವಲಾ | 503 ರೂ.ನಿಂದ 553 ರೂ. |

**ಪೆಟ್ರೋಲ್, ಡೀಸೆಲ್‌ಗೆ ತೆರಿಗೆ ಏರಿಕೆ**

ಇದೇ ವೇಳೆ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಸರಕಾರ ಪ್ರತಿ ಲೀಟರ್‌ಗೆ 2 ರೂ. ಏರಿಕೆ ಮಾಡಿದೆ.

ಆದರೆ, ಈ ಏರಿಕೆ ರೀಟೇಲ್ ದರಕ್ಕೆ ಅನ್ವಯವಾಗದ ಕಾರಣ ಗ್ರಾಹಕರು ತುಸು ನಿರಾಳರಾಗುವಂತಾಗಿದೆ. ಜಾಗತಿಕ ಮಟ್ಟದಲ್ಲಿ ಕಚ್ಚಾತೈಲ ದರ ಇಳಿಕೆಯಿಂದಾಗಿ ಪೆಟ್ರೋಲ್, ಡೀಸೆಲ್ ದರವನ್ನು ಲೀಟರ್‌ಗೆ 2 ರೂ. ಇಳಿಸಲು ಅವಕಾಶವಿತ್ತಾದರೂ, ಅಬಕಾರಿ ಸುಂಕ ಏರಿಕೆ ಮೂಲಕ ಈ ಇಳಿಕೆಯನ್ನು ಸರಕಾರ 'ಅಡ್ಜಸ್ಟ್' ಮಾಡಿದೆ. ಈ ಏರಿಕೆಯೊಂದಿಗೆ ವಾರ್ಷಿಕ 32,000 ಕೋಟಿ ರೂ. ಆದಾಯ ಗಳಿಸುವ ಅಂದಾಜನ್ನು ಸಚಿವರು ವ್ಯಕ್ತಪಡಿಸಿದ್ದಾರೆ.

**ದೆಹಲಿ ಕಚೇರಿ ಎದುರು ಪ್ರತಿಭಟನೆ ಮಾಡಿ**

ಗ್ಯಾಸ್ ಸಿಲಿಂಡರ್ 50ರೂ ಹೆಚ್ಚಾಗಿದೆ ಇದು ಹೊರೆ ಆಗಲ್ಲ. ಅಷ್ಟಕ್ಕೂ ಬೆಲೆ ಏರಿಕೆ ಆದರೆ ಕಾಂಗ್ರೆಸ್‌ನವರು ದೆಹಲಿ ಕಚೇರಿ ಎದುರು ಪ್ರತಿಭಟನೆ ಮಾಡಿ. ನಮಗೆ ಹೇಳೋಕೆ ಬರ್ಬೇಡಿ. ಬಿಜೆಪಿ ಆಡಳಿತದಲ್ಲಿದ್ದಾಗ 40%ಹಣ ಲೂಟಿ ಮಾಡ್ತಿದ್ದಾರೆ. ಯಾವುದೇ ತೆರಿಗೆ ಹಾಕದೇ ಗ್ಯಾರಂಟಿಗಳನ್ನ ಕೊಟ್ಟು ಕರ್ನಾಟಕವನ್ನ ದೇವಲೋಕ ಮಾಡ್ತೀವಿ ಅಂದಿದ್ರು. ಐದು ಗ್ಯಾರಂಟಿಗೆ ಎಷ್ಟು ಬೇಕು ಅಷ್ಟು ತೆರಿಗೆ ಹಾಕಿದ್ದಾರೆ. ಬೆಲೆ ಏರಿಕೆ ಜನ ತಾಳಕ್ಕಾಗ್ತಿಲ್ಲ ಅದಕ್ಕೆ 2ಸಾವಿರ ಕೊಟ್ಟು ಜನರಿಗೆ ಸಮಾಧಾನ ಮಾಡ್ತಿದ್ದೀವಿ ಅಂತ ಡಿಕೆ ಶಿವಕುಮಾರ್ ಹೇಳಿದ್ದಾರೆ ಎಂದು ವಿಪಕ್ಷನಾಯಕ ಆರ್. ಅಶೋಕ್ ತಿರುಗೇಟು ನೀಡಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.99 ₹/L | ಬಂಗಾರ: ₹8,973/Gram24ct ₹8,225/Gram22ct | ಬೆಳ್ಳಿ: ₹94.00/Gram

# ಅಹಮದಾಬಾದ್ ಎಐಸಿಸಿ ಸಭೆಗೆ ರಾಜ್ಯದ ಕೈ ನಾಯಕರು ದೌಡು

## ಜಿಲ್ಲಾಧ್ಯಕ್ಷರ ಜೊತೆ ಸಮಾಲೋಚಿಸಲು ಸಹ ಎಐಸಿಸಿ ಸಭೆಯಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳಲಾಗುತ್ತಿದೆ

• **ಉದಯವಾಹಿನಿ, ಬೆಂಗಳೂರು**

ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ರಾಷ್ಟ್ರೀಯ ಸಮ್ಮೇಳನ ಇದೇ ಏಪ್ರಿಲ್ 8 – 9ರಂದು ಅಹಮದಾಬಾದ್‌ನಲ್ಲಿ ಆಯೋಜನೆಗೊಂಡಿದ್ದು, 64 ವರ್ಷಗಳ ಬಳಿಕ ಗುಜರಾತ್‌ನಲ್ಲಿ ಈ ಸಮ್ಮೇಳನ ನಡೆಯುತ್ತಿರುವುದು ವಿಶೇಷವಾಗಿದೆ. ಬುಧವಾರ ಮತ್ತು ಗುರುವಾರ ನಡೆಯಲಿರುವ ನಿರ್ಣಾಯಕ ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಸಭೆ ಕಾಂಗ್ರೆಸ್ ರಾಜಕೀಯ ದಿಕ್ಸೂಚಿ ಬದಲಾಯಿಸುವ ಕ್ಷಣವಾಗಿದೆ, ಈ ಸಭೆಗೆ ಕರ್ನಾಟಕ ಹಲವು ಪ್ರಮುಖ ನಾಯಕರು ಹಾಜರಾಗಲಿದ್ದಾರೆ.

ಇದು ಕೇವಲ ಮತ್ತೊಂದು ಕಾರ್ಯತಂತ್ರದ ಸಭೆ ಎಂದು ನಿರೀಕ್ಷಿಸಲಾಗುವುದಿಲ್ಲ ಎಂದು ಪಕ್ಷದ ಒಳಗಿನವರು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಪುನರ್‌ರಚಿಸುವತ್ತ ಪ್ರಮುಖ ಹೆಜ್ಜೆಯಾಗಲಿದೆ. ಸಂಘಟನೆಯನ್ನು ವಿಕೇಂದ್ರೀಕರಿಸಲು ಗಂಭೀರ ಪ್ರಯತ್ನ ನಡೆಯುತ್ತಿದೆ ಎಂದು


ಉದಯವಾಹಿನಿ ಚಿತ್ರ

**ವಿಧಾನಸಭೆ ಲೋಕಸಭೆ ಅಭ್ಯರ್ಥಿಗಳ ಆಯ್ಕೆ**

ಎಐಸಿಸಿಯ ಹಿರಿಯ ಪದಾಧಿಕಾರಿಯೊಬ್ಬರು ಹೇಳಿದರು. ಜಿಲ್ಲಾಧ್ಯಕ್ಷರ ಜೊತೆ ಸಮಾಲೋಚಿಸಲು ಸಹ ಎಐಸಿಸಿ ಸಭೆಯಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳಲಾಗುತ್ತಿದೆ. ಸ್ಥಳೀಯ ನಾಯಕತ್ವವನ್ನು ಸಬಲೀಕರಣಗೊಳಿಸುವುದು, ವಿಧಾನಸಭೆ ಮತ್ತು ಲೋಕಸಭೆ ಅಭ್ಯರ್ಥಿಗಳ ಆಯ್ಕೆಯಲ್ಲಿ ಹೆಚ್ಚು ಪಾಲ್ಗೊಳ್ಳುವಂತೆ ಮಾಡುವುದಾಗಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಮತ್ತು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಹಾಗೂ ಸಚಿವರು ಸೇರಿದಂತೆ ಕರ್ನಾಟಕದಿಂದ ಸುಮಾರು 140–150

**ಕೆಪಿಸಿಸಿ ಕಾರ್ಯಕಾರಿ ಅಧ್ಯಕ್ಷ ಸಲೀಮ್ ಅಹ್ಮದ್ ಮಾತನಾಡಿ, ಕಾಂಗ್ರೆಸ್ ಪುನರ್‌ರಚನೆ, ಸುಧಾರಣೆ ಮತ್ತು ಬಲಪಡಿಸುವ ಬಗ್ಗೆ ಗಂಭೀರ ಒತ್ತಡವಿದೆ ಎಂದು ಹೇಳಿದರು. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಸೇರಿದಂತೆ ಪ್ರಮುಖ ತಂಡವು ಬುಧವಾರ ಬೆಳಿಗ್ಗೆ ಕರ್ನಾಟಕ ನಿಯೋಗವನ್ನು ಮುನ್ನಡೆಸಲಿದೆ ಎಂದು ಅವರು ಹೇಳಿದರು.**

ನಾಯಕರು ಎಐಸಿಸಿ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ.

ಇದು ಹೊಸ ಕಾಂಗ್ರೆಸ್‌ನ ಆರಂಭ ಎಂದು ಹಿರಿಯ ನಾಯಕರೊಬ್ಬರು ಬೆಳಗಾವಿಯಲ್ಲಿ ನಡೆದ ಎಐಸಿಸಿ ಅಧಿವೇಶನದಲ್ಲಿ ಅಂಗೀಕರಿಸಲಾದ ಐತಿಹಾಸಿಕ ನಿರ್ಣಯವನ್ನು ಉಲ್ಲೇಖಿಸಿ ಹೇಳಿದರು, ಅಲ್ಲಿ ಪಕ್ಷವು ತನ್ನನ್ನು ತಾನು ಸುಧಾರಿಸಿಕೊಳ್ಳುವುದಾಗಿ ಮತ್ತು ಪುನರ್‌ರಚಿಸುವುದಾಗಿ ಭರವಸೆ ನೀಡಿತು.

ಮುಂದಿನ ವರ್ಷ ನವೆಂಬರ್‌ನಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿರುವ ಹಿನ್ನಲೆಯಲ್ಲಿ, ಕಾಂಗ್ರೆಸ್ ಈಗಾಗಲೇ ಐದು ಬಿಜೆಪಿ ಆಡಳಿತಗಳನ್ನು ಕಂಡ ಗುಜರಾತಿನಲ್ಲಿ ಸರ್ಕಾರ ರಚಿಸುವುದಾಗಿ ಹೇಳಿಕೊಳ್ಳುತ್ತಿದೆ.

ಗುಜರಾತ್‌ನಲ್ಲಿ ಕಾಂಗ್ರೆಸ್ ಪುನರಾಗಮನಕ್ಕೆ ನಾವು ತಯಾರಿ ನಡೆಸುತ್ತಿದ್ದೇವೆ ಎಂದು ಹಿರಿಯ ರಾಷ್ಟ್ರೀಯ ನಾಯಕರೊಬ್ಬರು ಘೋಷಿಸಿದರು.

ಕೆಲವು ಕೆಪಿಸಿಸಿ ಸಂಘಟಕರು ಈಗಾಗಲೇ ಸಿದ್ಧತೆಗಳನ್ನು ಮೇಲ್ವಿಚಾರಣೆ ಮಾಡಲು ಅಹಮದಾಬಾದ್‌ಗೆ ತೆರಳುತ್ತಿದ್ದರೆ, ಹಲವಾರು ಉನ್ನತ ಸಚಿವರು ಸಂಜೆ ಹೊರಡಲಿದ್ದಾರೆ, ಉಳಿದ ಹಿರಿಯ ನಾಯಕರು ಬುಧವಾರ ಹೊರಡಲಿದ್ದಾರೆ. ಬಹುತೇಕ ಎಲ್ಲಾ ಉನ್ನತ ಕಾರ್ಯಕರ್ತರು ಅಹಮದಾಬಾದ್‌ಗೆ ಆಗಮಿಸಲಿದ್ದಾರೆ, ಕಾಂಗ್ರೆಸ್ ಪುನರುಜ್ಜೀವನದ ಕಥೆಯಲ್ಲಿ ಯಾವ ಅಧ್ಯಾಯವು ನಿರ್ಣಾಯಕವಾಗಲಿದೆ ಎಂಬುದರ ಮೇಲೆ ಈಗ ಎಲ್ಲರ ದೃಷ್ಟಿ ನೆಟ್ಟಿದೆ.

# ಭರತನಾಟ್ಯ ಪ್ರದರ್ಶನ

• **ಉದಯವಾಹಿನಿ, ಬೆಂಗಳೂರು**



ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀ ಪಾದಂಗಳವರ ಆದೇಶಾನುಸಾರ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಏಪ್ರಿಲ್ 10, ಗುರುವಾರ ಸಂಜೆ 5–30ಕ್ಕೆ ವಿದುಷಿ ಶ್ರೀಮತಿ ಭಾವನಾ ಗಣೇಶ್ ಮತ್ತು ವಿದ್ವಾನ್ ಶ್ರೀ ಎಂ.ಡಿ. ಗಣೇಶ್ ದಂಪತಿಗಳು ತಮ್ಮದೇ ಆದ ಶ್ರೀ ಗಣೇಶ ನೃತ್ಯಾಲಯ ಸಂಗೀತ ಮತ್ತು ನೃತ್ಯ ಶಾಲೆಯ ವಿದ್ಯಾರ್ಥಿಗಳೊಂದಿಗೆ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು–41

# ಅಸುರಕ್ಷಿತ ಬಾಟಲ್ ನೀರು ಪೂರೈಕೆದಾರರ ವಿರುದ್ಧ ಕ್ರಮ: ದಿನೇಶ್ ಗುಂಡೂರಾವ್

• **ಉದಯವಾಹಿನಿ, ಬೆಂಗಳೂರು**

ಮಿನರಲ್ ವಾಟರ್ ಬಾಟಲ್‌ಗಳಲ್ಲಿಯೂ ಬ್ಯಾಕ್ಟೀರಿಯಾ ಪತ್ತೆಯಾಗಿದ್ದು, ಅಸುರಕ್ಷಿತ ಮತ್ತು ಕಳಪೆ ಗುಣಮಟ್ಟದ ಬಾಟಲ್ ಕುಡಿಯುವ ನೀರು ಪೂರೈಸುವ ಕಂಪನಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂ ರಾವ್ ಮಂಗಳವಾರ ಎಚ್ಚರಿಸಿದ್ದಾರೆ.

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಇತ್ತೀಚೆಗೆ ನಡೆಸಿದ ಸಮೀಕ್ಷೆಯ ಪ್ರಕಾರ, ಪರೀಕ್ಷಿಸಲಾದ 255 ಬಾಟಲ್ ನೀರಿನ ಮಾದರಿಗಳಲ್ಲಿ 72 ಬಾಟಲ್‌ಗಳು ಮಾತ್ರ ಸುರಕ್ಷಿತವಾಗಿದ್ದು, ಉಳಿದ ಬಾಟಲಿಯಲ್ಲಿ ಬ್ಯಾಕ್ಟೀರಿಯಾ ಪತ್ತೆಯಾಗಿವೆ. ವಾಟರ್ ಬಾಟಲ್ ಆರೋಗ್ಯಕ್ಕೆ ಹಾನಿಕರ ಎಂದು ತಿಳಿದುಬಂದಿದೆ. ನಗರದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತಾಡಿದ ದಿನೇಶ್ ಗುಂಡೂರಾವ್? ಅವರು, ವಿಶೇಷ ಅಭಿಯಾನದ ಭಾಗವಾಗಿ, ಆಹಾರ ಸುರಕ್ಷತೆ ಸಂಬಂಧಿಸಿದಂತೆ ಕಳೆದ ಫೆಬ್ರವರಿಯಲ್ಲಿ 296 ಮಾದರಿಗಳ ವಾಟರ್ ಬಾಟಲ್‌ಗಳ ತಪಾಸಣೆ ಮಾಡಲಾಗಿದೆ.

# ರಾಜ್ಯ ಬಿಜೆಪಿ ಘಟಕಸರ್ಕಾರದ ವಿರುದ್ಧ ನಡೆಸುತ್ತಿರುವ ಹೋರಾಟ

• **ಉದಯವಾಹಿನಿ, ಬೆಂಗಳೂರು**

ರಾಜ್ಯ ಬಿಜೆಪಿ ಘಟಕಸರ್ಕಾರದ ವಿರುದ್ಧ ನಡೆಸುತ್ತಿರುವ ಹೋರಾಟಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಜತೆ ಯಾವುದೇ ಮಾತುಕತೆ ನಡೆದಿಲ್ಲ ಎಂದು ವಿಪಕ್ಷ ನಾಯಕ ಆರ್ ಅಶೋಕ ಹೇಳುತ್ತಾರೆ. ಆದರೆ ತಮ್ಮ ಕಡೆಗಣಿಸಲಾಗುತ್ತಿದೆ ಎಂದು ಜೆಡಿಎಸ್ ನಾಯಕರು ಹೇಳುತ್ತಿದ್ದಾರೆ. ಜೆಡಿಎಸ್ ನಾಯಕರೊಂದಿಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಕುಮಾರಸ್ವಾಮಿಯವರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರುವುದಾಗಿ ಅಶೋಕ ಹೇಳಿದರು. ಪ್ರತಿ ಅಧಿವೇಶನಕ್ಕೆ ಮೊದಲು ತಾವು ಬಿಜೆಪಿ ಮತ್ತು ಜೆಡಿಎಸ್ ಶಾಸಕರ ಜೊತೆ ಸಭೆ ನಡೆಸಿ ಸದನದೊಳಗೆ ಸರ್ಕಾರದ ವಿರುದ್ಧ ಹೋರಾಟದ ರೂಪುರೇಷೆಗಳನ್ನು ಸಿದ್ಧಪಡಿಸುವುದಾಗಿ ಅಶೋಕ ಹೇಳಿದರು.

# ಗ್ಯಾಂಬ್ಲಿಂಗ್ ಅಪ್ಲಿಕೇಶನ್ ಮೂಲಕ ವಂಚನೆ ಹಣವನ್ನು ವರ್ಗಾವಣೆ

• **ಉದಯವಾಹಿನಿ, ಬೆಂಗಳೂರು**

ಹೂಡಿಕೆ ವಂಚನೆ ಪ್ರಕರಣಗಳಲ್ಲಿ ತೊಡಗಿಸಿಕೊಂಡಿರುವ ವಂಚಕರು ಪೊಲೀಸರ ತನಿಖೆಯಿಂದ ತಪ್ಪಿಸಿಕೊಳ್ಳಲು ಆನ್‌ಲೈನ್ ಜೂಜಾಟ ವೇದಿಕೆಗಳ ಮೂಲಕ ಅಕ್ರಮ ಹಣವನ್ನು ಅಕ್ರಮವಾಗಿ ವರ್ಗಾಯಿಸುತ್ತಿದ್ದಾರೆ. ವಂಚಕರು ಮತ್ತು ಆನ್‌ಲೈನ್ ಗ್ಯಾಂಬ್ಲಿಂಗ್ ನಿರ್ವಾಹಕರ ನಡುವೆ ಸಂಪರ್ಕ ಹೆಚ್ಚಿ ಅಕ್ರಮ ವ್ಯವಹಾರಗಳು ನಡೆಯುತ್ತದೆ ಎಂದು ತನಿಖಾಧಿಕಾರಿಗಳು ಹೇಳುತ್ತಾರೆ, ವಂಚಕರು ಹಗರಣದ ಹಣವನ್ನು ಜೂಜಾಟದ ಅಪ್ಲಿಕೇಶನ್‌ಗಳಲ್ಲಿ ಗೆದ್ದವರಿಗೆ ವರ್ಗಾಯಿಸುತ್ತಾರೆ ಎಂದು ಹಿರಿಯ ಸೈಬರ್ ಅಪರಾಧ ಅಧಿಕಾರಿಯೊಬ್ಬರು ಹೇಳುತ್ತಾರೆ. ಪ್ರತಿಯಾಗಿ, ಮುಖ್ಯವಾಗಿ ಮೂಲಕ ಅವರು ಕ್ರಿಪ್ಟೋಕರೆನ್ಸಿಯನ್ನು ಪಡೆಯುತ್ತಾರೆ, ನಗರದಲ್ಲಿ ಇತ್ತೀಚಿನ ಪ್ರಕರಣವೊಂದರಲ್ಲಿ 600–800 ವೈಯಕ್ತಿಕ ಬ್ಯಾಂಕ್ ಖಾತೆಗಳಿಗೆ ಸುಮಾರು 20 ಲಕ್ಷ ರೂಪಾಯಿಗಳನ್ನು ಅಕ್ರಮವಾಗಿ ವರ್ಗಾಯಿಸಲಾಗಿದೆ. ಇಲ್ಲಿ ಪ್ರತಿ ವರ್ಗಾವಣೆ 2 ಸಾವಿರ ರೂಪಾಯಿಗಳಿಂದ 2,500 ರವರೆಗಿನ ಪ್ರತಿಯೊಂದು ವಹಿವಾಟನ್ನು ಒಂದೇ ಡೆಬಿಟ್, ಮಲ್ಟಿಪಲ್ ಕ್ರೆಡಿಟ್‌ಗಳು ಕಾರ್ಯವಿಧಾನವನ್ನು ಬಳಸಿಕೊಂಡು ನಡೆಸಲಾಯಿತು. ಈ ವಹಿವಾಟುಗಳು ನಿಧಿಯ ಮೂಲವನ್ನು ಪತ್ತೆಹಚ್ಚಲು ಕಷ್ಟವಾಗುತ್ತದೆ ಎನ್ನುತ್ತಾರೆ ಅಧಿಕಾರಿಗಳು.

**ಯಾವ ರೀತಿ ವಂಚನೆ:** ಸೈಬರ್ ವಂಚಕರು ಮೊದಲು ನಕಲಿ ಹೂಡಿಕೆ ಯೋಜನೆಗಳೊಂದಿಗೆ ಮುಗ್ಧ ಜನರನ್ನು ವಂಚಿಸುತ್ತಾರೆ. ಈ ಅಪರಾಧಗಳ ಆದಾಯವನ್ನು ಆನ್‌ಲೈನ್ ಜೂಜಾಟದ ಅಪ್ಲಿಕೇಶನ್‌ಗಳು ನಿರ್ವಹಿಸುವ ಪೂಲಿಂಗ್ ಖಾತೆಗಳಿಗೆ ವರ್ಗಾಯಿಸಲಾಗುತ್ತದೆ, ಅಲ್ಲಿಂದ ಅವರನ್ನು ಲಾಂಡರಿಂಗ್‌ನ ಒಂದು ರೂಪವಾಗಿ ಜೂಜುಕೋರರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುತ್ತದೆ. ಗ್ಯಾಂಬ್ಲಿಂಗ್ ಅಪ್ಲಿಕೇಶನ್ ನಿರ್ವಾಹಕರು ಸಾಮಾನ್ಯವಾಗಿ ಕಿಖ ಕೋಡ್‌ಗಳ ಮೂಲಕ ಹಣವನ್ನು ಸ್ವೀಕರಿಸುತ್ತಾರೆ. ಬೆಟ್ಟಿಂಗ್ ವಹಿವಾಟುಗಳಿಗಾಗಿ ಬಳಕೆದಾರರಿಗೆ ವರ್ಚುವಲ್ ಖಾತೆಗಳನ್ನು ನೀಡುತ್ತಾರೆ. ಅನೇಕ ಅಕ್ರಮ ಬೆಟ್ಟಿಂಗ್ ಪ್ಲಾಟ್‌ಫಾರ್ಮ್‌ಗಳು ತಮ್ಮ ಕಾರ್ಯಾಚರಣೆಗಳಿಗಾಗಿ ಮ್ಯೂಲ್ ಖಾತೆಗಳನ್ನು ಅವಲಂಬಿಸಿವೆ. ಇವುಗಳನ್ನು ಈಗ ಬ್ಲಾಕ್ ಮನಿ ಲಾಂಡರಿಂಗ್ ಮಾಡಲು ಬಳಸಲಾಗುತ್ತಿದೆ ಎಂದು ಶಂಕಿಸಲಾಗಿದೆ.

# 2ನೇ ದಿನಕ್ಕೆ ಬಿಜೆಪಿ ಜನಾಕ್ರೋಶ ಯಾತ್ರೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಕಾಂಗ್ರೆಸ್ ಸರ್ಕಾರದ ಬೆಲೆ ಏರಿಕೆ, ಮುಸ್ಲಿಂ ತುಷ್ಟೀಕರಣ, ದಲಿತರ ಹಣ ಲೂಟಿ ವಿರುದ್ಧ ಬಿಜೆಪಿ ನಿನ್ನೆಯಿಂದ ಆರಂಭಿಸಿರುವ ಜನಾಕ್ರೋಶ ಯಾತ್ರೆ ಮಂಡ್ಯ ಹಾಗೂ ಹಾಸನದಲ್ಲಿ ನಡೆದಿದೆ. ಮೈಸೂರಿನಲ್ಲಿ ನಿನ್ನೆ ಜನಾಕ್ರೋಶ ಯಾತ್ರೆ ಆರಂಭವಾಗಿದ್ದು, ಚಾಮರಾಜನಗರದಲ್ಲೂ ಜನಾಕ್ರೋಶ ಯಾತ್ರೆ ಸಾಗಿತ್ತು. 2ನೇ ದಿನ ಜನಾಕ್ರೋಶ ಯಾತ್ರೆ ಮಂಡ್ಯ ಮತ್ತು ಹಾಸನದಲ್ಲಿ ನಡೆದಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕರುಗಳಾದ ಆರ್. ಅಶೋಕ್, ಚಲವಾದಿ ನಾರಾಯಣಸ್ವಾಮಿ ಸೇರಿದಂತೆ ಎಲ್ಲಾ ಪ್ರಮುಖ ನಾಯಕರುಗಳು ಈ ಜಾನಾಕ್ರೋಶ ಯಾತ್ರೆಯಲ್ಲಿ ಭಾಗಿಯಾಗಿದ್ದು, ಬೆಳಗ್ಗೆ ಮಂಡ್ಯದ ಡಿಸಿ ಕಚೇರಿ ಮುಂಭಾಗದ ವಿಶ್ವೇಶ್ವರಯ್ಯ ಪ್ರತಿಮೆಯಿಂದ ಯಾತ್ರೆ ಪ್ರಾರಂಭಗೊಂಡು ಮಂಡ್ಯದ ಪ್ರಮುಖ ರಸ್ತೆಗಳಲ್ಲಿ ಸಾಗಿ ಸಿಲವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಸಭೆ ಮತ್ತು ಪ್ರತಿಭಟನೆಯನ್ನು ಬಿಜೆಪಿ ನಾಯಕರು ನಡೆಸಿದರು. ಮಂಡ್ಯದಲ್ಲಿ ಜನಾಕ್ರೋಶ ಯಾತ್ರೆಯನ್ನು ನಡೆಸಿದ ನಂತರ ಯಾತ್ರೆ ಹಾಸನಕ್ಕೆ ತೆರಳಿದ್ದು, ಹಾಸನದ ಹಳೆ ತಾಲ್ಲೂಕು ಕಚೇರಿಯ ಬಿಎಂ ರಸ್ತೆಯಿಂದ


ಉದಯವಾಹಿನಿ ಚಿತ್ರ

ಜನಾಕ್ರೋಶ ಯಾತ್ರೆ ಆರಂಭಗೊಂಡು ಮಹಾವೀರ ಸರ್ಕಲ್‌ನಲ್ಲಿ ಸಭೆ ಮತ್ತು ಪ್ರತಿಭಟನೆಗಳು ನಡೆದವು.

ಈ ಜನಾಕ್ರೋಶ ಯಾತ್ರೆಯಲ್ಲಿ ಭಾಗಿಯಾಗಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ರಾಜ್ಯ ಸರ್ಕಾರದ ಬೆಲೆ ಏರಿಕೆ ನೀತಿ ವಿರುದ್ಧ ವಾಗ್ದಾಳಿ ನಡೆಸಿ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರ ಮುಸ್ಲಿಂರನ್ನು ಓಲೈಕೆ ಮಾಡುತ್ತಿದೆ.

ದಲಿತರ ಹಣ ಲೂಟಿ ಮಾಡುತ್ತಿದೆ ಎಂದು ಟೀಕಿಸಿದರುಚ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿಯ ಹೋರಾಟ ಮುಂದುವರೆಯಲಿದೆ. ಈ ಸರ್ಕಾರವನ್ನು ಕಿತ್ತೊಗೆಯುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದು ವಿಜಯೇಂದ್ರ ಗುಡುಗಿದರು

# 2.20 ಕೋಟಿ ರೂ. ಎಗರಿಸಿದ್ದ ಮಿತ್ರ ದ್ರೋಹಿ ಸೇರಿ ಇಬ್ಬರ ಸೆರೆ

• **ಉದಯವಾಹಿನಿ, ಬೆಂಗಳೂರು**

ಜಮೀನು ಮಾರಾಟ ಮಾಡಿದ್ದ ಹಣವನ್ನು ತೆಗೆದುಕೊಂಡು ಸ್ನೇಹಿತನ ಕಾರಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಡ್ರಾಪ್ ಪಡೆದು ಕೊಳ್ಳುವಾಗ ಮಾರ್ಗಮಧ್ಯೆ ಎಟಿಎಂಗೆ ಹೋಗುತ್ತಿದ್ದಂತೆ ಇತ್ತ ಕಾರಿನಲ್ಲಿಟ್ಟಿದ್ದ 2.46 ಕೋಟಿ ಹಣದೊಂದಿಗೆ ಪರಾರಿಯಾಗಿದ್ದ ಸ್ನೇಹಿತ ಸೇರಿದಂತೆ ಇಬ್ಬರನ್ನು ಸುಬ್ರಮಣ್ಯಪುರ ಠಾಣೆ ಪೊಲೀಸರು ಬಂಧಿಸಿ 2.20ಕೋಟಿ ಹಣ ಹಾಗೂ ಕೃತ್ಯಕ್ಕೆ ಬಳಸಿದ್ದ 15 ಲಕ್ಷ ಮೌಲ್ಯದ ಎರಡು ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ.

ಕಾರು ಚಾಲಕ ಮಂಜುನಾಥ್ ಮತ್ತು ಈತನ ಸಹಚರ, ಜೆಸಿಬಿ ಚಾಲಕ ನಾಗಿರುವ ಕೃಷ್ಣಕುಮಾರ್ ಬಂಧಿತ ಆರೋಪಿಗಳು. ಬನಶಂಕರಿ 3ನೇ ಹಂತ, ಪಾಪಯ್ಯ ಗಾರ್ಡನ್‌ನಿವಾಸಿ ಸುಕುಮಾರ್ ಮತ್ತು ಕವಿತಾ ಎಂಬುವವರು ರಿಯಲ್ ಎಸ್ಟೇಟ್ ಉದ್ಯಮಿಗಳಾಗಿದ್ದು, ಇವರು ಪಾಲುಗಾರಿಕೆಯಲ್ಲಿ ಜಮೀನು ತೆಗೆದುಕೊಂಡಿದ್ದಾರೆ. ಸುಕುಮಾರ್ ಅವರು 4 ಎಕರೆ 18 ಗುಂಟೆ ಜಮೀನನ್ನು ಮಾರಾಟ


ಉದಯವಾಹಿನಿ ಚಿತ್ರ

ಮಾಡಿದ್ದು, ಕನಕಪುರದ ನೊಂದಣಿ ಕಛೇರಿಯಲ್ಲಿ ನೊಂದಾಯಿಸಿ, 2 ಕೋಟಿ 47 ಲಕ್ಷ ಹಣವನ್ನು ಪಡೆದುಕೊಂಡಿದ್ದಾರೆ.ಆ ಹಣವನ್ನು ಮನೆಗೆ ಸುರಕ್ಷಿತವಾಗಿ ತೆಗೆದುಕೊಂಡು ಹೋಗುವ ಸಲುವಾಗಿ ಈ ಹಿಂದೆ ತಮ ಮನೆಯಲ್ಲಿ ಬಾಡಿಗೆಗಿದ್ದ ಪರಿಚಿತ ಸ್ನೇಹಿತ ಮಂಜುನಾಥ್‌ನ ಕರೆಸಿಕೊಳ್ಳಲು ನಿರ್ಧರಿಸಿದ್ದಾರೆ. ಆಪ್ ಮುಖಾಂತರ ತಮ ಸ್ನೇಹಿತನ ಇನ್ನೋವಾ ಕಾರ್‌ನ್ನು ಬುಕ್ ಮಾಡಿದ್ದಾರೆ. ಸ್ನೇಹಿತ ಮಂಜುನಾಥ್‌ಬಾಡಿಗೆ ಕಾರು ಚಲಾಯಿಸಿಕೊಂಡು ಬಂದಿದ್ದಾನೆ.

ಆ ವೇಳೆ ಜಮೀನು ಮಾರಿದ್ದ ಹಣವನ್ನು ಕಾರಿನಲ್ಲಿಟ್ಟುಕೊಂಡು ಮನೆಗೆ ಹೋಗುತ್ತಿದ್ದಾಗ ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ ಎಟಿಎಂವೊಂದರಲ್ಲಿ ತಮ ಖಾತೆಗೆ 1 ಲಕ್ಷ ಹಣವನ್ನು ಜಮಾಮಾಡಲು ಮಾರ್ಗಮಧ್ಯೆ

**ಪ್ರಕರಣದ ತನಿಖೆ ಕೈಗೊಂಡಿದ್ದ ಪೊಲೀಸರು ಹಲವು ಮಾಹಿತಿಗಳನ್ನು ಕಲೆಹಾಕಿ ಕೆ.ಎಂ ದೊಡ್ಡಿ, ಭಾರತಿನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಂಭಾಗ ಇನ್ನೋವಾ ಕಾರ್ ಚಾಲಕ ಹಾಗೂ ಸಹಚರನನ್ನು ಇನ್ನೋವಾ ಕಾರ್ ಚಾಲಕನ ಮಾಲೀಕತ್ವದ ಮತ್ತೊಂದು ಕಾರ್‌ನ ಸಮೇತ ವಶಕ್ಕೆ ಪಡೆದಿದ್ದಾರೆ.**

ಇಳಿದಿದ್ದಾರೆ. ಅವರು ವಾಪಸ್ ಬರುವಷ್ಟರಲ್ಲಿ ಇತ್ತ ಚಾಲಕನಾದ ಸ್ನೇಹಿತನು ಇನ್ನೋವಾ ಕಾರಿನಲ್ಲಿದ್ದ 2 ಕೋಟಿ 46 ಲಕ್ಷ ಹಣದ ಸಮೇತ ಪರಾರಿಯಾಗಿದ್ದನು. ತಕ್ಷಣ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಆರೋಪಿ ಸ್ನೇಹಿತನು ಕಿಮ್ಸ್ ಆಸ್ಪತ್ರೆ ಮುಂಭಾಗದಲ್ಲಿ ವಾಹನವನ್ನು ನಿಲ್ಲಿಸಿ ತನ್ನ ಸ್ವಂತ ಸ್ವಿಫ್ಟ ಕಾರಿಗೆ ಸಹಚರ ಕೃಷ್ಣಕುಮಾರ್ ಸಹಾಯದಿಂದ ಹಣವನ್ನು ಶಿಫ್ಟ್ ಮಾಡಿಕೊಂಡು, ಇನ್ನೋವಾ ಕಾರ್‌ನ್ನು ಸ್ಥಳದಲ್ಲಿಯೇ ಬಿಟ್ಟು ಪರಾರಿಯಾಗಿದ್ದರು.

# ಯುವ ಕಾಂಗ್ರೆಸ್ ವತಿಯಿಂದ ಎತ್ತಿನಗಾಡಿಯ ಮೂಲಕ ವಿನೂತನ ಪ್ರತಿಭಟನೆ

## ಕೇಂದ್ರ, ಬಿಜೆಪಿ ಸರ್ಕಾರ ಬಡವರು, ಮಧ್ಯಮವರ್ಗದ ಜನರ ಹೊಟ್ಟೆಯ ಮೇಲೆ ಬರೆ ಎಳೆದಿದೆ ನೇರ ಆರೋಪ

• **ಉದಯವಾಹಿನಿ, ಬೆಂಗಳೂರು**

ಫ್ರೀಡಂ ಪಾರ್ಕ್‌ನಲ್ಲಿ ಕೇಂದ್ರ ಬಿಜೆಪಿ ಸರ್ಕಾರ ಪೆಟ್ರೋಲ್, ಡಿಸೇಲ್, ಎಲ್.ಪಿ.ಜಿ.ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಹೆಚ್.ಎಸ್.ಮಂಜುನಾಥ್ ಗೌಡರವರ ನೇತೃತ್ವದಲ್ಲಿ ವಿನೂತನವಾಗಿ ಎತ್ತಿನಗಾಡಿ ಮೂಲಕ ಬೃಹತ್ ಪ್ರತಿಭಟನೆ ಜರುಗಿತು. ಯುವ ಕಾಂಗ್ರೆಸ್ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಹೆಚ್.ಎಸ್.ಮಂಜುನಾಥ್ ಗೌಡ ರವರು ಮಾತನಾಡಿ ಕೆಪಿಸಿಸಿ ಅಧ್ಯಕ್ಷರು, ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ರವರ ಆದೇಶ ಮೇರೆಗೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರ ಮಾರ್ಗದರ್ಶನದಲ್ಲಿ ಕೇಂದ್ರ ಬಿಜೆಪಿ


ಉದಯವಾಹಿನಿ ಚಿತ್ರ

ಸರ್ಕಾರದ ಬೃಹತ್ ಪ್ರತಿಭಟನೆ ಮಾಡಲಾಗುತ್ತಿದೆ.

**ರಾಜ್ಯಾದ್ಯಂತ ಯುವ ಕಾಂಗ್ರೆಸ್ ಹೋರಾಟ**

ಕೇಂದ್ರ ಬಿಜೆಪಿ ಸರ್ಕಾರ ದೇಶದ 140ಜನರ ಹೊಟ್ಟೆಯ ಮೇಲೆ ಬರೆ ಎಳೆದಿದ್ದಾರೆ, ಪೆಟ್ರೋಲ್, ಡಿಸೇಲ್ ಮತ್ತು ಎಲ್.ಪಿ.ಜಿ.ಗ್ಯಾಸ್ ಬೆಲೆ ಏರಿಕೆಯಿಂದ ಬಡ ಮತ್ತು ಮಧ್ಯಮ ವರ್ಗದವರು ಜೀವನ ಸಂಕಷ್ಟಕ್ಕೆ ತಳ್ಳಿದ್ದಾರೆ. ಉದ್ಯೋಗವಿಲ್ಲ, ನಿರುದ್ಯೋಗ ಸಮಸ್ಯೆ ತಲೆದೋರಿದೆ, ಇದರ ಜೊತೆಯಲ್ಲಿ ಬೆಲೆ ಏರಿಕೆಯಿಂದ ಜನರ ಜೀವನ ನಡೆಸುವುದು ಹೇಗೆ.. ಪ್ರಧಾನಿ ನರೇಂದ್ರಮೋದಿರವರ 11 ವರ್ಷಗಳ ದುರಾಡಳಿತದಿಂದ ದೇಶದ ಆರ್ಥಿಕ ಪರಿಸ್ಥಿತಿ ಕುಸಿದಿದೆ, ಅಚ್ಚೇದೀನ್ ಎಂದರೆ ಇದೇನಾ....?

ಜನಸಾಮಾನ್ಯರ ನೋವಿಗೆ, ಸ್ಪಂದಿಸುವ ಕಾರ್ಯ ಯುವ ಕಾಂಗ್ರೆಸ್ ಮಾಡುತ್ತಿದೆ, ಕೇಂದ್ರ ಬಿಜೆಪಿ ಸರ್ಕಾರ ಬೆಲೆ ಏರಿಕೆ ಖಂಡಿಸಿ ರಾಜ್ಯಾದ್ಯಂತ ಯುವ ಕಾಂಗ್ರೆಸ್ ಹೋರಾಟ ಮಾಡಲಿದೆ ಎಂದು ಹೇಳಿದರು.

ರಾಜ್ಯ ಯುವ ಕಾಂಗ್ರೆಸ್ ಉಪಾಧ್ಯಕ್ಷೆ ದಿವ್ಯಾ, ಬೆಂಗಳೂರು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗೌಡ, ಕೇಂದ್ರ ಜಿಲ್ಲಾ ಯುವ ಕಾಂಗ್ರೆಸ್ ರಂಜೀತ್, ದಕ್ಷಿಣ ಜಿಲ್ಲಾ ಮೌನೀಶ್ ರೆಡ್ಡಿ, ರಾಜ್ಯ ಪ್ರದಾನ ಕಾರ್ಯದರ್ಶಿಗಳಾದ ಚೇತನ್ ಕುಮಾರ್, ಶಂಶಾಕ್ ಗೌಡ ರವರು ವಿಧಾನಸಭಾ ಕ್ಷೇತ್ರ ಮತ್ತು ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷರು, ಪದಾಧಿಕಾರಿಗಳು ಪಾಲ್ಗೊಂಡಿದ್ದರು.

# ಸೋನು ಗೌಡ 100ಕ್ಕೂ ಹೆಚ್ಚು ರೀಲ್ಸ್ ಸ್ಟಾರ್‌ಗಳ ವಿಚಾರಣೆ

• **ಉದಯವಾಹಿನಿ, ಬೆಂಗಳೂರು**

ಮಾನ್ಯತೆ ಪಡೆಯದ ಬೆಟ್ಟಿಂಗ್ ಆಪ್ ಬಗ್ಗೆ ಪ್ರಮೋಟ್ ಮಾಡಿದ ಆರೋಪದ ಮೇಲೆ ರೀಲ್ಸ್ ಸ್ಟಾರ್ ಸೋನು ಶ್ರೀನಿವಾಸ್‌ಗೌಡ ಸೇರಿದಂತೆ 100ಕ್ಕೂ ಅಧಿಕ ರೀಲ್ಸ್ ಸ್ಟಾರ್‌ಗಳಿಗೆ ನೋಟಿಸ್ ನೀಡಿ ಸೈಬರ್ ಕ್ರೈಂ ಪೊಲೀಸರು ವಿಚಾರಣೆಗೊಳಪಡಿಸಿದ್ದಾರೆ. ತಮ್ಮ ತಮ್ಮ ಇನ್ಸ್ಟಾಗ್ರಾಮ್ ಪೇಜ್‌ಗಳಲ್ಲಿ ಐಪಿಎಲ್ ಬೆಟ್ಟಿಂಗ್ ಸಂಬಂಧ ಜಾಹೀರಾತು ಬಿತ್ತರಿಸಿದ್ದ ರೀಲ್ಸ್ ಸ್ಟಾರ್‌ಗಳಿಗೆ ಗಿ ಶಾಕ್ ಎದುರಾಗಿದೆ. ತಮ್ಮ ಪೇಜ್‌ಗಳಲ್ಲಿ ಬಿತ್ತರಿಸಿದ್ದ ಜಾಹೀರಾತುಗಳು ಜನರಿಗೆ ವಂಚಿಸುವ ಜಾಹೀರಾತುಗಳು ಆಗಿದ್ದವು. ಹಾಗಾಗಿ ವಕೀಲರೊಬ್ಬರು ಬೆಂಗಳೂರು ಸೈಬರ್ ಕ್ರೈಂ ಪೊಲೀಸರಿಗೆ ದೂರು ಕೊಟ್ಟಿದ್ದರು.

ಸೋಶಿಯಲ್ ಮೀಡಿಯಾ ಪೇಜ್‌ಗಳಲ್ಲಿ ಜನರಿಗೆ ವಂಚಿಸುವ ಜಾಹೀರಾತು ಪ್ರಕಟಿಸಿದ್ದ ರೀಲ್ಸ್ ಸ್ಟಾರ್‌ಗಳ ಪಟ್ಟಿ ಮಾಡಿ ಸೈಬರ್ ಕ್ರೈಂ ಪೊಲೀಸರು ನೋಟಿಸ್ ನೀಡಿದ್ದರು.

ಸೋನು ಶ್ರೀನಿವಾಸ್‌ಗೌಡ, ದೀಪಕ್‌ಗೌಡ, ವರುಣ್ ಆರಾದ್ಯ, ದಚ್ಚು ಸೇರಿ ನೂರಕ್ಕು ಹೆಚ್ಚು ಮಂದಿ ರೀಲ್ಸ್ ಸ್ಟಾರ್


ಉದಯವಾಹಿನಿ ಚಿತ್ರ

ಗಳಿಗೆ ನೋಟಿಸ್ ಕೊಟ್ಟು ವಿಚಾರಣೆ ಮಾಡಿದ್ದಾರೆ.

ವಿಚಾರಣೆಗೆ ಹಾಜರಾದ ಸ್ಟಾರ್‌ಗಳು ಇನ್ನು ಮುಂದೆ ಇಂತಹ ಜಾಹೀರಾತುಗಳನ್ನ ನಾವು ಪ್ರಕಟಿಸುವುದಿಲ್ಲ. ಈ ಜಾಹೀರಾತು ಪ್ರಕಟಿಸುವುದರಿಂದ ಜನರಿಗೆ ಸಮಸ್ಯೆ ಆಗುತ್ತದೆ ಎಂಬ ಅರಿವಿಲ್ಲದೇ ನಾವು ಪ್ರಕಟಿಸಿದ್ದೇವೆ. ನಾವು ಮಾಡಿದ್ದ ತಪ್ಪಿನ ಬಗ್ಗೆ ಅರಿವಿಗೆ ಬಂದಿದ್ದು, ಜಾಹೀರಾತುಗಳನ್ನ ಡಿಲೀಟ್ ಮಾಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಜನರಿಗೆ ವಂಚಿಸುವ ಜಾಹೀರಾತುಗಳು ಇನ್ನೊಮ್ಮೆ ಪ್ರಕಟಿಸಿದರೆ ಜೈಲಿಗೆ ಕಳಿಸುವ ಎಚ್ಚರಿಕೆಯನ್ನು ಸೈಬರ್ ಕ್ರೈಂ ಪೊಲೀಸರು ನೀಡಿದ್ದಾರೆ.

# ಬೆಂಗಳೂರು, ಶಿವಮೊಗ್ಗದಲ್ಲಿ 10 ಕಡೆ ಇಡಿ ದಾಳಿ

• **ಉದಯವಾಹಿನಿ, ಬೆಂಗಳೂರು**

ಜಿಲ್ಲಾ ಸಹಕಾರಿ ಕೇಂದ್ರ (ಡಿಸಿಸಿ) ಬ್ಯಾಂಕ್ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ(ಇಡಿ) ಬೆಂಗಳೂರು, ಶಿವಮೊಗ್ಗದ 10 ಸ್ಥಳಗಳಲ್ಲಿ ದಾಳಿ ನಡೆಸಿದೆ.

ಹಣ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ) ಅಡಿಯಲ್ಲಿ, ನಿರ್ದಿಷ್ಟ ಮಾಹಿತಿಯ ಆಧಾರದ ಮೇಲೆ ತನಿಖಾ ಸಂಸ್ಥೆ ಬೆಂಗಳೂರು ಮತ್ತು ಶಿವಮೊಗ್ಗದ 10 ಸ್ಥಳಗಳಲ್ಲಿ ಏಕಕಾಲದಲ್ಲಿ ಶೋಧ ನಡೆಸಿದೆ. ಅಧಿಕಾರಿಗಳ ಪ್ರಕಾರ, ಸಹಕಾರಿ ಬ್ಯಾಂಕಿಗೆ ಸಂಬಂಧಿಸಿದ ಹಣಕಾಸು ಅಕ್ರಮಗಳು ಮತ್ತು ಹಣ ವರ್ಗಾವಣೆಗೆ ಸಂಬಂಧಿಸಿದ ಪುರಾವೆಗಳನ್ನು ಸಂಗ್ರಹಿಸುವ ಉದ್ದೇಶದಿಂದ ಈ ದಾಳಿ ನಡೆಸಲಾಗಿದೆ. ಬೆಂಗಳೂರಿನ ಶ್ರೀ ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್; ಶ್ರೀ ವಸಿಸ್ಟಾ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿಮಿಟೆಡ್ ಹಾಗೂ ಶ್ರೀ ಗುರು ಸಾರ್ವಬೌಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್




ಬೆಂಗಳೂರು, ಈ ಮೂರು ಬ್ಯಾಂಕಿನಲ್ಲಿ ನಿರ್ವಹಣಾ ಮಂಡಳಿಯ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳು ನಡೆಸಿದ ಬಹುಕೋಟಿ ವಂಚನೆ, ಹಣ ದುರುಪಯೋಗದ ವರದಿಗಳ ನಂತರ ಇಡಿ ದಾಳಿ ನಡೆಸಿ, ಶೋಧ ನಡೆಸುತ್ತಿದೆ.

ಶಿವಮೊಗ್ಗದಲ್ಲಿ 8ಕ್ಕೂ ಹೆಚ್ಚಿನ ಸ್ಥಳಗಳಲ್ಲಿ ಇಡಿ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ಶಿವಮೊಗ್ಗದ ಗೋಪಾಲಗೌಡ ಬಡಾವಣೆಯಲ್ಲಿರುವ ಡಿಸಿಸಿ ಬ್ಯಾಂಕ್ ಮಾಜಿ ಮ್ಯಾನೇಜರ್ ಶೋಭಾ ನಿವಾಸದ ಮೇಲೆ ಇಂದು ದಾಳಿ ನಡೆದಿದೆ.

2014ರ ಜೂನ್ ನಲ್ಲಿ ಶಿವಮೊಗ್ಗದ ಗಾಂಧಿ ಬಜಾರ್‌ನಲ್ಲಿ ಡಿಸಿಸಿ ಬ್ಯಾಂಕ್‌ನಲ್ಲಿ ನಡೆದಿದೆ ಎನ್ನಲಾದ ನಕಲಿ ಗೋಲ್ಡ್ ಪ್ರಕರಣಕ್ಕೆ ಸಂಬಂಧಿಸಿ ಅಂದು ಬ್ಯಾಂಕ್ ಮ್ಯಾನೇಜರ್ ಆಗಿದ್ದ ಶೋಭಾ ಅವರ ನಿವಾಸ ಮೇಲೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

# ಪ್ರತಿದಿನ ಸರಾಸರಿ 15 ಲೈಂಗಿಕ ಕಿರುಕುಳ ಕೇಸು ವರದಿ!

• **ಉದಯವಾಹಿನಿ, ಬೆಂಗಳೂರು**

2025ನೇ ವರ್ಷದ ಮೊದಲ ಎರಡು ತಿಂಗಳಲ್ಲಿ ಕರ್ನಾಟಕದಾದ್ಯಂತ ಪ್ರತಿದಿನ ಸರಾಸರಿ 15 ಲೈಂಗಿಕ ಕಿರುಕುಳ ಪ್ರಕರಣಗಳು ವರದಿಯಾಗಿದ್ದು, ಮಹಿಳೆಯರ ಸುರಕ್ಷತೆಯ ಬಗ್ಗೆ ಕಳವಳ ವ್ಯಕ್ತವಾಗಿದೆ. ಕಳೆದ ವರ್ಷ 2024 ರಲ್ಲಿ 6,319 ಲೈಂಗಿಕ ಕಿರುಕುಳ ಪ್ರಕರಣಗಳು ದಾಖಲಾಗಿವೆ, ಆದರೆ ಇವುಗಳಲ್ಲಿ ಒಂಬತ್ತು ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ.

ರಾಜ್ಯದಲ್ಲಿ ಪ್ರತಿದಿನ ಒಂದೇ ಒಂದು ಹೆಣ್ಣುಮಕ್ಕಳನ್ನು ಚುಡಾಯಿಸುವಿಕೆ ಪ್ರಕರಣ ವರದಿಯಾಗಿದ್ದು, ಇಂತಹ ಪ್ರಕರಣ ನಡೆದಿದ್ದರೂ ವರದಿಯಾಗದಿರುವುದು ಕಾರಣ ಎಂದು ತಜ್ಞರು ಹೇಳುತ್ತಾರೆ. ರಾಜ್ಯ ಅಪರಾಧ ದಾಖಲೆಗಳ ಬ್ಯೂರೋ ಮಾಹಿತಿಯ ಪ್ರಕಾರ, ಈ ವರ್ಷದ ಮೊದಲ ಎರಡು ತಿಂಗಳಲ್ಲಿ 901 ಲೈಂಗಿಕ ಕಿರುಕುಳ ಪ್ರಕರಣಗಳು ಮತ್ತು 78 ಚುಡಾಯಿಸುವಿಕೆ ಪ್ರಕರಣಗಳು ವರದಿಯಾಗಿವೆ. 2024 ರಲ್ಲಿ ವರದಿಯಾದ 6,319 ಪ್ರಕರಣಗಳಲ್ಲಿ 3,908 ವಿಚಾರಣೆ ಹಂತದಲ್ಲಿವೆ, 1,734 ಇನ್ನೂ ತನಿಖೆ ಹಂತದಲ್ಲಿವೆ ಮತ್ತು 45 ಪ್ರಕರಣಗಳು ಪತ್ತೆಯಾಗಿಲ್ಲ. ಹೆಚ್ಚುವರಿಯಾಗಿ, ಕಳೆದ ವರ್ಷ 180 ಹೆಣ್ಣುಮಕ್ಕಳ ಚುಡಾಯಿಸುವಿಕೆ ಪ್ರಕರಣಗಳು ವರದಿಯಾಗಿವೆ. ಜನವಾದಿ ಮಹಿಳಾ ಸಂಘಟನೆಯ ಮಹಿಳಾ ಹಕ್ಕುಗಳ ಕಾರ್ಯಕರ್ತೆ ಕೆ.ಎಸ್. ವಿಮಲಾ ಅವರು ಖಿಓಇ ಗೆ ನೀಡಿದ ಸಂದರ್ಶನದಲ್ಲಿ, ಸಾಮಾಜಿಕ ಕಳಂಕ, ಭೀತಿ, ಪೊಲೀಸ್ ಮತ್ತು ಕಾನೂನು ವ್ಯವಸ್ಥೆಯ ಮೇಲಿನ ನಂಬಿಕೆಯ ಕೊರತೆಯಿಂದಾಗಿ



**ದೌರ್ಜನ್ಯ ಪ್ರಕರಣದ ಕುರಿತು ಗೃಹ ಸಚಿವ ಜಿ. ಪರಮೇಶ್ವರ ಅವರ ಇತ್ತೀಚಿನ ಹೇಳಿಕೆಗಳನ್ನು ಕಾರ್ಯಕರ್ತೆ ವಿಮಲಾ ಟೀಕಿಸಿದ್ದಾರೆ. ಅಧಿಕಾರದಲ್ಲಿರುವವರು ಬೇಜವಾಬ್ದಾರಿ ಹೇಳಿಕೆಗಳನ್ನು ನೀಡಿದಾಗ, ಅದು ಅಪರಾಧ ಮಾಡುವವರನ್ನು ಪ್ರೋತ್ಸಾಹಿಸುತ್ತದೆ ಎನ್ನುತ್ತಾರೆ. ಜಾಗೃತಿಯಿಂದಾಗಿ ಹೆಚ್ಚಿನ ಮಹಿಳೆಯರು ಈಗ ಲೈಂಗಿಕ ಕಿರುಕುಳದ ಘಟನೆಗಳನ್ನು ವರದಿ ಮಾಡುತ್ತಿದ್ದರೆ, ಅನೇಕರಿಗೆ ಇನ್ನೂ ಚುಡಾಯಿಸುವಿಕೆ ಪ್ರಕರಣ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ, ಮಹಿಳೆಯರ ಮೇಲಿನ ಅಪರಾಧಗಳನ್ನು ತಡೆಗಟ್ಟುವ ಕ್ರಮಗಳ ಮೂಲಕ ಮಾತ್ರ ನಿಯಂತ್ರಿಸಬಹುದು ಎನ್ನುತ್ತಾರೆ.**

ಇಂತಹ ಘಟನೆಗಳು ವರದಿಯಾಗದೇ ಇರುವುದರಿಂದ ನಿಜವಾದ ಸಂಖ್ಯೆ ಹೆಚ್ಚಾಗಬಹುದು ಎಂದು ಹೇಳುತ್ತಾರೆ.

ಮಹಿಳೆಯರು ದೂರು ನೀಡಲು ಹೋದಾಗಲೂ ಪೊಲೀಸರು ಸೂಕ್ಷ್ಮತೆಯಿಂದ ಪ್ರತಿಕ್ರಿಯಿಸುವುದಿಲ್ಲ, ರಾತ್ರಿಯಲ್ಲಿ ಅವರು ಏಕೆ ಹೊರಗೆ ಹೋಗುತ್ತಾರೆ ಅಥವಾ ಏಕೆ ಒಂಟಿಯಾಗಿದ್ದಾರೆ ಎಂದು ಕೇಳುವುದರಿಂದ ಹೆಣ್ಣುಮಕ್ಕಳು ದೂರು ನೀಡಲು ನಿರುತ್ಸಾಹಗೊಳ್ಳುತ್ತಾರೆ ಎನ್ನುತ್ತಾರೆ

# ವಿಧಾನಸೌಧ ಇನ್ಮುಂದೆ ಆಗಲಿದೆ ಪ್ರವಾಸಿ ತಾಣ

## ಸಾರ್ವಜನಿಕರ ಪ್ರವೇಶಕ್ಕೆ ಪ್ರವಾಸೋದ್ಯಮದ ಹೆಸರಿನಲ್ಲಿ ಶುಲ್ಕ ನಿಗದಿ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಶಕ್ತಿ ಸೌಧ ವಿಧಾನಸೌಧ ರಾಜಕಾರಣಗಳು, ಅಧಿಕಾರಿಗಳು ಹಾಗೂ ಪ್ರಭಾವಿಗಳಿಗೆ ಮಾತ್ರ ಸುಲಭದ ಎಂಟ್ರಿ ಸಿಗುತ್ತಿತ್ತು. ಆದರೆ ಇನ್ಮುಂದೆ ವಿಧಾನಸೌಧ ಪ್ರವಾಸಿ ತಾಣ ಆಗಲಿದೆ. ಹೌದು ಪ್ರವಾಸೋದ್ಯಮ ಇಲಾಖೆ ಇಂತಹದೊಂದು ಪ್ರಸ್ತಾಪ ಇಟ್ಟಿದೆ. ಈ ಮೂಲಕ ಸಾರ್ವತ್ರಿಕ ರಜಾ ದಿನಗಳಲ್ಲಿ ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ 'ಗೈಡೆಡ್ ಟೂರ್' ಆರಂಭಿಸಲು ನಿರ್ಧಾರ ಮಾಡಲಾಗಿದೆ. ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಹಾಗೂ ಸಾರ್ವಜನಿಕರಿಗೆ ಶುಲ್ಕವನ್ನು ನಿಗದಿ ಮಾಡಲು ತೀರ್ಮಾನ ಮಾಡಲಾಗಿದೆ.

ವಿಧಾನಸೌಧ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರನ್ನು ತಲಾ 30 ರಂತೆ ತಂಡ ಗಳನ್ನಾಗಿ ವಿಭಜಿಸಿ, ವೀಕ್ಷಣೆಗೆ ಅವಕಾಶ ಕಲ್ಪಿಸುವುದು ಹಾಗೂ ಈ ಪ್ರತಿ ತಂಡಗಳ ಮೇಲ್ವಿಚಾರಣೆ ಮಾಡಲು ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ಅಧಿಕಾರಿಗಳನ್ನು ಕಡ್ಡಾಯವಾಗಿ ನೇಮಿಸಲಾಗುತ್ತದೆ. ಪ್ರತಿ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರ ಸಂಖ್ಯೆ ಹಾಗೂ ವಿವರಗಳನ್ನು ವಿಧಾನಸೌಧದ ಭದ್ರತಾ ವಿಭಾಗಕ್ಕೆ ಆಯಾ ದಿನವೇ ಸಲ್ಲಿಸಲು ಸೂಚನೆ ನೀಡಲಾಗಿದೆ. ಅನುವಾಗುವಂತೆ ಪ್ರವಾಸಿಗರು ಆನ್ ಲೈನ್ ಮೂಲಕವೂ ಟಿಕೆಟ್ ಪಡೆಯಲು ಅವಕಾಶ ಇದೆ. (ವಿಧಾನಸೌಧದಿಂದ ತೆರಿಗೆ ಬಾಕಿ)



ದೆಹಲಿಯ ಪಾರ್ಲಿಮೆಂಟ್ ಕಟ್ಟಡ, ರಾಷ್ಟ್ರಪತಿ ಭವನದಲ್ಲಿ ಗೈಡೆಡ್ ಟೂರ್ ವ್ಯವಸ್ಥೆ ಇದೆ. ಈ ಮೂಲಕ ಪ್ರವಾಸಿಗರನ್ನು ಆಕರ್ಷಣೆ ಮಾಡಲಾಗುತ್ತಿದೆ. ಇದೀಗ ವಿಧಾನಸೌಧದ ಪಾರಂಪರಿಕತೆ, ಇತಿಹಾಸ, ಕಟ್ಟಡದ ಮಹತ್ವವನ್ನು ತಿಳಿಸುವ ನಿಟ್ಟಿನಲ್ಲಿ ಗೈಡೆಡ್ ಟೂಂ ವ್ಯವಸ್ಥೆ ಕಲ್ಪಿಸಲು ಪ್ರವಾಸೋದ್ಯಮ ಇಲಾಖೆ ಮುಂದಾಗಿದೆ. ಆದರೆ ಪ್ರವಾಸಿಗರಿಗೆ ಎಷ್ಟು ಶುಲ್ಕ ನಿಗದಿ ಮಾಡಬೇಕು ಎಂಬುದು ಇನ್ನೂ ನಿರ್ಧಾರವಾಗಿಲ್ಲ.

ವಿಧಾನಸೌಧಕ್ಕೆ ನಿತ್ಯ ಸಾರ್ವಜನಿಕರೂ ಆಗಮಿಸುತ್ತಾರೆ. ಆದರೆ ಇವರನ್ನು ಪ್ರವಾಸಿಗರು ಎಂದು ಪರಿಗಣಿಸಲಾಗುತ್ತಾ ಎಂಬ ಕುತೂಹಲ ಕೆರಳಿಸಿದೆ. ಈ ಮೂಲಕ ವಿವಿಧ ಕೆಲಸ ಕಾರ್ಯಗಳಿಗೆ ಆಗಮಿಸುವ ಸಾರ್ವಜನಿಕರಿಗೂ ಶುಲ್ಕ ಕಟ್ಟಬೇಕಾದ ಅನಿವಾರ್ಯತೆ ಎದುರಾಗುತ್ತಾ ಕಾದುನೋಡಬೇಕಿದೆ.

**ರಾಜ್ಯ ಸರ್ಕಾರದಿಂದ ಮಹತ್ವದ ನಿರ್ಧಾರ**

### ನಿಯಮಗಳನ್ನು ಪಾಲಿಸಬೇಕು

**ಇನ್ನು ವಿಧಾನಸೌಧ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರು ನಿಯಮಗಳನ್ನು ಪಾಲನೆ ಮಾಡಬೇಕಿದೆ. ಪ್ರವಾಸಿಗರ ಅಧಿಕೃತ ಗುರುತಿನ ಚೀಟಿಯನ್ನು ಪರಿಶೀಲಿಸಿದ ಬಳಿಕ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತದೆ. ವಿಧಾನಸೌಧ ಕಟ್ಟಡ, ಉದ್ಯಾನವನಗಳು, ಪ್ರತಿಮೆಗಳಿಗೆ ಯಾವುದೇ ದಕ್ಕೆ ಉಂಟಾಗದಂತೆ ಎಚ್ಚರಿಕೆವಹಿಸಲು ಸೂಚಿಸಲಾಗಿದೆ. ಈ ಕುರಿತು ಅಗತ್ಯ ಸೂಚನಾ ಫಲಕಗಳನ್ನು ಅಳವಡಿಸಲು ಲೋಕೋಪಯೋಗಿ ಇಲಾಖೆಯು ಕ್ರಮವಹಿಸಲು ಸೂಚನೆ ನೀಡಲಾಗಿದೆ.**

ಅಂತರಾಳದಿಂದ...
EDITORIAL

# ಮತ ಕ್ಷೇತ್ರ ಮರು ವಿಂಗಡಣೆಯ ಮಸಲತ್ತು

ವಿವಿಧ ಸಮುದಾಯಗಳಿಗೆ ಸೇರಿದ ಬಹುತ್ವ ಭಾರತವನ್ನು ಮನುವಾದಿ ಹಿಂದೂ ರಾಷ್ಟ್ರವನ್ನಾಗಿ ಮಾಡುವುದು ಸಂಘಪರಿವಾರದ ರಾಜಕೀಯ ವೇದಿಕೆಯಾದ ಬಿಜೆಪಿಯ ಬಹು ದಿನಗಳ ಕನಸು. ಹತ್ತು ವರ್ಷಗಳ ಹಿಂದೆ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಕೇಂದ್ರದ ಅಧಿಕಾರ ಸೂತ್ರ ಹಿಡಿದ ಬಿಜೆಪಿ ತನ್ನ ಈ ಗುರಿ ಸಾಧಿಸಲು ದಾಪುಗಾಲಿಡುತ್ತಲೇ ಬಂದಿದೆ. ಉತ್ತರದ ಹಿಂದಿ ಭಾಷಿಕ ಪ್ರಭಾವದ ರಾಜ್ಯಗಳಲ್ಲಿ ಪ್ರಾಬಲ್ಯ ಸಾಧಿಸಿ ನಂತರ ಈಶಾನ್ಯ ರಾಜ್ಯಗಳಲ್ಲಿ ನಾನಾ ಕಸರತ್ತುಗಳನ್ನು ಮಾಡಿ ವಶಪಡಿಸಿಕೊಂಡ ಬಿಜೆಪಿಗೆ ಮಣಿಪುರದಂಥ ರಾಜ್ಯಗಳು ನುಂಗಲಾಗದ ತುತ್ತಾದರೂ ಸಂಪೂರ್ಣ ಭರವಸೆಯನ್ನು ಅದು ಕಳೆದುಕೊಂಡಿಲ್ಲ. ಆದರೆ ಎಲ್ಲೆಡೆ ದಿಗ್ವಿಜಯ ಸಾಧಿಸುತ್ತಲೇ ಬಂದ ಕೇಂದ್ರದ ಆಡಳಿತ ಪಕ್ಷಕ್ಕೆ ದಕ್ಷಿಣದ ರಾಜ್ಯಗಳನ್ನು ಬುಟ್ಟಿಗೆ ಹಾಕಿಕೊಳ್ಳಲು ಈವರೆಗೆ ಸಾಧ್ಯವಾಗಿಲ್ಲ. ಹೇಗಾದರೂ ಮಾಡಿ ಪ್ರಾಬಲ್ಯ ಸಾಧಿಸಲು ಯತ್ನಿಸಿದರೂ ದಕ್ಷಿಣದ ರಾಜ್ಯಗಳು ಬಿಡುವುದಿಲ್ಲ ಎಂಬುದು ತಮಿಳುನಾಡಿನ ಇತ್ತೀಚಿನ ವಿದ್ಯಮಾನಗಳಿಂದ ಸ್ಪಷ್ಟವಾಗಿದೆ. ಲೋಕಸಭಾ ಮತಕ್ಷೇತ್ರಗಳ ಮರು ವಿಂಗಡಣೆಯ ದಿಢೀರ್ ಪ್ರಸ್ತಾವಕ್ಕೆ ಕೇಂದ್ರ ಗೃಹ ಮಂತ್ರಿ ಅಮಿತ್ ಶಾ ಏನೇ ಸಬೂಬು ಹೇಳಿದರೂ ಬಿಜೆಪಿಗೆ ನೆಲೆಯೂರಲು ಅವಕಾಶ ನೀಡದ ದಕ್ಷಿಣ ಭಾರತದ ರಾಜ್ಯಗಳನ್ನು ನಿಯಂತ್ರಿಸುವುದಕ್ಕಾಗಿ ಈ ಮಸಲತ್ತು ನಡೆದಿದೆ ಎಂಬುದು ಸ್ಪಷ್ಟವಾಗುತ್ತದೆ. ಕೇರಳದಲ್ಲಿ ನಾರಾಯಣ ಗುರು ಮತ್ತು ಅವರ ವೈಚಾರಿಕ ವಾರಸುದಾರರಾದ ಕಮ್ಯುನಿಸ್ಟರು ಹಾಗೂ ತಮಿಳುನಾಡಿನಲ್ಲಿ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಹಾಗೂ ಅವರ ಸೈದ್ಧಾಂತಿಕ ಸ್ಫೂರ್ತಿಯ ಸೆಲೆಯನ್ನು ಹೊಂದಿರುವ ದ್ರಾವಿಡ ಪಕ್ಷಗಳು, ಆಂಧ್ರ ಮತ್ತು ತೆಲಂಗಾಣದಲ್ಲಿ ತೆಲುಗು ಅಸ್ಮಿತೆ ಮತ್ತು ಪ್ರಭಾವಿ ಎಡಪಂಥೀಯ ಚಳವಳಿ ಮನುವಾದಿ ಪರಿವಾರಕ್ಕೆ ಬಹು ದೊಡ್ಡ ಅಡ್ಡಿಯಾಗಿವೆ. ಇನ್ನು ಕರ್ನಾಟಕದಲ್ಲಿ ಬಸವಣ್ಣ ಮತ್ತು ಕುವೆಂಪು ಪ್ರಭಾವದಿಂದಾಗಿ ಈವರೆಗೆ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿಗೆ ನಿಚ್ಚಳ ಬಹುಮತವನ್ನು ಪಡೆಯಲು ಸಾಧ್ಯವಾಗಿಲ್ಲ. ಆದರೆ ಅವರ ಕೆಲವು ಅನುಯಾಯಿಗಳ ಅವಕಾಶವಾದಿತನದಿಂದ ದಕ್ಷಿಣದ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಒಂದಿಷ್ಟು ಜಾಗ ಮಾಡಿಕೊಂಡಿದೆ. ಲೋಕಸಭಾ ಮತಕ್ಷೇತ್ರಗಳ ಮರು ವಿಂಗಡಣೆಯ ಕುರಿತು ಸಮಾಲೋಚನೆ ಮಾಡಲು ವಿವಿಧ ರಾಜ್ಯ ಸರಕಾರಗಳ ಮುಖ್ಯಸ್ಥರು ಹಾಗೂ ರಾಜಕೀಯ ಪಕ್ಷಗಳ ಪ್ರಮುಖರು ಇತ್ತೀಚೆಗೆ ಚೆನ್ನೈನಲ್ಲಿ ಸಭೆ ಸೇರಿದ್ದರು. ಇವರಲ್ಲಿ ಸಹಜವಾಗಿ ದಕ್ಷಿಣ ಭಾರತದ ಪ್ರಮುಖರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಜನಸಂಖ್ಯೆಯನ್ನು ಆಧರಿಸಿ ಲೋಕಸಭಾ ಮತಕ್ಷೇತ್ರಗಳ ಮರು ವಿಂಗಡಣೆಯಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ ಎಂದು ಅವರು ವ್ಯಕ್ತಪಡಿಸಿದ ಆತಂಕದಲ್ಲಿ ಹುರುಳಿಲ್ಲದಿಲ್ಲ. ಸರಕಾರದ ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದಿರುವ ರಾಜ್ಯಗಳನ್ನು ಗುರಿಯಾಗಿರಿಸಿಕೊಂಡು ಅವುಗಳನ್ನು ಶಿಕ್ಷಿಸಲು ಅಂದರೆ ಲೋಕಸಭೆಯಲ್ಲಿ ಅವುಗಳ ಪ್ರಾತಿನಿಧ್ಯವನ್ನು ಕಡಿಮೆ ಮಾಡಲು ಈ ಮಸಲತ್ತು ನಡೆದಿದೆ ಎಂಬ ಸ್ಟಾಲಿನ್ ಆರೋಪವನ್ನು ತಳ್ಳಿ ಹಾಕಲು ಆಗುವುದಿಲ್ಲ. ಲೋಕಸಭೆಯಲ್ಲಿ ದಕ್ಷಿಣದ ಪ್ರಾತಿನಿಧ್ಯ ಕಡಿಮೆಯಾಗುವುದಿಲ್ಲ ಎಂದು ಅಮಿತ್ ಶಾ ಭರವಸೆಯನ್ನು ನೀಡಿದ್ದರೂ ವಾಸ್ತವವಾಗಿ ಉತ್ತರದ ರಾಜ್ಯಗಳ ಜನಸಂಖ್ಯೆ ಪ್ರಮಾಣ ದಕ್ಷಿಣಕ್ಕಿಂತ ಜಾಸ್ತಿಯಾಗಿರುವುದರಿಂದ ಸಹಜವಾಗಿ ಅವುಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆಯೂ ಹೆಚ್ಚಾಗುತ್ತದೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ.ಈ ರೀತಿ ಅವೈಜ್ಞಾನಿಕವಾಗಿ ಲೋಕಸಭಾ ಮತಕ್ಷೇತ್ರಗಳ ಮರುವಿಂಗಡಣೆ ಮಾಡಲು ಹೊರಟರೆ ಭಾರತದ ಸಮಗ್ರತೆ ಮತ್ತು ಸಂವಿಧಾನದ ಆಶಯದ ಮೂಲವಾದ ಒಕ್ಕೂಟ ವ್ಯವಸ್ಥೆಯಲ್ಲಿ ಅಸಮತೋಲನ ಉಂಟಾಗುತ್ತದೆ. ಇದರಿಂದ ಆರ್ಥಿಕ ವ್ಯವಸ್ಥೆಯ ಮೇಲೆಯೂ ದುಷ್ಪರಿಣಾಮ ಉಂಟಾಗುತ್ತದೆ ಎಂಬ ಆತಂಕವೂ ಸುಳ್ಳಲ್ಲ. ಈ ಕುರಿತು ಗೃಹ ಮಂತ್ರಿ ಅಮಿತ್ ಶಾ ಏನೇ ಹೇಳಲಿ ದಿಢೀರನೇ ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆಗೆ ಹೊರಟಿರುವ ಉದ್ದೇಶವೇನು ಎಂಬುದನ್ನು ಸರಕಾರ ಅಧಿಕೃತವಾಗಿ ಪ್ರಕಟಿಸುವುದು ಅಗತ್ಯವಾಗಿದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ತರಾತುರಿಯಲ್ಲಿ ಸರಕಾರ ಇದಕ್ಕೆ ಮುಂದಾಗಬಾರದು.

**ಈ ಸಭೆಯಲ್ಲಿ ದಕ್ಷಿಣದ ತಮಿಳುನಾಡು, ಕೇರಳ, ತೆಲಂಗಾಣ ಮಾತ್ರವಲ್ಲ ಪಂಜಾಬ್‌ನ ಮುಖ್ಯಮಂತ್ರಿಗಳೂ ಪಾಲ್ಗೊಂಡಿದ್ದರು. ಕರ್ನಾಟಕದ ಉಪ ಮುಖ್ಯಮಂತ್ರಿ, ಒಡಿಶಾದ ಕೆಲವು ರಾಜಕೀಯ ಮುಖಂಡರು ಭಾಗವಹಿಸಿದ್ದರು. ಈ ಸಭೆಯಲ್ಲಿ ರಚಿಸಲಾದ ಜಂಟಿ ಕ್ರಿಯಾ ಸಮಿತಿಯ ಪರವಾಗಿ ಹೇಳಿಕೆ ನೀಡಿದ ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಲೋಕಸಭಾ ಮತಕ್ಷೇತ್ರಗಳ ಮರು ವಿಂಗಡಣೆ ನ್ಯಾಯ ಸಮ್ಮತವಾಗಿ, ವೈಜ್ಞಾನಿಕವಾಗಿ ನಡೆದರೆ ತಮ್ಮ ಆಕ್ಷೇಪವಿಲ್ಲ ಎಂದು ಹೇಳಿದರು.**

ದಕ್ಷಿಣ ಭಾರತದಲ್ಲಿ ನೆಲೆಯೂರಲು ಸಂಘ ಪರಿವಾರ ಅಸ್ತಿತ್ವಕ್ಕೆ ಬಂದಾಗಿನಿಂದ ಯತ್ನಿಸುತ್ತಲೇ ಇದೆ. ಆರೆಸ್ಸೆಸ್ ಸ್ಥಾಪನೆಯಾಗಿ ಈಗ ನೂರು ವರ್ಷಗಳಾಗಿವೆ. ಈ ಶತಮಾನೋತ್ಸವದ ಸಂಭ್ರಮದಲ್ಲಿ ಭಾರತವನ್ನು ಮನುವಾದಿ ಹಿಂದೂ ರಾಷ್ಟ್ರವನ್ನಾಗಿ ಮಾಡುವ ಗುರಿಯನ್ನು ಇರಿಸಿಕೊಳ್ಳಲಾಗಿತ್ತು. ಆದರೆ ಬಹುತ್ವದ ಈ ಭಾರತ ಇದನ್ನು ಒಪ್ಪುವುದಿಲ್ಲ ಎಂಬುದು ದಕ್ಷಿಣ ಭಾರತದ ರಾಜ್ಯಗಳ ನಿಲುವಿನಿಂದ ಸ್ಪಷ್ಟವಾಗುತ್ತದೆ. ಕರ್ನಾಟಕದಲ್ಲಿ ಆಪರೇಶನ್ ಕಮಲದ ಮೂಲಕ ಬಿಜೆಪಿ ಕೆಲವೊಮ್ಮೆ ಮುಖ್ಯಮಂತ್ರಿ ಪಟ್ಟವನ್ನು ಗಿಟ್ಟಿಸಿಕೊಂಡರೂ ಸ್ವಂತ ಬಲದಿಂದ ಅದು ಎಂದಿಗೂ ಅಧಿಕಾರಕ್ಕೆ ಬರಲಿಲ್ಲ. ಇನ್ನು ತಮಿಳುನಾಡಿನಲ್ಲಿ ಪೆರಿಯಾರ್ ಮತ್ತು ದ್ರಾವಿಡ ಪಕ್ಷಗಳನ್ನು ಬದಿಗೊತ್ತಿ ಬಿಜೆಪಿಯನ್ನು ಕಟ್ಟುವುದಾಗಿ ಕೊಚ್ಚಿಕೊಂಡು ಅಲ್ಲಿಗೆ ಹೋಗಿದ್ದ ಅಣ್ಣಾಮಲೈ ಕೈಲಾಗದೆ ಅಧ್ಯಕ್ಷ ಹುದ್ದೆಯಿಂದ ಹಿಂದೆ ಸರಿಯುವುದಾಗಿ ಹೇಳಿದ್ದಾರೆ. ಮತ್ತೆ ಅಲ್ಲಿನ ಅಣ್ಣಾ ಡಿಎಂಕೆ ಪಕ್ಷಕ್ಕೆ ಬಿಜೆಪಿ ಶರಣಾಗತವಾಗಿದೆ. ಇನ್ನು ಕೇರಳದಲ್ಲಿ ಆರ್‌ಎಸ್‌ಎಸ್ ಆಗಾಗ ಅಬ್ಬರಿಸುತ್ತಿದ್ದರೂ ಬಿಜೆಪಿಗೆ ಹೆಚ್ಚಿನ ಯಶಸ್ಸು ದೊರಕಿಸಿಕೊಡಲು ಈವರೆಗೆ ಅದಕ್ಕೆ ಸಾಧ್ಯವಾಗಲೇ ಇಲ್ಲ.

# ರಾಮಾಯಣ ಒಂದು ದಿವ್ಯ ಗ್ರಂಥ

ವಿಶ್ವಾಸ್.ಡಿ.ಗೌಡ



ರಾಮಾಯಣದಲ್ಲಿ ಬರುವ ಪ್ರತಿಯೊಂದು ಪಾತ್ರವೂ ಅನನ್ಯ, ಅದ್ಭುತ. ಇದಕ್ಕೆ ರಾವಣನೂ ಹೊರತಲ್ಲ. ರಾವಣ ಬ್ರಹ್ಮನ ಮೊಮ್ಮಗ ಪುಲಸ್ತ್ಯ ಮುನಿ ವಂಶದವನು. ಪ್ರಕಾಂಡ ಪಂಡಿತ. ವೇದಶಾಸ್ತ್ರಗಳನ್ನು ಅರಿತ ಮಹಾಬ್ರಾಹ್ಮಣ. ರಾವಣನಿಗೆ ದಶಾನನ ಅಂದರೆ ಹತ್ತು ತಲೆಯವನು ಎಂದು ಹೆಸರು ಬರಲು ಕಾರಣ ಭೌತಿಕವಾಗಿ ಹತ್ತು ತಲೆಯವನು ಎಂದಲ್ಲ, ಬದಲಿಗೆ ಮನುಷ್ಯ ಮಾತ್ರರ ಹತ್ತು ಪಟ್ಟು ಬುದ್ಧಿವಂತಿಕೆ ಉಳ್ಳವನು ಎಂದರ್ಥ.

ಎಂತಹ ಪರಾಕ್ರಮಿ ಎಂದರೆ ನವಗ್ರಹಗಳನ್ನೂ ತನ್ನ ಅಡಿಯಾಳಾಗಿ ಮಾಡಿಕೊಂಡವನು. ಸಾಕ್ಷಾತ್ ಶನಿಯನ್ನು ತನ್ನ ಕಾಲಡಿ ಬಂಧಿಸಿ ಇಟ್ಟುಕೊಂಡವನು. ಹಾಗಾದರೆ ಇಂತಹ ಅದ್ವಿತೀಯ ಪುರುಷನ ಪತನ ಹೇಗಾಯಿತು. ಇದಕ್ಕೆ ಮೂಲ ಕಾರಣ ಅವನ ಅಹಂಕಾರ.

ರಾವಣ ಮತ್ತು ರಾಮನಲ್ಲಿನ ಮೂಲಭೂತ ವ್ಯತ್ಯಾಸ ವೇನೆಂದರೆ ರಾಮ ಇಚ್ಛಾ ಮುಕ್ತ ನಾಗಿದ್ದ ಆದರೆ ರಾವಣ ಇಚ್ಛೆಯ ಪಾಶದಿಂದ ಬಂಧಿತ ನಾಗಿದ್ದ. ರಾವಣ ಮಾನವತೆಯ ಮೇಲೆ ಅಧಿಪತ್ಯ ಸಾಧಿಸಿದ ಆದರೆ ರಾಮ ಮಾನವತೆಯಿಂದ ಅಧಿಕಾರ ನಡೆಸಿದ. ಇಂತಹ ವಾಲ್ಮೀಕಿ ರಾಮಾಯಣದಲ್ಲಿ ಯುದ್ಧ ಕಾಂಡದಲ್ಲಿ ಪ್ರಸಂಗವೊಂದು ಬರುತ್ತದೆ. ಅದೇನೆಂದರೆ ರಾಮ ಯುದ್ಧ ಸಂಕಲ್ಪ ಕೈಗೊಂಡು ರಾವಣನ ಮೇಲೆ ಯುದ್ಧ ಮಾಡುವ ಮೊದಲು ಲಿಂಗ ಪ್ರತಿಷ್ಠಾಪಿಸಿ ಶಿವ ಪೂಜೆ ಕೈಗೊಳ್ಳಲು ನಿರ್ಧರಿಸುತ್ತಾನೆ. ಆಗ ಪಕ್ಕದಲ್ಲಿದ್ದ ಜಾಂಬವಂತನಲ್ಲಿ ವೇದ ಶಾಸ್ತ್ರ ಪಾರಂಗತ ಬ್ರಾಹ್ಮಣ ನನ್ನು ಪೂಜೆಗೆ ಪೌರೋಹಿತ್ಯ ವಹಿಸಿಕೊಳ್ಳಲು ಕರೆತರಲು ಕೇಳಿಕೊಳ್ಳುತ್ತಾನೆ. ಜಾಂಬವಂತನೂ ಸಾಧಾರಣದವನಲ್ಲ



ಆತನೂ ಕೂಡಾ ಬ್ರಹ್ಮ ದೇವರ ಮೊಮ್ಮಗ. ಅವನು ಶಿವ ಪೂಜೆಗೆ ಪೌರೋಹಿತ್ಯ ವಹಿಸಿಕೊಳ್ಳಲು ಯೋಗ್ಯ ವ್ಯಕ್ತಿ ರಾವಣನೊಬ್ಬ ಮಾತ್ರ ಎಂದು ತೀರ್ಮಾನಿಸುತ್ತಾನೆ. ಕಾರಣ ರಾವಣನೊಬ್ಬ ಮಹಾಬ್ರಾಹ್ಮಣ ಮಾತ್ರವಲ್ಲದೆ ಮೂರು ಲೋಕದಲ್ಲೇ ಖ್ಯಾತಿ ಹೊಂದಿರುವ ಶ್ರೇಷ್ಠ ಶಿವ ಭಕ್ತ ಕೂಡಾ. ಆದರೆ ರಾವಣ ಸಾಕ್ಷಾತ್ ತನ್ನ ಶತ್ರುವಿನ ಪೌರೋಹಿತ್ಯ ವಹಿಸಿಕೊಳ್ಳಲು ಹೇಗೆ ಒಪ್ಪಿಕೊಂಡಾನು ಎಂಬ ಜಿಜ್ಞಾಸೆ ಹುಟ್ಟಿಕೊಳ್ಳುತ್ತದೆ. ಆದರೂ ಪ್ರಯತ್ನಿಸಿ ನೋಡೋಣ ಎಂದು ಲಂಕಾನಗರಿಯನ್ನು ಪ್ರವೇಶಿಸುತ್ತಾನೆ. ಜಾಂಬವಂತನ ಆಗಮನ ಮತ್ತು ಅವನ ಉದ್ಧೇಶ ವನ್ನು ಅರಿತುಕೊಂಡ ರಾವಣ ಅವನನ್ನು ಆದರ ಸತ್ಕಾರದೊಂದಿಗೆ ಬರಮಾಡಿಕೊಳ್ಳಬೇಕೆಂದು ತನ್ನವರಿಗೆ ಆಜ್ಞಾಪಿಸುತ್ತಾನೆ. ಅಂತೇಯೆ ಜಾಂಬವಂತನನ್ನು ತಾನೇ ಎದುರ್ಗೊಂಡು ಕಾಲಿಗೆ ನಮಸ್ಕರಿಸಿ ಬಂದ ಉದ್ದೇಶ ವೇನೆಂದು ಕೇಳಿಕೊಳ್ಳುತ್ತಾನೆ.

ಜಾಂಬವಂತನು ರಾಮ ಯುದ್ಧ ಆರಂಭಿಸುವ ಮೊದಲು ಸಂಕಲ್ಪ ಯಜ್ಞ ಮಾಡಲು ನಿರ್ಧರಿಸಿ ಅದರಂತೆ ಲಿಂಗ ಪ್ರತಿಷ್ಠಾಪಿಸಿ ಶಿವಪೂಜೆ ಮಾಡಬೇಕೆಂದಿರುವನೆಂದೂ ಇದಕ್ಕೆ ರಾವಣ ಪೌರೋಹಿತ್ಯ ವಹಿಸಿಕೊಳ್ಳಬೇಕೆಂದು ಕೋರಿಕೊಳ್ಳುತ್ತಾನೆ. ಆಗ ರಾವಣ , ರಾಮ ತನ್ನ ಶತ್ರುವೇ ಆಗಿದ್ದರೂ ಬ್ರಾಹ್ಮಣನ ಪರಮ ಕರ್ತವ್ಯವಾದ ಪೌರೋಹಿತ್ಯ ನಿರಾಕರಿಸಲು ಆಗುವುದಿಲ್ಲ ಆದ್ದರಿಂದ ತಾನು ಬರುವುನೆಂದು ತಿಳಿಸುತ್ತಾನೆ. ಅಂತೇಯೆ ರಾಮನು ವನವಾಸಿಯಾಗಿ ಬರಿಗೈಯಲ್ಲಿ ಇರುವಾಗ ಅವನಲ್ಲಿ ಪೂಜಾ ಸಾಮಗ್ರಿಗಳು ಇರುವ ಸಾಧ್ಯತೆ ಇಲ್ಲ ಆದ್ದರಿಂದ ತಾನೇ ಸಾಮಗ್ರಿಗಳನ್ನು ತರುವುದಾಗಿ ಹೇಳುತ್ತಾನೆ. ಕೊನೆಗೊಂದು ಪ್ರಶ್ನೆ ಮೂಡುತ್ತದೆ ಯಜ್ಞ ಕ್ಕೆ ಸಪತ್ನೀಕ ಕೂರಬೇಕಾದ ರಾಮ ಏನು ಮಾಡಬೇಕು ಎಂದು. ಆಗ ರಾವಣನೇ ಅಶೋಕವನಕ್ಕೆ ಹೋಗಿ ಸೀತೆಯನ್ನು ಭೇಟಿಯಾಗಿ ಒಂದು ದಿನದ ಮಟ್ಟಿಗೆ ಸೀತೆ ಯಜ್ಞ ಉದ್ಧೇಶಕ್ಕೆ ರಾಮನೊಂದಿಗಿರಲು ಸ್ನಾನ, ಯೋಗ್ಯ ವಸ್ತ್ರಾದಿಗಳಿಂದ ಸಾಲಂಕೃತಳಾಗಿ ಸಿದ್ಧಳಾಗಬೇಕೆಂದು ಆದೇಶಿಸುತ್ತಾನೆ. ಅಂತೆಯೇ ಮಗನಾದ ಇಂದ್ರಜಿತ್‌ಗೆ ಸೀತೆಯನ್ನು ಯಜ್ಞ ಸ್ಥಳಕ್ಕೆ ಕರೆತರಲು ಹೇಳುತ್ತಾನೆ. ಒಟ್ಟಿನಲ್ಲಿ ಆಜಾನುಬಾಹು ರಾಮನಿಂದಲೇ ಮರಳಿನಿಂದ ತಯಾರಿಸಲ್ಪಟ್ಟ ಲಿಂಗಕ್ಕೆ ರಾವಣನ ಪೌರೋಹಿತ್ಯದಲ್ಲಿ ಸಂಕಲ್ಪ ಪೂಜೆ, ಯಜ್ಞಗಳು ನಡೆಯುತ್ತವೆ. ದಂಪತಿಗಳಿಬ್ಬರೂ ರಾವಣನ ಪಾದಕ್ಕೆ ನಮಸ್ಕರಿಸಿ ಆಶೀರ್ವಾದ ಬೇಡುತ್ತಾರೆ.

ಅಂತೆಯೇ ರಾಮನ ಕೈಗೆ ವಿಜಯ ಕಂಕಣ ಕಟ್ಟಿ ಉದ್ಧೇಶಿತ ಕಾರ್ಯದಲ್ಲಿ ವಿಜಯೀ ಯಾಗಲೆಂದು ರಾವಣ ಆಶೀರ್ವದಿಸುತ್ತಾನೆ. ಕೊನೆಗೆ ತನ್ನ ದಕ್ಷಿಣೆ ಸ್ವೀಕರಿಸಬೇಕೆಂದು ರಾಮ ರಾವಣನಲ್ಲಿ ಕೇಳಿಕೊಳ್ಳುತ್ತಾನೆ. ಆಗ ರಾವಣ , ರಾಜ್ಯ ಕಳೆದುಕೊಂಡು ಉಟ್ಟ ಬಟ್ಟೆಯಲ್ಲಿ ವನವಾಸಿಯಾಗಿರುವ ನಿನ್ನಲ್ಲಿ ನಾನು ಏನೆಂದು ಕೇಳಲಿ ಎನ್ನುತ್ತಾನೆ. ಆಗ ರಾಮನು ರಘುವಂಶದವರು ಯಜ್ಞ ನೆರವೇರಿಸಿಕೊಟ್ಟವರಿಗೆ ದಕ್ಷಿಣೆ ಕೊಡದಿದ್ದರೆ ಬಹುದೊಡ್ಡ ಅಪಚಾರವಾಗುವುದು ಆದ್ದರಿಂದ ದಕ್ಷಿಣೆಯನ್ನು ಕೋರಿಕೊಳ್ಳಬೇಕೆಂದು ವಿನಂತಿಸಿ ಕೊಳ್ಳುತ್ತಾನೆ.

**ಆಗ ರಾವಣನು ತನ್ನ ಮರಣ ಸಮಯದಲ್ಲಿ ರಾಮ, ಸೀತೆಯರು ಮೂಲಸ್ವರೂಪಿಗಳಾಗಿ ತನ್ನೆದುರು ಪ್ರಕಟವಾಗಬೇಕು ಮತ್ತು ಇದೇ ನನ್ನ ದಕ್ಷಿಣೆ ಎನ್ನುತ್ತಾನೆ. ಇದೊಂದು ಬಹಳ ಸುಂದರ ಮತ್ತು ಹೃದಯಕ್ಕೆ ಅತ್ಯಾನಂದಕೊಡುವ ಪ್ರಸಂಗ. ಇದರಿಂದ ಹಿಂದೂ ಧರ್ಮದ ಶ್ರೇಷ್ಠತೆ ಅಭಿವ್ಯಕ್ತವಾಗಿದೆ. ಒಟ್ಟಿನಲ್ಲಿ ಸಾರಾಂಶವೇನೆಂದರೆ ಪ್ರತಿಯೊಬ್ಬನಲ್ಲಿಯೂ ರಾಮನೂ ಇದ್ದಾನೆ, ರಾವಣನೂ ಇದ್ದಾನೆ, ಇವರುಗಳು ಪ್ರಾಸಂಗಿಕವಾಗಿ ಆಯಾಯ ಕಾಲಕ್ಕೆ ಅಭಿವ್ಯಕ್ತಿ ಗೊಳ್ಳುತ್ತಿರುತ್ತಾರೆ.**

## ಪಿಯುಸಿ ಫಲಿತಾಂಶದಲ್ಲಿ ಸಿಎಂಆರ್ ನ್ಯಾಷನಲ್ ಪಿಯು ಕಾಲೇಜು ಉತ್ತಮ ಸಾಧನೆ

• ಉದಯವಾಹಿನಿ, ಬೆಂಗಳೂರು



ಹೆಸರು: ಮೇಘನಾ ಎಂ ನಂಬಿಯಾರ್
ಶೇ : 97.3% ವಿಜ್ಞಾನ




ಹೆಸರು: ಕೆ. ಇಶಾನಿ
ಶೇ: 97.67%
ವಾಣಿಜ್ಯ

ನಗರದ ಸಿಎಂಆರ್ ನ್ಯಾಷನಲ್ ಪಿಯು ಕಾಲೇಜು 2024-25ನೇ ಶೈಕ್ಷಣಿಕ ಸಾಲಿನ ಪಿಯು ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಿದೆ. 2024-25ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಿಎಂಆರ್ ನ್ಯಾಷನಲ್ ಪಿಯು ಕಾಲೇಜಿನ ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಮೇಘನಾ ಎಂ ನಂಬಿಯಾರ್ ಶೇ 97.3%, ಆಶಾ ಗ್ರೇಸ್ ಮ್ಯಾಥ್ಯ 96.5% ಮತ್ತು ಪ್ರೇರಣಾ ಮೂಲಚಂದಾನಿ 96.33% ಅಂಕಗಳನ್ನು ಪಡೆದು ತೇರ್ಗಡೆಯಾಗುವ ಮೂಲಕ ವಿಜ್ಞಾನ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಕೆ.ಇಶಾನಿ 97.67%, ತನುಶ್ರೀ.ಆರ್ 96.5% ಮತ್ತು ವಂಶಿ ಎನ್ ಪಟೇಲ್ 95.17% ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮತ್ತು ಕಾಲೇಜಿನ ಉತ್ತಮ ಫಲಿತಾಂಶ ಕುರಿತು ಹರ್ಷ ವ್ಯಕ್ತಪಡಿಸಿದ ಸಿಎಂಆರ್ ನ್ಯಾಷನಲ್ ಪಿಯು ಕಾಲೇಜು ಪ್ರಾಂಶುಪಾಲ್ ಮೇಜರ್ ನೀತಾಶಾ ಹೆಬ್ಬಾರ್ ಕೆ ಅವರು ಮಾತನಾಡಿ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡುವ ಮೂಲಕ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಈ ಸಾಧನೆಗೆ ವಿದ್ಯಾರ್ಥಿಗಳನ್ನು ಮನದುಂಬಿ ಅಭಿನಂದಿಸುತ್ತೇನೆ ಹಾಗೂ ಉಪನ್ಯಾಸಕರ ಮತ್ತು ಪೋಷಕರ ನಿರಂತರ ಬೆಂಬಲವನ್ನು ಶ್ಲಾಘಿಸುತ್ತೇನೆ ಎಂದು ಹೇಳಿದರು. ವಿದ್ಯಾರ್ಥಿಗಳ ನಿರಂತರ ಪರಿಶ್ರಮ, ಉಪನ್ಯಾಸಕರ ಗುಣಾತ್ಮಕ ಬೋಧನೆ ಜೊತೆಗೆ ಪೋಷಕರ ಸಹಕಾರ, ಆಡಳಿತ ಮಂಡಳಿಯ ಸಕಾರಾತ್ಮಕ ಪ್ರೋತ್ಸಾಹದಿಂದ ನಮ್ಮ ಕಾಲೇಜು ಉತ್ತಮ ಫಲಿತಾಂಶ ಪಡೆಯಲು ಸಾಧ್ಯವಾಯಿತು ಎಂದು ಪ್ರಾಂಶುಪಾಲರು ಸಂತೋಷ ವ್ಯಕ್ತಪಡಿಸಿದರು.


## 6 ವಿಧೇಯಕಗಳು ಬಾಕಿ ಉಳಿಸಿಕೊಂಡ ಗವರ್ನರ್

• ಉದಯವಾಹಿನಿ, ಬೆಂಗಳೂರು

ರಾಜ್ಯಗಳ ಅಧಿವೇಶನದಲ್ಲಿ ಅಂಗೀಕೃತಗೊಂಡ ವಿಧೇಯಕಗಳು ಆಯಾ ರಾಜ್ಯಪಾಲರ ಅಂಕಿತ ಅತ್ಯ ಅವಶ್ಯಕವಾಗಿದೆ. ಆದರೆ, ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ಸಂಘರ್ಷ ಏರ್ಪಟ್ಟರೆ ವಿಧಯೇಕಗಳು ಪಾಸಾಗದೆ ಬಾಕಿ ಉಳಿದುಕೊಳ್ಳುತ್ತವೆ. ಇದಕ್ಕೆ ಸೂಕ್ತ ಉದಾಹರಣೆ ತಮಿಳುನಾಡು ಮತ್ತು ಕರ್ನಾಟಕ. ತಮಿಳುನಾಡಿನಲ್ಲಿ ರಾಜ್ಯಪಾಲರು 10 ಪ್ರಮುಖ ಮಸೂದೆಗಳಿಗೆ ಅಂಕಿತ ಹಾಕದೆ ತಡೆ ಹಿಡಿದ್ದರು. ಈ ಸಂದರ್ಭದಲ್ಲಿ ಅಲ್ಲಿನ ಸರ್ಕಾರ ಸುಪ್ರೀಂಕೋರ್ಟ್‌ನ ಮೆಟ್ಟಿಲು ಏರಿತು. ಆಗ ಸುಪ್ರೀಂಕೋರ್ಟ್, ಮಸೂದೆಗಳಿಗೆ ಅಂಕಿತ ಹಾಕದೆ ತಡೆಹಿಡಿದ ತಮಿಳುನಾಡು ರಾಜ್ಯಪಾಲರ ನಿರ್ಧಾರ ಕಾನೂನುಬಾಹಿರ ಮತ್ತು ನಿರಂಕುಶಯುತವಾದದು ಎಂದು ಹೇಳಿತ್ತು. ಇದೀಗ, ಕರ್ನಾಟಕ ರಾಜ್ಯದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಬಿಬಿಎಂಪಿ ವಿಭಜನೆ ಮಾಡಿ ಬೆಂಗಳೂರು ನಗರ ವಿಸ್ತೀರ್ಣ ಮಾಡುವ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ ಸೇರಿದಂತೆ ಒಟ್ಟು 6 ವಿಧೇಯಕಗಳಿಗೆ ಅಂಕಿತ ಹಾಕಿಲ್ಲ. ಈ ಆರು ವಿಧೇಯಕಗಳಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕಕ್ಕೆ ಹೆಚ್ಚಿನ ಸ್ಪಷ್ಟನೆ ಕೋರಿ ರಾಜ್ಯ ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದಾರೆ.



## ಇತರರೊಂದಿಗೆ ಮಾತನಾಡುವಾಗ ನೀವು ತಪ್ಪಿಸಬೇಕಾದ ವರ್ತನೆಗಳಿವು!



**ಇತರರ ಮೌಖಿಕವಲ್ಲದ ಸೂಚನೆಗಳನ್ನು ನಿರ್ಲಕ್ಷಿಸಬೇಡಿ**

**ಸಂವಹನ ಎಂದರೆ ಕೇವಲ ಪದಗಳ ಮೂಲಕವೇ ಆಗಬೇಕೆಂದೇನಿಲ್ಲ ಕೆಲವರ ದೈಹಿಕ ಭಾಷೆಗಳು, ಸಣ್ಣ ಸಣ್ಣ ವ್ಯಕ್ತಪಡಿಸುವಿಕೆಗಳು, ಸ್ವರಗಳು ಇತ್ಯಾದಿಗಳೂ ಮಾತನಾಡುತ್ತವೆ. ಆದ್ದರಿಂದ ಮೌಖಿಕ ಮತ್ತು ಮೌಖಿಕವಲ್ಲದ ಸೂಚನೆಗಳು ಜನರ ನಡುವೆ ಪರಿಣಾಮಕಾರಿ ಸಂವಹನಕ್ಕೆ ಕೊಡುಗೆ ನೀಡುತ್ತವೆ.**

ಕೆಲವೊಮ್ಮೆ ನಾವು ಮಾತನಾಡುವ ಅಥವ ಇನ್ನಿತರ ಕ್ರಿಯೆಗಳು ಉದ್ದೇಶಪೂರ್ವಕವಲ್ಲದೆಯೂ ಅಸಭ್ಯವಾಗಿಯೋ ಅಥವಾ ಇತರರನ್ನು ನೋಯಿಸುವಂತೆಯೋ ಕಾಣಿಸಿಕೊಳ್ಳಬಹುದು. ಇದಕ್ಕಾಗಿ ಕಣ್ಣಿನ ಸಂಪರ್ಕವನ್ನು ತಪ್ಪಿಸುವುದು, ವ್ಯಂಗ್ಯವಾಡುವಂತಹ ಇತರ ಕ್ರಿಯೆಗಳು ಇತರರನ್ನು ಅಗೌರವಗೊಳಿಸುವಂತೆ ಮಾಡುತ್ತದೆ.

ಈ ನಡವಳಿಕೆಗಳ ಬಗ್ಗೆ ಜಾಗರೂಕರಾಗಿರುವುದು ಹೆಚ್ಚು ಸಕಾರಾತ್ಮಕ ಮತ್ತು ಗೌರವಾನ್ವಿತ ಸಂವಹನಕ್ಕೆ ಕಾರಣವಾಗುತ್ತದೆ ಈ ಕ್ರಿಯೆಗಳು ಯಾವುವು ನೋಡೋಣ. ಯಾವುದೇ ಸಂಬಂಧದಲ್ಲಿ ಉತ್ತಮ ಸಂವಹನವು ಮುಖ್ಯವಾಗಿದೆ. ಮತ್ತು ಅದು ಸ್ಪಷ್ಟವಾಗಿ ಮಾತನಾಡುವುದರ ಬಗ್ಗೆ ಮಾತ್ರವಲ್ಲ, ಚೆನ್ನಾಗಿ ಕೇಳುವುದೂ ಸಹ ಮುಖ್ಯವಾಗುತ್ತದೆ. ಕೆಲವೊಮ್ಮೆ ಸಂಭಾಷಣೆಯ ಸಮಯದಲ್ಲಿ ನಮ್ಮ ಕ್ರಿಯೆಗಳು ನಾವು ಉದ್ದೇಶಪೂರ್ವಕವಾಗಿ ಮಾಡದಿದ್ದರೂ ಸಹ ಅಸಭ್ಯವಾಗಿ ಕಾಣಿಸಬಹುದು. ಇತರರನ್ನು ಅಡ್ಡಿ ಪಡಿಸುವುದು ಕಣ್ಣಿನ ಸಂಪರ್ಕವನ್ನು ತಪ್ಪಿಸುವುದು ಅಥವಾ ವಿಚಲಿತರಾಗುವುದು ಜನರನ್ನು ನಿರ್ಲಕ್ಷಿಸಲಾಗಿದೆ ಎಂದು ಭಾವಿಸಬಹುದು.

ವ್ಯಂಗ್ಯವಾಡುವುದು ಅಥವಾ ಅನಪೇಕ್ಷಿತ ಸಲಹೆಯನ್ನು ನೀಡುವುದು ಸಹ ನೋವನ್ನುಂಟು ಮಾಡುತ್ತದೆ. ಈ ನಡವಳಿಕೆಗಳ ಬಗ್ಗೆ ತಿಳಿದಿರುವುದು ಈ ನಡವಳಿಕೆಗಳ ಬಗ್ಗೆ ತಿಳಿದಿರುವುದು ಗೌರವಯುತ ಸಂವಹನವನ್ನು ಖಚಿತ ಪಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಆದ್ದರಿಂದ, ಈ ಚಿಹ್ನೆಗಳ ಬಗ್ಗೆ ಎಚ್ಚರದಿಂದಿರಿ, ಸಂಭಾಷಣೆಗಳನ್ನು ಸಕಾರಾತ್ಮಕವಾಗಿಡಲು ಅವುಗಳನ್ನು ತಪ್ಪಿಸಿ. ಆದರೂ ಅದು ನಮ್ಮ ಉದ್ದೇಶವಲ್ಲ. ಆದ್ದ ರಿಂದ, ಮನೋ ವಿಜ್ಞಾನದ ಪ್ರಕಾರ, ನೀವು ಇತರರೊಂದಿಗೆ ಮಾತನಾಡುವಾಗ ತಿಳಿಯದೆ ಅಸಭ್ಯವಾಗಿ ವರ್ತಿಸಬಹುದು ಎಂದು ಸೂಚಿಸುವ ಕೆಲವು ಚಿಹ್ನೆಗಳನ್ನು ಇಲ್ಲಿ ನಾವು ಉಲ್ಲೇಖಿಸುತ್ತೇವೆ. ಅವುಗಳ ಬಗ್ಗೆ ಎಚ್ಚರದಿಂದಿರಿ ಮತ್ತು ಯಾವುದೇ ವೆಚ್ಚದಲ್ಲಿ ಅವುಗಳನ್ನು ತಪ್ಪಿಸಿ.




**ಇತರರಿಗೆ ಮಾತನಾಡುವಾಗ ನಿರಂತರವಾಗಿ ಅಡ್ಡಿಪಡಿಸುವುದು:** ಯಾರಾದರೂ ಮಾತಾನಾಡುವಾಗ ಅಡ್ಡಿ ಪಡಿಸುವುದು ಅಗೌರ ವವೆಂದು ತೋರುತ್ತ ದೆ ಮತ್ತು ಅವರನ್ನು ನಿರ್ಲಕ್ಷಿಸಲಾಗಿದೆ ಎಂದು ಭಾವಿಸುವಂತೆ ಮಾಡುತ್ತದೆ.

ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ನೀವು ಉತ್ಸುಕರಾಗಿದ್ದರೂ ಸಹ ನಿಮ್ಮೊಂದಿಗೆ ಬೇರೆಯವರು ಮಾತನಾಡುವಾಗ ಅವರ ಮಾತುಗಳಿಗೆ ಅಡಚಣೆ ಮಾಡುವುದು ಅಥವಾ ನಿರಂತರವಾಗಿ ಸಂಪರ್ಕ ಕಡಿತಗೊಳಿಸುವುದು ಅಸಹನೆ ಮತ್ತು ಗೌರವದ ಕೊರತೆಯನ್ನು ತೋರಿಸುತ್ತದೆ. ಮನಶ್ಶಾಸ್ತ್ರಜ್ಞರು ಹೇಳುವಂತೆ, ಅಡಚಣೆಗಳು ಇತರ ವ್ಯಕ್ತಿಯ ಆಲೋಚನೆಗಳ ಹರಿವನ್ನು ಅಡ್ಡಿಪಡಿಸುತ್ತವೆ ಮತ್ತು ಅವರು ಮುಖ್ಯವಾದರವೆಂದು ಭಾವಿಸಬಹುದು. ಸಂವಹನವನ್ನು ಸುಧಾರಿಸಲು, ಸಕ್ರಿಯವಾಗಿ ಆಲಿಸುವುದನ್ನು ಅಭ್ಯಾಸ ಮಾಡಿ ಮತ್ತು ನೀವು ಮಾತನಾಡುವ ಮೊದಲು ಇತರ ವ್ಯಕ್ತಿಯು ಮುಗಿಸುವವರೆಗೆ ಕಾಯಿರಿ. ಇದು ಅವರು ಏನು ಹೇಳಬೇಕೆಂದು ನೀವು ಗೌರವಿಸುತ್ತೀರಿ ಎಂದು ತೋರಿಸುತ್ತದೆ.

**ಎಲ್ಲಾ ಸಂಭಾಷಣೆಗಳಲ್ಲಿ ಪ್ರಾಬಲ್ಯತೆ ಸಾಧಿಸುವುದು:** ನೀವು ಆಗಾಗ್ಗೆ ಚರ್ಚೆಗಳನ್ನು ನಿಮ್ಮ ಕಡೆಗೆ ತಿರುಗಿಸಿದರೆ, ವಿಶೇಷವಾಗಿ ಯಾರಾದರೂ ತಮ್ಮ ನೋವು ಅಥವಾ ಆಲೋಚನೆಗಳನ್ನು ಹಂಚಿಕೊಳ್ಳುತ್ತಿರುವಾಗ, ನೀವು ಸಂಭಾಷಣೆಗಳನ್ನು ನಿಮ್ಮ ಕಡೆಗೆ ತಿರುಗಿಸುವ ಪ್ರವೃತ್ತಿಯನ್ನು ಹೊಂದಿದ್ದರೆ, ಅದು ನಿಮ್ಮ ಅಸಭ್ಯ ಎಂದು ಪರಿಗಣಿಸಬಹುದು. ಸಂಭಾಷಣೆಗಳು ದ್ವಿಮುಖ ಮಾರ್ಗದಲ್ಲಿಯೇ ಇರಬೇಕು ಏಕೆಂದರೆ ಅಲ್ಲಿ ಇಬ್ಬರೂ ತಮ್ಮನ್ನು ತಾವು ವ್ಯಕ್ತಪಡಿಸಲು ಅವಕಾಶವನ್ನು ಹೊಂದಿರ ಬೇಕು. ಕೇವಲ ಒಬ್ಬರೇ ಚರ್ಚೆಯಲ್ಲಿ ನಿರಂತರವಾಗಿ ತಮ್ಮದೇ ಮಾತುಗಳನ್ನು ವ್ಯಕ್ತಪಡಿಸುವುದರಿಂದ ಎದುರಿಗೆ ಇರುವ ವ್ಯಕ್ತಿಯ ಮಾತುಗಳನ್ನು ನಿರ್ಲಕ್ಷಿಸಿದಂತಾಗುವುದು ಮತ್ತು ಅವರು ತಾವು ಅಥವಾ ತಮ್ಮ ಮಾತುಗಳು ಮುಖ್ಯವಲ್ಲ ಎಂದು ಭಾವಿಸಬಹುದು. ಹೀಗೆ ಮಾಡುವ ಬದಲಿಗೆ ಸಹಾನುಭೂತಿ ತೋರಿಸಿ ಮತ್ತು ಇತರರ ಮಾತುಗಳನ್ನು ನಿಜವಾಗಿಯೂ ಆಲಿಸಿ. ಪ್ರತಿಯೊಂದು ಸಂಭಾಷಣೆಯೂ ನಿಮ್ಮ ಬಗ್ಗೆಯೇ ಅಥವಾ ನೀವು ಹೇಳುವುದನ್ನು ಕೇಳಬೇಕೆನ್ನುವುದಿರುವುದಿಲ್ಲ ಆದ್ದರಿಂದ, ಯಾವಾಗಲೂ ಗಮನಸೆಳೆಯುವುದನ್ನು ತಪ್ಪಿಸಿ ಇತರರು

## ರಾಮಾಯಣ



ದಶರಥ ರಾಯನ ದು:ಖ

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ನೀನು ಧರ್ಮಮಾರ್ಗಪ್ರವರ್ತಕನಾದ್ದರಿಂದ ನಿನ್ನ ನಿಶ್ಚಯವನ್ನು ಯಾರೂ ತಡೆಯಲಾರರು. ಹಾಗಾದರೂ ಇಂದು ಒಂದು ದಿವಸ ಇಲ್ಲಿದ್ದು ನಾಳೆ ಪ್ರಾತಃಕಾಲ ಹೊರಡು, ಇಂದು ಒಂದು ದಿವಸವಾದರೂ ನಿನ್ನ ಮುಖವನ್ನು ನೋಡಿಕೊಂಡಿರುತ್ತೇನೆ. ನೀನು ಈ ರಾತ್ರಿ ಇಲ್ಲಿದ್ದು ನನ್ನನ್ನೂ ನಿನ್ನ ತಾಯಿಯನ್ನೂ ನೋಡಿಕೊಂಡು ನಿನಗೆ ಬೇಕಾದ ಭೋಜ್ಯವಸ್ತುಗಳನ್ನು ಅನುಭವಿಸು ಶ್ರೀರಾಮ ಸರ್ವಥಾ ನೀನು ನನಗೆ ಪ್ರಿಯವನ್ನು ಮಾಡಬೇಕೆಂಬ ಬುದ್ಧಿಯಿಂದ ಅಸಾಧ್ಯವಾದ ವನವಾಸಕ್ಕೆ ಯತ್ನವನ್ನು ಮಾಡುತ್ತಿದ್ದೀಯೆ. ನನ್ನ ಸತ್ಯದ ಸಾಕ್ಷಿಯಾಗಿ ನೀನು ವನಕ್ಕೆ ಹೋಗುವುದು ನನ್ನ ಮನಸ್ಸಿಗೆ ಒಪ್ಪುವುದಿಲ್ಲ. ಬೂದಿಮುಚ್ಚಿದ ಕೆಂಡಕ್ಕೆ ಸಮಾನವಾದ ಕಪಟ ಸ್ನೇಹವುಳ್ಳ ಕೈಕೇಯಿಯ ಮಾತಿಗೆ ಮೋಸಹೋದೆನು. ಆದ್ದರಿಂದ ನಿನಗೆ ಪಟ್ಟಾಭಿಷೇಕವನ್ನು ಮಾಡಲು ಯತ್ನ ಮಾಡಿ ಆ ಯತ್ನವನ್ನು ನಿಲ್ಲಿಸಿ ನಿನ್ನನ್ನು ವನವಾಸಕ್ಕೆ ಕಳುಹಿಸಿದ ಅಕೃತ್ಯವನ್ನು ಸಹಿಸು, ದುಷ್ಟೆಯಾದ ಕೈಕೇಯಿಯ ಮಾತಿಗೆ ಮರುಳಾದ ನನ್ನನ್ನು ಜೇಷ್ಠಪುತ್ರನಾದ ನೀನು ಋಣಮುಕ್ತನನ್ನಾಗಿ ಮಾಡಲು ಇಚ್ಛೆಸಿದ್ದೀಯ ಎಂದು ನುಡಿದನು. ಶ್ರೀರಾಮನು ಲಕ್ಷ್ಮಣಸಮೇತವಾಗಿ ಹೀಗೆಂದನು: ಮಹಾರಾಜ, ಈ ರಾತ್ರಿ ಇಲ್ಲಿದ್ದು ಬೇಕಾದ ವಸ್ತುಗಳನ್ನು ಅನುಭವಿಸುವುದಕ್ಕಿಂತಲೂ ಈಗಲೇ ತೆರಳಿದೇನಾದರೆ ಸಮಸ್ತ ಭೋಗಗಳನ್ನೂ ಅನುಭವಿಸಿದವನಾಗುವೆನು. ನಿಖಿಲ ಧನಧಾನ್ಯಗಳಿಂದ ಪರಿಪೂರ್ಣವಾದ ಭೂಮಂಡಲವನ್ನು ಭರತನಿಗೆ ಕೊಡು. ನನಗೆ ನಿನ್ನ ಮಾತನ್ನು ಮೀರದೆ ಇರುವುದೇ ಪರಮಸುಖ. ನನಗೆ ರಾಜ್ಯಾಧಿಪತ್ಯದಲ್ಲಿ ಆಶೆಯಿಲ್ಲ. ನಿನ್ನ ಆಜ್ಞೆಯನ್ನು ಪರಿಪಾಲಿಸುವುದೇ ನನ್ನ ಮನೋರಥ. ನೀನು ದುಃಖವನ್ನು ಬಿಡು. ಕಣ್ಣೀರನ್ನು ಸುರಿಸಬೇಡ. ಲೋಕದಲ್ಲಿ ಸಮುದ್ರವು ಮೇರೆತಪ್ಪವುದೆ! ನಾನು ರಾಜ್ಯವನ್ನು ಬಯಸುವವನಲ್ಲ. ಹಾಗೆಯೇ ಸೀತಾದೇವಿಯೂ ಸುಖವನ್ನು ಬಯಸುವವಳಲ್ಲ. ನಾನು ನಿನ್ನ ಮಾತಿಗೆ ವಿಘ್ನವು ಬರದೆ ನಿನ್ನ ಸತ್ಯವು ಸ್ಥಿರವಾಗಿರಬೇಕೆಂದು ಬಯಸುತ್ತೇನೆ. ಸ್ವರ್ಗಸುಖವನ್ನಾದರೂ ಕಡೆಗೆ ಜೀವವನ್ನಾದರೂ ಬಯಸುವವನಲ್ಲ. ಇದಕ್ಕೆ ನನ್ನ ಸತ್ಯವು ಸಾಕ್ಷಿ! ನೀನೇ ಸಾಕ್ಷಿ! ಇನ್ನು ಒಂದು ಕ್ಷಣಮಾತ್ರವಾದರೂ ಇಲ್ಲಿರಲಾರೆನು. ನನಗೆ ಕಿಂಚಿನ್ಮಾತ್ರವಾದರೂ ದುಃಖವಿಲ್ಲ. ಕೈಕೇಯಿದೇವಿಯು ನನ್ನನ್ನು ವನವಾಸಕ್ಕೆ ಹೋಗ ಹೇಳಿದಾಗಲೇ ನಾನು ಅಂಗೀಕರಿಸಿದೆನು. ಈ ರಾಜ್ಯದಲ್ಲಿ ನನಗೆ ಇಚ್ಛೆಯಿಲ್ಲದ್ದರಿಂದ ವನದಲ್ಲಿ ಸುಖವಾಗಿರುತ್ತೇನೆ. ನನಗೆ ತಂದೆಯೇ ದೇವತಾಸ್ವರೂಪನು. ಆದ್ದರಿಂದ ನಿನ್ನ ಮಾತನ್ನು ದೇವತಾವಾಕ್ಯವೆಂದು ನಂಬಿ ಹದಿನಾಲ್ಕುವರುಷಗಳವರೆಗೆ ವನದಲ್ಲಿದ್ದು ತಿರುಗಿ ಬರುವೆನು. ಆಗ ನೀನು ನನ್ನನ್ನು ಕಂಡು ಸಂತೋಷಪಡುವೆ. ಈ ದುಃಖವನ್ನು ಬಿಡು. ನೀನು ದುಃಖಾಕ್ರಾಂತನಾಗಿದ್ದರೆ ಸಕಲ ಜನರೂ ದುಃಖಪಡುವರು. ನಾನು ನಿನ್ನ ಅಪ್ಪಣೆಯಿಂದ ವನಕ್ಕೆ ಹೋಗುತ್ತೇನೆ. ಈ ಸಮುದ್ರಪರ್ಯಂತವಾದ ಭೂಮಿಯನ್ನು ಭರತನು ಪರಿಪಾಲಿಸಲಿ. ನಿನ್ನ ಪ್ರತಿಜ್ಞೆಯನ್ನು ಪರಿಪಾಲಿಸುವಂಥ ಸುಖವು ನನಗೆ ರಾಜ್ಯಾಧಿಪತ್ಯದ ಸುಖಕ್ಕಿಂತಲೂ ಅಧಿಕವಾದದ್ದು. ಆದ ಕಾರಣ ನನ್ನನ್ನು ಕುರಿತು ದುಃಖವು ಬೇಡ. ನಾನು ವನಕ್ಕೆ ಹೋಗಿ ಕಂದ ಮೂಲ ಫಲಾಹಾರಗಳನ್ನು ಮಾಡಿಕೊಂಡು ಅಲ್ಲಿರುವ ಪುಣ್ಯನದಿಗಳನ್ನೂ ಪುಣ್ಯಪರ್ವತಗಳನ್ನೂ ಪುಣ್ಯತೀರ್ಥಗಳನ್ನೂ ಪವಿತ್ರವಾದ ವೃಕ್ಷಗಳನ್ನೂ ಕಂಡು ಸುಖವಾಗಿರುತ್ತೇನೆ ಎಂದು ನುಡಿದನು.

ಮುಂದುವರಿಯುವುದು...

## ಚರ್ಮದ ಕಾಂತಿ ಹೆಚ್ಚಿಸಲು ಪೇರಳೆಯನ್ನು ಹೀಗೆ ಬಳಸಿ ನೋಡಿ




ಪೇರಳೆ ಆರೋಗ್ಯಕ್ಕೆ ಎಷ್ಟು ಪ್ರಯೋಜನಕಾರಿಯೋ ಚರ್ಮದ ಆರೈಕೆಗೂ ಅಷ್ಟೇ ಉತ್ತಮ ಅಂಶಗಳನ್ನು ಒಳಗೊಂಡಿದೆ. ಪೇರಳೆಯ ತಿರುಳು, ಬೀಜಗಳು ಅಥವಾ ಎಲೆಗಳು ಪ್ರತಿಯೊಂದು ಚರ್ಮದ ಪ್ರಕಾರಕ್ಕೂ ಹಲವಾರು ಪ್ರಯೋಜನಗಳನ್ನು ನೀಡುತ್ತದೆ. ನಿಮ್ಮ ಚರ್ಮದ ಆರೈಕೆಯ ದಿನಚರಿಯಲ್ಲಿ ಪೇರಳೆಯನ್ನು ಸೇರಿಸಿಕೊಳ್ಳಿ, ಇದು ಚರ್ಮವನ್ನು ಸ್ವಚ್ಛಗೊಳಿಸುವುದರಿಂದ ಹಿಡಿದು ಮೈ ಬಣ್ಣವನ್ನು ಹೊಳೆಯುವಂತೆ ಮಾಡುತ್ತದೆ.

ಪೇರಳೆ ಒಂದು ಆರೋಗ್ಯಕರ ಮತ್ತು ರುಚಿಕರ ಹಣ್ಣು. ಪೇರಳೆಯಲ್ಲಿ ಫೈಬರ್, ವಿಟಮಿನ್ ಸಿ ಮತ್ತು ಅನೇಕ ಪೋಷಕಾಂಶಗಳು ಸಮೃದ್ಧವಾಗಿವೆ. ಜೀರ್ಣಕ್ರಿಯೆಯನ್ನು ಸರಿಪಡಿಸಲು ಇದು ಸಹಾಯ ಮಾಡುತ್ತದೆ. ಪೇರಳೆ ಹಣ್ಣಿನ ರುಚಿ ಮತ್ತು ಆರೋಗ್ಯಕರ ಪ್ರಯೋಜನದಿಂದಾಗಿ ಎಲ್ಲರೂ ಅದನ್ನು ತಿನ್ನಲು ಇಷ್ಟಪಡುತ್ತಾರೆ. ವಿಟಮಿನ್ ಎ, ಸಿ ಮತ್ತು ಉತ್ಕರ್ಷಣ ನಿರೋಧಕಗಳಿಂದ ಸಮೃದ್ಧವಾಗಿರುವ ಈ ಪೋಷಕಾಂಶಗಳಿಂದ ತುಂಬಿದ ಹಣ್ಣು ಚರ್ಮಕ್ಕೆ ಅನೇಕ ಪ್ರಯೋಜನಗಳನ್ನು ನೀಡುತ್ತದೆ. ನಿಮ್ಮ ಮೈಬಣ್ಣವನ್ನು ಹೊಳೆಯುವಂತೆ ಮಾಡಲು, ಮೊಡವೆಗಳ ವಿರುದ್ಧ ಹೋರಾಡಲು ಅಥವಾ ವಯಸ್ಸಾದ ಚಿಹ್ನೆಗಳ ವಿರುದ್ಧ ಹೋರಾಡಲು ಪೇರಳೆ ಸಹಕಾರಿ. ಪೇರಳೆ ನಿಮ್ಮ ಚರ್ಮದ ಸಮಸ್ಯೆಗಳಿಗೆ ನೈಸರ್ಗಿಕ ಪರಿಹಾರವಾಗಿದೆ. ಶಾರದಾ ಕೇರ್ - ಹೆಲ್ತ್ ಸಿಟಿ ಚರ್ಮರೋಗ ತಜ್ಞೆ ಡಾ.ಅದಿತಿ ವಾಧ್ವಾ ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

**ಹೊಳಪಿಗಾಗಿ ಪೇರಳೆ ಫೇಸ್ ಮಾಸ್ಕ್:** ಪೇರಳೆಯಲ್ಲಿ ವಿಟಮಿನ್ ಸಿ ಸಮೃದ್ಧವಾಗಿದೆ, ಇದು ಕಪ್ಪು ಕಲೆಗಳನ್ನು ಹಗುರಗೊಳಿಸಲು ಮತ್ತು ಉತ್ತಮ ಚರ್ಮದ ಟೋನ್ ಪಡೆಯಲು ಸಹಾಯ ಮಾಡುತ್ತದೆ.

**ಫೇಸ್ ಮಾಸ್ಕ್ ತಯಾರಿಸಲು:** ಒಂದು ಮಾಗಿದ ಪೇರಳೆಯನ್ನು ನಯವಾದ ಪೇಸ್ಟ್ ಆಗಿ ಮ್ಯಾಶ್ ಮಾಡಿ. ಒಂದು ಚಮಚ ಜೇನುತುಪ್ಪ ಮತ್ತು ಕೆಲವು ಹನಿ ನಿಂಬೆ ರಸ ಸೇರಿಸಿ ಮಿಶ್ರಣ ಮಾಡಿ. ಈ ಮಿಶ್ರಣವನ್ನು ಮುಖಕ್ಕೆ ಹಚ್ಚಿಕೊಂಡು 15 ನಿಮಿಷ ಕಾಲ ಹಾಗೆ ಬಿಡಿ. ಬಳಿಕ ಉಗುರು ಬೆಚ್ಚಗಿನ ನೀರಿನಿಂದ ತೊಳೆಯಿರಿ. ಇದು ಚರ್ಮಕ್ಕೆ ಹೊಳಪು ನೀಡುತ್ತದೆ.



**ರಂಧ್ರಗಳನ್ನು ಬಿಗಿಗೊಳಿಸಲು ಪೇರಳೆ ಟೋನರ್:** ವಯಸ್ಸಾದಂತೆ ಮತ್ತು ಧೂಳು ಮತ್ತು ಮಾಲಿನ್ಯದಂತಹ ಪರಿಸರ ಅಂಶಗಳಿಂದಾಗಿ ನಮ್ಮ ಚರ್ಮವು ಕಳೆಗುಂದುತ್ತದೆ. ಪೇರಳೆ ಹಣ್ಣಿನ ಆಸ್ಟ್ರಿಂಜೆಂಟ್ ಗುಣಲಕ್ಷಣಗಳು ರಂಧ್ರಗಳನ್ನು ಬಿಗಿಗೊಳಿಸಲು ಮತ್ತು ಚರ್ಮವನ್ನು ಟೋನ್ ಮಾಡಲು ಸಹಾಯ ಮಾಡುತ್ತದೆ. ಈ ಟೋನರ್ ವಿಶೇಷವಾಗಿ ಎಣ್ಣೆಯುಕ್ತ ಅಥವಾ ಮೊಡವೆ ಪೀಡಿತ ಚರ್ಮಕ್ಕೆ ಪ್ರಯೋಜನಕಾರಿಯಾಗಿದೆ. ಮುಖವನ್ನು ಸ್ವಚ್ಛಗೊಳಿಸಿದ ನಂತರ ಪೇರಳೆ ಟೋನರ್ ಬಳಸಿ. ಪೇರಳೆ ಎಲೆಗಳನ್ನು 10 ನಿಮಿಷಗಳ ಕಾಲ ನೀರಿನಲ್ಲಿ ಕುದಿಸಿ, ನಂತರ ದ್ರಾವಣವನ್ನು ತಣ್ಣಗಾಗಲು ಬಿಡಿ. ದ್ರವವನ್ನು ಸೋಸಿ ಸ್ಪ್ರೇ ಬಾಟಲಿಗೆ ತುಂಬಿಸಿ.

**ಎಕ್ಸ್‌ಫೋಲಿಯೇಷನ್ ಗಾಗಿ ಪೇರಳೆ ಸ್ಕ್ರಬ್:** ಪೇರಳೆ ಬೀಜಗಳಲ್ಲಿನ ನೈಸರ್ಗಿಕ ಕಣಗಳು ಸತ್ತ ಚರ್ಮದ ಕೋಶಗಳನ್ನು ತೆಗೆದುಹಾಕಲು ಸಹಕಾರಿ. ನಿಮ್ಮ ಚರ್ಮವನ್ನು ಕಲ್ಮಶಗಳಿಂದ ಮುಕ್ತವಾಗಿಡಲು ವಾರಕ್ಕೆ ಒಂದು ಅಥವಾ ಎರಡು ಬಾರಿ ಈ ಸ್ಕ್ರಬ್ ಬಳಸಿ.

**ಮನೆಯಲ್ಲಿ ಪೇರಳೆ ಸ್ಕ್ರಬ್ ತಯಾರಿಸಲು ಹೀಗೆ ಮಾಡಿ:** ಪೇರಳೆ ತಿರುಳನ್ನು ಸಕ್ಕರೆ ಅಥವಾ ಓಟ್ ಮೀಲ್ ನೊಂದಿಗೆ ಮಿಶ್ರಣ ಮಾಡಿ. ವೃತ್ತಾಕಾರದ ಚಲನೆಯಲ್ಲಿ ನಿಮ್ಮ ಮುಖದ ಮೇಲೆ ನಿಧಾನವಾಗಿ ಮಸಾಜ್ ಮಾಡಿ. 15 ನಿಮಿಷ ಬಿಟ್ಟು ಚೆನ್ನಾಗಿ ತೊಳೆಯಿರಿ.

**ಆಂಟಿ ಏಜಿಂಗ್ ಪೇರಳೆ ಸೀರಮ್:** ಲೈಕೋಪೀನ್ ಮತ್ತು ಜೀವಸತ್ವಗಳಂತಹ ಉತ್ಕರ್ಷಣ ನಿರೋಧಕಗಳಿಂದ ತುಂಬಿರುವ ಪೇರಳೆ ಅಕಾಲಿಕ ವಯಸ್ಸಾಗುವಿಕೆಗೆ ಕಾರಣವಾಗುವ ಫ್ರೀ ರಾಡಿಕಲ್ ಗಳ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಪೇರಳೆ ಹಣ್ಣಿನ ತಿರುಳನ್ನು ಅಲೋವೆರಾ ಜೆಲ್ ಮತ್ತು ಒಂದು ಟೀಸ್ಪೂನ್ ರೋಶಿಪ್ ಎಣ್ಣೆಯೊಂದಿಗೆ ಬೆರೆಸಿ ಮಲಗುವ ಮೊದಲು ನಿಮ್ಮ ಮುಖಕ್ಕೆ ಸ್ವಲ್ಪ ಪ್ರಮಾಣದಲ್ಲಿ ಹಚ್ಚಿಕೊಳ್ಳಿ. ಸೀರಮ್ ರಾತ್ರಿಯಿಡೀ ಚರ್ಮದಲ್ಲಿ ಹೀರಲ್ಪಡುವುದರಿಂದ, ಇದು ನಿಮ್ಮ ಚರ್ಮವನ್ನು ಸರಿಪಡಿಸಲು, ಕಾಂತಿಯುತಗೊಳಿಸಲು ಸಹಾಯ ಮಾಡುತ್ತದೆ.

**ಚರ್ಮದ ಆರ್ದ್ರತೆಗಾಗಿ ಪೇರಳೆ ರಸ:** ಪೇರಳೆ ರಸವನ್ನು ಕುಡಿಯುವುದರಿಂದ ಚರ್ಮವನ್ನು ಒಳಗಿನಿಂದ ಹೈಡ್ರೇಟ್ ಮಾಡುತ್ತದೆ ಮತ್ತು ಅದನ್ನು ಮೃದುವಾಗಿ ಮತ್ತು ಆರೋಗ್ಯಕರವಾಗಿಡಲು ಅಗತ್ಯವಾದ ಪೋಷಕಾಂಶಗಳನ್ನು ನೀಡುತ್ತದೆ. ರಸವನ್ನು ತಯಾರಿಸುವುದು ಸುಲಭ. ತಾಜಾ ಪೇರಳೆಯನ್ನು ನೀರು ಒಂದು ಚಮಚ ಜೇನುತುಪ್ಪದೊಂದಿಗೆ ಬೆರೆಸಿ, ಬೀಜಗಳನ್ನು ತೆಗೆಯಲು ಬಯಸಿದರೆ ಸೋಸಿ ಮತ್ತು ಚರ್ಮದ ಚೈತನ್ಯ ಮತ್ತು ಆರ್ದ್ರತೆಯನ್ನು ಹೆಚ್ಚಿಸಲು ಪ್ರತಿದಿನ ಒಂದು ಲೋಟ ಪೇರಳೆ ರಸ ಕುಡಿಯಿರಿ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ರಕ್ತದೊತ್ತಡವಿರುವ ರೋಗಿಗಳು ತಮ್ಮ ರಕ್ತದೊತ್ತಡ ಕಡಿಮೆ ಮಾಡಲು ಮತ್ತು ಕೊಲೆಸ್ಟರಾಲ್ ನಿಯಂತ್ರಣದಲ್ಲಿರಿಸಲು ಕೆಂಪು ವೈನ್ ತೆಗೆದುಕೊಳ್ಳಬಹುದು. ಇದು ಅವರಿಗೆ ಮತ್ತಷ್ಟು ವಿಶ್ರಾಂತಿ ತರುತ್ತದೆ.

**ವೃಷಭ** ಜನರನ್ನು ನಿಮ್ಮಿಷ್ಟದಂತೆ ನಡೆದುಕೊಳ್ಳುವಂತೆ ಒತ್ತಾಯಿಸಬೇಡಿ. ಇತರರ ಆಸಕ್ತಿಯ ಬಗ್ಗೆ ಯೋಚಿಸಿದಲ್ಲಿ ನಿಮಗೆ ಅನಿಯಮಿತ ಸಂತೋಷ ಬರುತ್ತದೆ. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ.

**ಮಿಥುನ** ಜನರು ಮತ್ತು ಅವರ ಉದ್ದೇಶಗಳ ಬಗ್ಗೆ ಅವಸರದ ತೀರ್ಮಾನ ಕೈಗೊಳ್ಳಬೇಡಿ -ಅವರು ಒತ್ತಡದಲ್ಲಿರಬಹುದು ಮತ್ತು ಅವರಿಗೆ ನಿಮ್ಮ ಸಹಾನುಭೂತಿ ಮತ್ತು ತಿಳುವಳಿಕೆಯ ಅಗತ್ಯವಿರುತ್ತದೆ.

**ಕರ್ಕಾಟಕ** ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ.

**ಸಿಂಹ** ನಿಮ್ಮ ಅಸೂಯೆ ವರ್ತನೆ ನಿಮ್ಮನ್ನು ದುಃಖಿಗಳಾಗಿಯೂ ಮತ್ತು ಖಿನ್ನರಾಗಿಯೂ ಮಾಡಬಹುದು. ಆದರೆ ಇದು ಒಂದು ಸ್ವಯಂಕೃತ ಗಾಯವಾಗಿರುವುದರಿಂದ ಇದರ ಬಗ್ಗೆ ಪ್ರಲಾಪಿಸುವ ಅಗತ್ಯವಿಲ್ಲ.

**ಕನ್ಯಾ** ಗುಂಪಿನಲ್ಲಿದ್ದಾಗ ನೀವೇನು ಹೇಳುತ್ತೀರೆಂದು ಎಚ್ಚರವಹಿಸಿ-ನಿಮ್ಮ ಹಠಾತ್ ಟೀಕೆಗಳಿಗೆ ನೀವು ತೀವ್ರವಾಗಿ ಟೀಕೆ ಎದುರಿಸಬೇಕಾಗಬಹುದು. ಪ್ರಣಯ ಸಂಬಂಧದಲ್ಲಿ ನಿಮ್ಮನ್ನು ತಪ್ಪಾಗಿ ತಿಳಿದುಕೊಳ್ಳುವ ಸಾಧ್ಯತೆಯಿದೆ.

**ತುಲಾ** ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು, ಇದು ಜೀವನದ ಅನೇಕ ಸಮಸ್ಯೆಗಳನ್ನು ತೆಗೆದುಹಾಕುತ್ತದೆ.

**ವೃಶ್ಚಿಕ** ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ಆಪ್ತರೊಂದಿಗೆ ಜಗಳವಾಗಬಹುದು ಮತ್ತು ವಿಷಯ ನ್ಯಾಯಾಲಯ ಕಚೇರಿಯವರೆಗೂ ಹೋಗಬಹುದು. ಇದರ ಕಾರಣದಿಂದ ನಿಮ್ಮ ವಿಶೇಷ ಹಣ ಖರ್ಚಾಗಬಹುದು.

**ಧನಸ್ಸು** ನಿಮ್ಮ ಸುತ್ತಲಿನ ಸುಮಾರು ಜನರು ಬೇಡಿಕೆಯಿಡುತ್ತಾರೆಂದು ನಿಮಗನಿಸುತ್ತದೆ-ನಿಮಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ಮಾಡಲು ಒಪ್ಪಿಕೊಳ್ಳಬೇಡಿ-ಮತ್ತು ಇತರರನ್ನು ಸಂತೋಷಪಡಿಸಲು ನಿಮ್ಮ ಮೇಲೆ ಒತ್ತಡ ಹಾಕಬೇಡಿ.

**ಮಕರ** ನಿಮ್ಮ ಭಾವನೆಗಳನ್ನು ವಿಶೇಷವಾಗಿ ಕೋಪವನ್ನು ನಿಯಂತ್ರಿಸಲು ಪ್ರಯತ್ನಿಸಿ. ಇದು ಮತ್ತೊಂದು ಚೈತನ್ಯದಾಯಕ ದಿನವಾಗಿರುತ್ತದೆ ಮತ್ತು ಅನಿರೀಕ್ಷಿತ ಲಾಭಗಳನ್ನು ನಿರೀಕ್ಷಿಸಬಹುದು.

**ಕುಂಭ** ನಿಮ್ಮ ಕಣ್ಣೀರನ್ನು ಒಬ್ಬ ವಿಶೇಷ ಸ್ನೇಹಿತ ಒರೆಸಬಹುದು. ನಿಮ್ಮ ಸುತ್ತ ನಡೆಯುವುದನ್ನು ನೋಡಿಕೊಳ್ಳಿ - ಇಂದು ನೀವು ಮಾಡಿದ ಕೆಲಸಕ್ಕೆ ಬೇರೆಯವರು ಗೌರವ ತೆಗೆದುಕೊಳ್ಳಬಹುದು.

**ಮೀನ** ನೀವು ನಿರಾಸೆ ಅನುಭವಿಸುತ್ತೀರಿ. ಅದೇಕೆಂದರೆ ನೀವು ಬಯಸುತ್ತಿದ್ದ ಪ್ರತಿಫಲಗಳು ಮುಂದೂಡಲ್ಪಡುತ್ತವೆ. ಈ ರಾಶಿಚಕ್ರದ ಜನರಿಗೆ ಇಂದು ತಮ್ಮನ್ನು ತಾವೇ ಅರ್ಥಮಾಡಿಕೊಳ್ಳುವ ಅಗತ್ಯವಿದೆ.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಾ. ಕೆ.ಟಿ.ತಿಪ್ಪೇಸ್ವಾಮಿ ಸೂಚನೆ

# ಪೊಲೀಸ್ ಅಧಿಕಾರಿಗಳು ಮಕ್ಕಳೊಂದಿಗೆ ಸಂವೇದನಾಶೀಲರಾಗಿ ವರ್ತಿಸಿ

• ಉದಯವಾಹಿನಿ ಚಿತ್ರದುರ್ಗ

ಜಿಲ್ಲೆಯ ಪ್ರತಿ ಪೊಲೀಸ್ ಠಾಣೆಗಳಲ್ಲಿ ವರ್ಷಕ್ಕೆ ಕನಿಷ್ಠ 20 ತೆರೆದ ಮನೆ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ, ಮಕ್ಕಳ ರಕ್ಷಣಾ ನೀತಿ ಕುರಿತು ಮಕ್ಕಳಿಗೆ ಜಾಗೃತಿ ಮೂಡಿಸಬೇಕು.

ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ಜೊತೆ ಪೊಲೀಸ್ ಅಧಿಕಾರಿಗಳು ಸಂವೇದನಾಶೀಲರಾಗಿ ವರ್ತಿಸಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಾ.ಕೆ.ಟಿ.ತಿಪ್ಪೇಸ್ವಾಮಿ ಸೂಚಿಸಿದರು. ನಗರದ ಜಿಲ್ಲಾ ಶಿಕ್ಷಕರ ತರಬೇತಿ ಕೇಂದ್ರ (ಡಯಟ್) ಸಭಾಂಗಣದಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕದ ಕಾರ್ಯವೈಖರಿ ಕುರಿತು ಪೊಲೀಸ್ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು.

ಕಾನೂನು ಸಂಘರ್ಷಕ್ಕೆ ಸಿಲುಕಿದ ಮಕ್ಕಳ ಪೈಕಿ, ಹದಿ ಹರೆಯದವರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಕಳವಳಕಾರಿ ಸಂಗತಿಯಾಗಿದೆ. ಜಿಲ್ಲೆಯಾದ್ಯಂತ ಪ್ರೌಢಶಾಲೆಗಳಲ್ಲಿ ಮಾತ್ರ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಆದರೆ 18 ವರ್ಷದ ಒಳಗಿನವರೆಲ್ಲರೂ ಮಕ್ಕಳು ಎಂದೇ ಪರಿಗಣಿಸಲಾಗುತ್ತದೆ. 16 ರಿಂದ 18 ವರ್ಷದ ಮಕ್ಕಳಲ್ಲಿ ದೈಹಿಕ ಹಾಗೂ ಮಾನಸಿಕ ಬದಲಾವಣೆ ಉಂಟಾಗುತ್ತಿರುತ್ತವೆ.

ಈ ಸಮಯದಲ್ಲಿ ಮಕ್ಕಳು ವಿಚಲಿತರಾಗಿ ಕಾನೂನು ಸಂಘರ್ಷಕ್ಕೆ ತುತ್ತಾಗುವ ಸಂಭವಿರುತ್ತದೆ. ಆದ್ದರಿಂದ ಪೊಲೀಸ್ ಇಲಾಖೆ ಅಧಿಕಾರಿಗಳು ವರ್ಷದಲ್ಲಿ ಒಮ್ಮೆಯಾದರು ಪಿಯುಸಿ, ಐ.ಟಿ.ಐ, ಪ್ಯಾರಾ ಮೆಡಿಕಲ್, ಡಿಪ್ಲೋಮೊ, ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ತಪ್ಪದೇ ಹಮ್ಮಿಕೊಳ್ಳಬೇಕು. ಈ ವೇಳೆ ಮಕ್ಕಳು ಗಂಭೀರವಾಗಿ ವಿಷಯಗಳನ್ನು ಗ್ರಹಿಸುವಂತೆ ನೈಜ ಪ್ರಕರಣಗಳ ಹೆಸರು, ಸ್ಥಳ ಬದಲಾಯಿಸಿ ಉದಾಹರಣೆ ಸಹಿತ ಮನಮುಟ್ಟುವಂತೆ ತಿಳಿಸಬೇಕು ಎಂದರು. ಪ್ರತಿ ಠಾಣೆಗಳಲ್ಲಿಯೂ ಮಕ್ಕಳ ವಿಶೇಷ ಪೊಲೀಸ್ ಘಟಕ ತೆರದು ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಠಾಣೆಗಳಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಇಲಾಖೆಗಳ ನಾಮಫಲಕಗಳನ್ನು ಅಳವಡಿಸಬೇಕು. ಪ್ರತಿ ಗುರುವಾರ ತೆರೆದ ಮನೆ ಕಾರ್ಯಕ್ರಮ ಆಯೋಜಿಸುವಂತೆ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಕೆಲಸದ ಒತ್ತಡ ನಡುವೆ ಪ್ರತಿ ವಾರ ಕಾರ್ಯಕ್ರಮ ಆಯೋಜಿಸಲು ಕಷ್ಟಸಾಧ್ಯ, ಪ್ರತಿ ಪೊಲೀಸ್ ಠಾಣೆಯಲ್ಲಿಯೂ ವರ್ಷಕ್ಕೆ ಕನಿಷ್ಠ 20 ತೆರೆದ ಮನೆ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಕೆ.ಟಿ.ತಿಪ್ಪೇಸ್ವಾಮಿ ಹೇಳಿದರು.


ಉದಯವಾಹಿನಿ ಚಿತ್ರ

ಬಾಲ್ಯವಿವಾಹ ಹಾಗೂ ಬಾಲಕಾರ್ಮಿಕ ಪದ್ಧತಿ ಕುರಿತು ಸಮುದಾಯದಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು. ಬಾಲ್ಯ ವಿವಾಹ ತಡೆಯುವ ನಿಟ್ಟಿನಲ್ಲಿ ಸಮುದಾಯದಲ್ಲಿ ಹೆಚ್ಚಿನ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬಾಲಕಾರ್ಮಿಕ ಪ್ರಕರಣಗಳು ಜಾಸ್ತಿ ಇವೆ ಎಂದು ಸಾಕಷ್ಟು ದೂರುಗಳು ಬರುತ್ತಿವೆ, ಈ ಕುರಿತು ಗಮನಹರಿಸಬೇಕು. ತಹಶೀಲ್ದಾರ್ ನೇತೃತ್ವದಲ್ಲಿ ರಚಿಸಲಾಗಿರುವ ತಾಲ್ಲೂಕು ಟಾಸ್ಕ್ ಪೋರ್ಸ್ ಸಮಿತಿ ವತಿಯಿಂದ ನಿಯಮಿತವಾಗಿ ತಪಾಸಣೆ ಮಾಡಿ, ಬಾಲಕಾರ್ಮಿಕರ ಪತ್ತೆ ಹಚ್ಚಬೇಕು ಎಂದು ತಿಳಿಸಿದರು. ಸಭೆಯಲ್ಲಿ ಚಿತ್ರದುರ್ಗ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರು ಹಾಗೂ ಹಿರಿಯ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ ಪಿ.ಕೆ.ದಿನಕರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿ. ಸವಿತಾ ಸೇರಿದಂತೆ ಮಕ್ಕಳ ವಿಶೇಷ ಪೊಲೀಸ್ ಘಟಕದ ಅಧಿಕಾರಿಗಳು ಇದ್ದರು.

### ಎಸ್‌ಜೆಪಿಯು ಘಟಕ ಕಾರ್ಯವೈಖರಿಗೆ ಮೆಚ್ಚುಗೆ

ಜಿಲ್ಲೆಯ ಮಕ್ಕಳ ವಿಶೇಷ ಪೊಲೀಸ್ ಘಟಕದ (ಎಸ್‌ಜೆಪಿಯು) ಅಧಿಕಾರಿಗಳ ಕಾರ್ಯವೈಖರಿಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಾ.ಕೆ.ಟಿ.ತಿಪ್ಪೇಸ್ವಾಮಿ ಮೆಚ್ಚುಗೆ ವ್ಯಕ್ತಪಡಿಸಿದರು. ಚಿತ್ರದುರ್ಗ ಜಿಲ್ಲೆಯಲ್ಲಿ ಎಸ್ ಜೆಪಿಯು ಘಟಕ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ತರಬೇತಿ ಹಾಗೂ ಅಧಿಕಾರಿಗಳ ಕ್ರಿಯಾಶೀಲತೆಯಿಂದಾಗಿ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿದೆ ಎಂದು ಸಂತಸ ವ್ಯಕ್ತಪಡಿಸಿದರು.

### ಮೂರು ವರ್ಷದಲ್ಲಿ 300 ಕ್ಕೂ ಹೆಚ್ಚು ಪೋಕ್ಸೋ ಪ್ರಕರಣ

ಕಳೆದ ಮಾರ್ಚ್ 2023 ರಿಂದ 2025 ಮಾರ್ಚ್ ತಿಂಗಳ ಅಂತ್ಯದವರೆಗೆ ಜಿಲ್ಲೆಯ 19 ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 313 ಪೋಕ್ಸೋ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ 05 ಪ್ರಕರಣಗಳು ಸುಳ್ಳು ಎಂದು ತಿಳಿದು ಬಂದಿವೆ. 13 ಪ್ರಕರಣಗಳು ಜಿಲ್ಲೆಯಿಂದ ವರ್ಗಾಯಿಸಲಾಗಿದೆ. 295 ಪ್ರಕರಣಗಳು ನೈಜವಿದ್ದು, 54 ಪ್ರಕರಣಗಳು ತನಿಖೆ ಹಂತದಲ್ಲಿವೆ. ಇವುಗಳ ಪೈಕಿ ಒಟ್ಟು 138 ಪ್ರಕರಣಗಳಲ್ಲಿ ಪೋಕ್ಸೋ ಕಾಯ್ದೆಯ ಜೊತೆಗೆ ಬಾಲ್ಯ ವಿವಾಹ ನಿಷೇಧ ಕಾಯ್ದೆಯನ್ನು ಒಳಗೊಂಡು ಪ್ರಕರಣಗಳನ್ನು ದಾಖಲಿಸಲಾಗಿದೆ. 207 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿವೆ. 04 ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ. 53 ಪ್ರಕರಣಗಳಲ್ಲಿ ಖುಲಾಸೆಯಾಗಿದ್ದು, 02 ಪ್ರಕರಣಗಳು ಪತ್ತೆಯಾಗಿಲ್ಲ. 02 ಪ್ರಕರಣದಲ್ಲಿ ಹೆಚ್ಚುವರಿ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದೆ. ಇದರ ಹೊರತಾಗಿ ಇದೇ ಅವಧಿಯಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆಯಡಿ 03 ಹಾಗೂ ಬಾಲ ಕಾರ್ಮಿಕ ನಿಷೇಧ ಕಾಯ್ದೆಯಡಿ 05 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು.

### ಪೋಕ್ಸೋ ಕಾಯ್ದೆ ಸಮರ್ಪಕ ಅನುಷ್ಠಾನವಾಗಬೇಕು

ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿಯೂ ಕಡ್ಡಾಯವಾಗಿ ಪೋಕ್ಸೋ ಕಾಯ್ದೆ ಅನುಷ್ಠಾನವಾಗಬೇಕು ಎಂದು ಆಯೋಗದ ಸದಸ್ಯ ಡಾ.ಕೆ.ಟಿ.ತಿಪ್ಪೇಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು. 18 ವರ್ಷದೊಳಗಿನ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಗಳು, ಕಿರುಕುಳ, ಅತ್ಯಾಚಾರ, ದುರ್ಘಟನೆಗಳನ್ನು ತಡೆಗಟ್ಟಲು ಹಾಗೂ ಮಕ್ಕಳ ರಕ್ಷಣೆ, ಭದ್ರತೆ ಒದಗಿಸುವ ಉದ್ದೇಶದಿಂದ ಪೋಕ್ಸೋ ಕಾಯ್ದೆ ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಶಾಲೆಯಲ್ಲಿದೆ ಶಿಕ್ಷಣದ ಜೊತೆಗೆ ರಕ್ಷಣೆ ಎಂಬ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸುರಕ್ಷಿತ ಹಾಗೂ ಅಸುರಕ್ಷಿತ ಸ್ಪರ್ಶ ಕುರಿತು ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು.

## ಉಚ್ಚಾಟನೆ ಖಂಡಿಸಿ ಇಂಡಿಯಲ್ಲಿ ಬೃಹತ್ ಪ್ರತಿಭಟನೆ

• ಉದಯವಾಹಿನಿ ಇಂಡಿ

ಇಂಡಿ ಪಟ್ಟಣದಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸಿದನ್ನು ವಿರೋಧಿಸಿ ಪಟ್ಟಣದ ಶಿವಾಜಿ ವೃತ್ತದಿಂದ ಬಸವೇಶ್ವರ ವೃತ್ತದವರೆಗೆ ಮಂಗಳವಾರ ಹಿಂದು ಅಭಿಮಾನಿಗಳು ಹಾಗೂ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು. ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಾಗರಾಳ ಹುಲಿ ಬಸನಗೌಡ ಪಾಟೀಲರು ಮಾತನಾಡಿ ಬಿಎಸ್‌ವೈ, ವಿಜಯೇಂದ್ರ ಅವರ ಕುತಂತ್ರ ಕುಮ್ಮಕ್ಕಿನಿಂದ ಯತ್ನಾಳ ಅವರನ್ನು ಬಿಜೆಪಿ ಪಕ್ಷದಿಂದ ಉಚ್ಚಾಟಿಸಿರುವದು ಹಿಂದು ಸಮುದಾಯಕ್ಕೆ ಮಾಡಿದುವ ಅಪಮಾನ. ಈ ತಪ್ಪು ನಿರ್ಧಾರದಿಂದ ಬಿಜೆಪಿ ಪಕ್ಷಕ್ಕೆ ಬಹುದೊಡ್ಡ ಹೊಡೆತ ಬೀಳಲಿದೆ. ಕೂಡಲೇ ಅವರನ್ನು ಪಕ್ಷಕ್ಕೆ ಮರಳಿ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಎಂ.ಎಸ್.ರುದ್ರಗೌಡ ಮಾತನಾಡಿ ಹೈಕಮಾಂಡ ತನ್ನ ನಿರ್ಧಾರವನ್ನು ಬದಲಿಸಿ ಮತ್ತೆ ಯತ್ನಾಳ ಅವರನ್ನು ಪಕ್ಷಕ್ಕೆ ಗೌರವಯುತವಾಗಿ ಸ್ವಾಗತಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ದಯಾಸಾಗರ ಪಾಟೀಲ ಮತ್ತು ಇಂಡಿ ಪಂಚಮಸಾಲಿ ಸಮಾಜದ ಅಧ್ಯಕ್ಷ ವಿ.ಎಚ್. ಬಿರಾದಾರ ಮಾತನಾಡಿದರು.


ಉದಯವಾಹಿನಿ ಚಿತ್ರ

ಪ್ರತಿಭಟನೆಯಲ್ಲಿ ಶರಣಗೌಡ ಬಂಡಿ, ಗಿರಿಮಲ್ಲಗೌಡ ಬಿರಾದಾರ, ರಮೇಶ ಬಿರಾದಾರ, ಅಣ್ಣಪ್ಪ ಬಡಿಗೇರ, ಸೋಮಶೇಖರ ದೇವರ, ಸೋಮನಾಥ ಪ್ರಚಂಡಿ, ಶ್ರೀಶೈಲ ಕಲ್ಲೂರ, ವಿಠ್ಠಲ ಬಾಬಳಗಾಂವ, ಅಶೋಕಗೌಡ ಪಾಟೀಲ,ಪಂಚಪ್ಪ ಪಾಟೀಲ, ವಿನೋದ ಹದಗಲ್ಲ, ಆನಂದ ದೇವರ, ಶಾಂತೇಶ ಕ್ಷತ್ರಿ, ರತನ ಹಲವಾಯಿ ಅಕ್ಷಯ ಪಾಟೀಲ ಮತ್ತಿತರಿದ್ದರು.

## ತೊಗರಿ ಬೆಳೆ ಪರಿಹಾರ ಆಗ್ರಹಿಸಿ ಅಹೋರಾತ್ರಿ ಧರಣಿ

• ಉದಯವಾಹಿನಿ ಇಂಡಿ

ಇಂಡಿ ತಾಲ್ಲೂಕಿನ ರೈತರು ಓರಿಯಂಟಲ್ ಇನ್ಸುರೆನ್ಸ ಕಂಪನಿಗೆ ಪ್ರತಿ ಹೇಕ್ಟರ ಪ್ರದೇಶಕ್ಕೆ ರೂ. 960 ರಂತೆ 11700 ರೈತರು ಒಂದು ಕೋಟಿ 45 ಲಕ್ಷ ರೂ ಸಂದಾಯ ಮಾಡಿದ್ದಾರೆ. ಆದರೆ ರೈತರಿಗೆ ತೊಗರಿ ಬೆಳೆ ಕುರಿತು ಇನ್ಸುರೆನ್ಸ ಕಂಪನಿಯಿಂದ ಒಂದು ಪೈಸೆ ಕೂಡ ಬಂದಿಲ್ಲ ಎಂದು ಪ್ರಗತಿಪರ ರೈತ ಮಲ್ಲಪ್ಪ ಗುಡ್ಲ ಹೇಳಿದರು. ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಕರವೇಯಿಂದ ತೊಗರಿ ಬೆಳೆಗೆ ಪರಿಹಾರ ಆಗ್ರಹಿಸಿ ನಡೆದ ಅಹೋರಾತ್ರಿ ಸತ್ಯಾಗ್ರಹದ 2ನೇಯ ದಿನದ ಪ್ರತಿಭಟನೆಯಲ್ಲಿ ಮಾತನಾಡುತ್ತಿದ್ದರು.

ತಾಲ್ಲೂಕಿನ ಎಲ್ಲಾ ರೈತರಿಗೆ ಸತತವಾಗಿ 3 ವರ್ಷದಿಂದ ಖಾಸಗಿ ವಿಮಾ ಕಂಪನಿ ಬೆಳೆ ಪರಿಹಾರ ನೀಡದೇ ಇರುವದಕ್ಕೆ ಆಕ್ರೋಶಗೊಂಡ ರೈತರು ಕಂಪನಿ ಮತ್ತು ಸರಕಾರದ ವಿರುದ್ಧ ಘೋಷಣೆ ಕೂಗಿದರು. ಏ. 9 ರಂದು ತಾಂಬಾ ದಲ್ಲಿ ರಾಜ್ಯ ಹೆದ್ದಾರೆ ತಡೆ, 10 ರಂದು ನಾದ ಕೆಡಿ ಗ್ರಾಮದಲ್ಲಿ ರಸ್ತೆ ತಡೆ ಮತ್ತು 11 ರಂದು ಝುಳಕಿಯಲ್ಲಿ ರಾಷ್ಟ್ರೀಯ ಹೆದ್ದಾರೆ ತಡೆ ಕರವೇ ಕಾರ್ಯಕರ್ತರು ಮತ್ತು ಪ್ರಗತಿಪರ ರೈತರಿಂದ ನಡೆಯಲಿದ್ದು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಕೇಳಿಕೊಂಡರು. ಅಹಿರಸಂಗದ ಪರಮಪೂಜ್ಯ ರೇವಣಸಿದ್ದಯ್ಯ ಶ್ರೀಗಳು ತಾಲ್ಲೂಕಿನ ಸಮಸ್ಥ ಮಠಾಧೀಶರ ಪರವಾಗಿ ಭಾಗವಹಿಸಿ ಬೆಂಬಲ ಸೂಚಿಸಿದರು. ಪ್ರತಿಭಟನೆಯಲ್ಲಿ ಕಾಸುಗೌಡ ಬಿರಾದಾರ, ಅನೀಲ ಜಮಾದಾರ, ಹಣಮಂತರಾಯಗೌಡ ಪಾಟೀಲ, ಬತ್ತು ಸಾವಕಾರ ಮಲ್ಲಿಕಾರ್ಜುನ ಕಿವಡೆ, ಶೀಲವಂತ ಉಮರಾಣಿ ಮಾತನಾಡಿದರು. ಪ್ರತಿಭಟನೆಯಲ್ಲಿ ಧರ್ಮರಾಜ ಸಾಲೋಟಗಿ, ಮಂಜು ದೇವರ, ಶ್ರೀಕಾಂತ ಬಡಿಗೇರ, ಮಹೇಶ ಹೂಗಾರ, ಪ್ರಶಾಂತ ಲಾಳಸಂಗಿ, ರಾಮಸಿಂಗ ಕನ್ನೊಳ್ಳಿ, ರವಿ ಕ್ಷತ್ರಿ, ಅಶೋಕ ಅಕಲಾದಿ, ಈರಣ್ಣ ಕಪ್ಪೆನವರ, ಅರವಿಂದ ಪಾಟೀಲ, ಶಿವಾನಂದ ಗಚ್ಚಿನಮಠ, ಸಂತೋಷ ಬಗದುರಗಿ, ಮಲ್ಲು ಚಾಕುಂಡಿ, ಶ್ರೀಶೈಲ ಗುನ್ನಾಪುರ, ಶಿವಾನಂದ ಚಾಳಿಕಾರ ಮತ್ತಿತರಿದ್ದರು.



ಉದಯವಾಹಿನಿ ಚಿತ್ರ

**ರೈತರಿಂದ ವಿಮಾ ಕಂಪನಿಗೆ ಒಂದು ಕೋಟಿ 45 ಲಕ್ಷ ಸಂದಾಯ**

> ಖಾಸಗಿ ಕಂಪನಿ ರೈತರಿಗೆ ಮೋಸ ಮಾಡುತ್ತಿವೆ. ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ಕೂಡಲೇ ಮೇಲಾಧಿಕಾರಿಗಳು ಈ ಕುರಿತು ವಿಚಾರಿಸಿ ರೈತರಿಗೆ ಸೂಕ್ತ ಪರಿಹಾರ ನೀಡಬೇಕು -ಬಾಳು ಮುಳಜಿ
> ಕರವೇ ತಾಲ್ಲೂಕಾ ಅಧ್ಯಕ್ಷ

## ಜಿಟಿಟಿಸಿ ವತಿಯಿಂದ ಕೌಶಲ್ಯ ತರಬೇತಿ

• ಉದಯವಾಹಿನಿ ಚಿತ್ರದುರ್ಗ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿ.ಟಿ.ಟಿ.ಸಿ) ವತಿಯಿಂದ ಯುವನಿಧಿ ಯೋಜನೆಯಡಿ ನೋಂದಾಯಿತರಾಗಿರುವ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್, ಮೆಕ್ಯಾನಿಕಲ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಡಿಪ್ಲೋಮಾ/ಬಿ.ಇ/ಬಿ.ಟೆಕ್/ಎಂ.ಇ/ಎಂ.ಟೆಕ್ ಕೋರ್ಸ್ ಪೂರ್ಣಗೊಳಿಸಿದ ಅಭ್ಯರ್ಥಿಗಳು ಉದ್ಯೋಗಗಳ ಅನ್ವೇಷಣೆಗೆ ಸಹಾಯ ಮಾಡಲು ಸಂಬಂಧಿಸಿತ ಕ್ಷೇತ್ರಗಳಲ್ಲಿ ಕೌಶಲ್ಯಗಳನ್ನು ಹೆಚ್ಚಿಸಲು ತರಬೇತಿ ನೀಡಲಾಗುವುದು. ಕೌಶಲ್ಯವರ್ಧನೆ ಕೋರ್ಸ್‌ನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಕೆಲಸ ದೊರಕಿಸಲು ಜಿಟಿಟಿಸಿ ವತಿಯಿಂದ ನಿಗದಿತ ಸಂದರ್ಶನಗಳನ್ನು ನೆಡಸಲಾಗುತ್ತದೆ. ತರಬೇತಿಯ ಸಮಯದಲ್ಲಿ ಸರ್ಕಾರವು ಪಾವತಿಸುವ ಯುವನಿಧಿ ಸ್ಟೈಫಂಡ್ ಅವರ ವೇಳಾ ಪಟ್ಟಿಯ ಪ್ರಕಾರ ಮುಂದುವರಿಯುತ್ತಿದೆ. ಆಸಕ್ತರು ಚಿತ್ರದುರ್ಗ ನಗರದ ಹಳೆಯ ಪಿ.ಬಿ. ರಸ್ತೆ ಕಣಿವೆ ಮಾರಮ್ಮ ದೇವಸ್ಥಾನದ ಎದುರು, ಕುಂಚಿಗನಾಳ್‌ನಲ್ಲಿರುವ ಜಿ.ಟಿ.ಟಿ.ಸಿ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9738465834, 86602703535 ಕರೆ ಮಾಡಬಹುದು ಎಂದು ಜಿ.ಟಿ.ಟಿ.ಸಿ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೌಡಿ ಶೀಟರ್ ಮೇಲೆ ಫೈರಿಂಗ್

• ಉದಯವಾಹಿನಿ ಹುಬ್ಬಳ್ಳಿ

ವಾಣಿಜ್ಯ ನಗರಿ ಹುಬ್ಬಳ್ಳಿಯಲ್ಲಿ ಪೊಲೀಸರ ರಿವಾಲ್ವರ್ ಸದ್ದು ಮಾಡಿದ್ದು, ರೌಡಿ ಶೀಟರ್ ಗುಂಡೇಟಿನಿಂದ ಗಾಯಗೊಂಡಿದ್ದಾನೆ. ಹಳೆ ಹುಬ್ಬಳ್ಳಿ ಪೊಲೀಸ್ ಠಾಣೆಯ ರೌಡಿಶೀಟರ್ ಮಲ್ಲಿಕ್ ತಾಜುದ್ದೀನ್ ಅದೋನಿ ಪೊಲೀಸರ ಗುಂಡೇಟಿನಿಂದ ಗಾಯಗೊಂಡು ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಹಣಕಾಸು ವಿಚಾರಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ರೌಡಿಗಳ ನಡುವೆ ಗಲಾಟೆಯಾಗಿತ್ತು. ಆ ವೇಳೆ ಆಟೋಚಾಲಕನಾಗಿರುವ ರೌಡಿ ಮಲ್ಲಿಕ್‌ನನ್ನು ಪೊಲೀಸರು ಬಂಧಿಸಿದ್ದರು. ಇಂದು ಮುಂಜಾನೆ ಸ್ಥಳ ಮಹಜರಿಗಾಗಿ ಹಳೆ ಹುಬ್ಬಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ವಿಶ್ವನಾಥ್ ಆಲದಮಟ್ಟಿ ಮತ್ತು ಸಿಪಿಐ ಶರೀಫ್ ನದಾಫ್ ಹಾಗೂ ಸಿಬ್ಬಂದಿ ರಾಘವೇಂದ್ರ, ಕಾಲೋನಿಯ ಸ್ಮಶಾನದ ಬಳಿ ರೌಡಿಯನ್ನು ಕರೆದೊಯ್ದಿದ್ದಾರೆ.

ಆ ಸಂದರ್ಭದಲ್ಲಿ ಪೊಲೀಸರ ಮೇಲೆಯೇ ಹಲ್ಲೆ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ್ದಾನೆ. ತಕ್ಷಣ ಪಿಎಸ್‌ಐ ಅವರು ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿ ಶರಣಾಗುವಂತೆ ಎಚ್ಚರಿಸಿದ್ದಾರೆ. ಪೊಲೀಸರ ಮಾತನ್ನು ಲೆಕ್ಕಿಸದೆ ಮತ್ತೆ ದಾಳಿ ಮಾಡಿದಾಗ ಆತ್ಮರಕ್ಷಣೆಗಾಗಿ ಹಾರಿಸಿದ ಗುಂಡು ರೌಡಿ ಕಾಲಿಗೆ ತಗುಲಿದ್ದು, ಆತ ಕುಸಿದು ಬಿದ್ದಿದ್ದಾನೆ. ತಕ್ಷಣ ರೌಡಿಯನ್ನು ಸುತ್ತುವರಿದು ವಶಕ್ಕೆ ಪಡೆದು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಿದ್ದಾರೆ. ಕಾರ್ಯಾಚರಣೆ ವೇಳೆ ಗಾಯಗೊಂಡಿರುವ ಪಿಎಸ್‌ಐ ಅವರೂ ಸಹ ಆಸ್ಪತೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ಗ್ರಾನೈಟ್ ಕ್ವಾರಿಯಲ್ಲಿ ಸ್ಫೋಟ: ಮೂವರ ವಿರುದ್ಧ ಪ್ರಕರಣ ದಾಖಲು

• ಉದಯವಾಹಿನಿ ರಾಯಚೂರು

ಜಿಲ್ಲೆಯ ಲಿಂಗಸುಗೂರಿನ ಮಾಕಾಪುರ ಬಳಿ ಗ್ರಾನೈಟ್ ಕ್ವಾರಿಯಲ್ಲಿ ಸ್ಫೋಟಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ವಾರಿ ಮಾಲೀಕ, ಮ್ಯಾನೇಜರ್ ಸೇರಿ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ. ಮೈಮೇಲೆ ಕಲ್ಲುಬಿದ್ದು ಬಾಗಲಕೋಟೆಯ ಇಳಕಲ್‌ನ ವೆಂಕಟೇಶ (38) ಸ್ಥಳದಲ್ಲೇ ಸಾವನ್ನಪ್ಪಿದ್ದು, ಕೊಪ್ಪಳದ ಕುಷ್ಠಗಿ ಮೂಲದ ಮಹಾಲಿಂಗ ಎಂಬುವವರಿಗೆ ಗಂಭೀರ ಗಾಯಗಳಾಗಿವೆ.

ಗ್ರಾನೈಟ್ ಕ್ವಾರಿ ಅಕ್ರಮವಾಗಿ ನಡೆಯುತ್ತಿದ್ದು, ಘಟನೆ ಹೊರಗೆ ಬಾರದಂತೆ ಮೃತದೇಹವನ್ನ ಬಾಗಲಕೋಟೆಗೆ ರವಾನಿಸಿ, ಮುದಗಲ್ ಸರ್ಕಾರಿ ಆಸ್ಪತ್ರೆಗೆ ತರಲಾಗಿತ್ತು. ಗಾಯಾಳುವನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮುದಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದೀಗ ಘಟನಾ ಸ್ಥಳಕ್ಕೆ ಬಾಂಬ್ ಡಿಸ್ಪೋಸಲ್ ಸ್ಕ್ವಾಡ್ ಭೇಟಿ ನೀಡಿ, ತಪಾಸಣೆ ಮಾಡಿದೆ. ಸ್ಫೋಟಕ ವಸ್ತುಗಳ ಬಳಕೆ ಹಿನ್ನೆಲೆ ಬಾಂಬ್ ಡಿಸ್ಪೋಸಲ್ ಸ್ಕ್ವಾಡ್‌ನಿಂದ ಪರಿಶೀಲನೆ ಮಾಡಲಾಗಿದೆ.

ಬೆಲೆ ಏರಿಕೆ ಮಾಡುವ ಸರ್ಕಾರಕ್ಕೆ ರೈತರ ಅಳಲು ಕೇಳಿಸುತ್ತಿಲ್ಲ ಏಕೆ?

# ಟೊಮೆಟೋ ಬೆಳೆದ ರೈತನ ಕೈಗೆ ಸಿಗ್ತಿದೆ ಕೇವಲ 2 ರೂ.

• ಉದಯವಾಹಿನಿ ಗದಗ

ಮಾರುಕಟ್ಟೆಯಲ್ಲಿ ಟೊಮೇಟೊ ಬೆಲೆ ಪಾತಾಳಕ್ಕೆ ಇಳಿದಿದೆ. ಈ ಬಾರಿ ಉತ್ತಮ ಬೆಲೆ ಸಿಗುವ ಕನಸಿನಲ್ಲಿ ಹೆಚ್ಚಿನ ಟೊಮೇಟೊ ಬೆಳೆದ ರೈತರು ತಲೆ ಮೇಲೆ ಕೈಹೊತ್ತು ಕುಳಿತಿದ್ದಾರೆ. ಟೊಮೇಟೊ ಬೆಳೆದ ರೈತರು ಮಾರುಕಟ್ಟೆಯಲ್ಲಿನ ಬೆಲೆ ಕುಸಿತ ಕಂಡು ಕಂಗಾಲಾಗಿದ್ದಾರೆ. ಅಗತ್ಯ ವಸ್ತುಗಳ ದರಗಳು ಏರಿಕೆಯಾದರೂ ರೈತರು ಬೆಳೆದ ಬೆಳೆಗಳ ದರ ಏಕೆ ಏರಿಕೆಯಾಗುತ್ತಿಲ್ಲ ಎಂದು ಕಿಡಿಕಾರಿದ್ದಾರೆ. ಅವಳಿನಗರ ಸೇರಿದಂತೆ ಜಿಲ್ಲೆಯಲ್ಲಿ ಟೊಮೇಟೊ ಬೆಲೆ ಇಳಿಕೆಯಾಗುತ್ತಿದ್ದಂತೆ ಖರೀದಿಸಲು ಮಹಿಳೆಯರು ಮುಗಿಬಿದ್ದಿದ್ದಾರೆ.

ಟೊಮೇಟೊ ಬೆಲೆ ಜಾಸ್ತಿಯಾದಾಗಿನಿಂದ ಖರೀದಿಸಲು ಯೋಚಿಸುವಂತಾಗಿತ್ತು. ಸದ್ಯ ಈಗ ಬೆಲೆ ಇಳಿಕೆಯಾಗಿದ್ದು ಗ್ರಾಹಕರು ಫುಲ್ ಖುಷ್ ಆಗಿದ್ದರೆ, ಬೆಳೆಗಾರರು ಕಂಗಾಲಾಗಿದ್ದರು.

**ಸೂಕ್ತ ದರ ನಿಗದಿಗೆ ಆಗ್ರಹ:** ಒಂದು ಟ್ರೇನಲ್ಲಿ 20-25 ಕೆಜಿ ಟೊಮೇಟೊ ಇರುತ್ತೆ. 2 ರೂ. ಕೆಜಿಯಂತೆ ಮಾರಾಟವಾಗುತ್ತಿದ್ದು, ಸರಕಾರ ಹಾಗೂ ಎಪಿಎಂಸಿ ವರ್ತಕರ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾರುಕಟ್ಟೆಗೆ ಕ್ವಿಂಟಲ್‌ಗಟ್ಟಲೇ ಟೊಮೇಟೊ ತಂದರೂ ರೈತರ ಕೈ ಖಾಲಿ ಖಾಲಿ ಆಗಿದೆ.

ಟೊಮೇಟೊ ಕಟಾವು ಮಾಡುವ ಕಾರ್ಮಿಕರಿಗೆ 300 ರೂ. ದಿನದ ಕೂಲಿ ಕೊಡಬೇಕು. ಮಾರುಕಟ್ಟೆಗೆ ಒಂದು ಟ್ರೇ ಹೇರಿಕೊಂಡು ಬಂದರೆ 30 ರೂ. ವಾಹನ ಬಾಡಿಗೆ ಇದೆ.

ಜತೆಗೆ ದಲ್ಲಾಳಿಗೆ 10 ರೂ. ಕೊಡಬೇಕು. ಹಾಗಾಗಿ ಒಂದು ಟ್ರೇಗೆ ರೈತರಿಗೆ 10 ರೂ. ಮಾತ್ರ ಸಿಗುತ್ತದೆ ಎಂದು ಕಿಡಿಕಾರಿದ್ದಾರೆ. ಅಂಗಡಿಯಲ್ಲಿ10 ರೂ. ಟೀ, ತಿಂಡಿ ಮಾಡಿದರೆ ಖಾಲಿ ಕೈಯಲ್ಲಿ ಮನೆಗೆ ಹೋಗಬೇಕಾಗುತ್ತೆ ಎಂದು ರೈತರು ಅಳಲು ತೋಡಿಕೊಂಡರು. ಹಗಲು ರಾತ್ರಿ ಕಷ್ಟಪಟ್ಟು ಟೊಮೇಟೊ ಬೆಳೆದಿದ್ದೇವೆ. ಮಾರುಕಟ್ಟೆಗೆ ತಂದರೆ ಸೂಕ್ತ ದರ ಸಿಗುತ್ತಿಲ್ಲ. ಹೀಗಾದರೆ ಕುಟುಂಬ ನಿರ್ವಹಣೆಗೆ ತೊಂದರೆ ಆಗುತ್ತದೆ. ಸರಕಾರ ರೈತರ ನೆರವಿಗೆ ಬರಬೇಕು. ಸೂಕ್ತ ದರ ನಿಗದಿ ಮಾಡಬೇಕೆಂದು ಒತ್ತಾಯಿಸಿದರು.

ಟೊಮೇಟೊ ಬೆಳೆಯಲು ರೈತರು ನಾನಾ ಬಗೆಯ ಸರ್ಕಸ್ ಮಾಡಬೇಕು. ಹೀಗಾಗಿ ಖರ್ಚು ಹೆಚ್ಚು. ಟೊಮೇಟೊ ಕೀಳುವ ಕಾರ್ಮಿಕರಿಗೆ ದಿನದ ಕೂಲಿಯೂ ಹೆಚ್ಚು. ಇದೀಗ ಧಾರಣೆಗೆ ಹಾಕಿದ್ದ ಬಂಡವಾಳಕ್ಕೂ ಸಾಕಾಗುತ್ತಿಲ್ಲ. ಈ ರೀತಿಯಾದರೆ ನಾವು ಬದುಕುವುದು ಕಷ್ಟವಾಗುತ್ತದೆ ಎಂದಿದ್ದಾರೆ ಸುರೇಶ, ರೈತ ಕೆಲ ದಿನಗಳಿಂದ ಟೊಮೇಟೊ ಬೆಲೆ ಇಳಿಕೆಯಾಗುತ್ತಿದ್ದಂತೆ ವ್ಯಾಪಾರ ವಹಿವಾಟು ಜೋರಾಗಿದೆ.

ಇಷ್ಟು ದಿನ ಅರ್ಧ ಕೆಜಿ, ಕಾಲ್ ಕೆಜಿ ತೆಗೆದುಕೊಳ್ಳುತ್ತಿದ್ದ ಗ್ರಾಹಕರು ಈಗ 2 ಕೆಜಿ ಖರೀದಿ ಮಾಡುತ್ತಿದ್ದಾರೆ ಎನ್ನುತ್ತಾರೆ ಮುನ್ನಾ, ತರಕಾರಿ ವ್ಯಾಪಾರಿ, ಟೊಮೇಟೊ ದರ ಇಳಿಕೆಯಿಂದ ರೈತರಿಗೆ ಸಂಕಷ್ಟ ಎದುರಾಗಿದೆ. ಬದನೆಕಾಯಿ, ಹೀರೇಕಾಯಿ, ನುಗ್ಗೆಕಾಯಿ, ಗೆಣಸು, ಗಜ್ಜರಿ, ಮೆಣಸಿನಕಾಯಿ, ಸೌತೆಕಾಯಿ, ಮೂಲಂಗಿ ಸೇರಿದಂತೆ ಹಲವು ಬೆಳೆಗಳಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ. ರಾಜ್ಯ ಸರಕಾರ ಕೂಡಲೇ ರೈತರು ಬೆಳೆದ ಬೆಳೆಗಳಿಗೆ ಬೆಂಬಲ ನೀಡಬೇಕು ಎನ್ನುತ್ತಾರೆ.


ಉದಯವಾಹಿನಿ ಚಿತ್ರ

### ಪಾತಾಳ ಕಂಡ ಟೊಮೇಟೊ

ಮಾರುಕಟ್ಟೆಗೆ ಹೆಚ್ಚು ಫಸಲು ಬಂದಿದ್ದರಿಂದ ಟೊಮೇಟೊ ದರ ಪಾತಾಳಕ್ಕೆ ಕುಸಿದಿದೆ. 25 ಕೆಜಿ ಟ್ರೇ ಕೇವಲ 50 ರೂ. ಮಾರಾಟವಾಗುತ್ತಿದೆ. ರೈತರಿಗೆ ಕೆಜಿಗೆ ಕೇವಲ 2 ರೂ. ಸಿಗುತ್ತಿದೆ. ರೈತರಿಗಾಗುತ್ತಿರುವ ಈ ಅನ್ಯಾಯ ತಿಳಿದಿದ್ದರೂ ಎಪಿಎಂಸಿ ಅಧಿಕಾರಿಗಳು ಮೌನವಾಗಿದ್ದಾರೆ.

### ವಿವಿಧ ತರಕಾರಿ ಬೆಲೆ ಕುಸಿತ

ಮಾರುಕಟ್ಟೆಯಲ್ಲಿ ತರಕಾರಿಗಳ ಬೆಲೆ ಕೊಂಚ ಇಳಿಕೆಯಾಗಿದೆ. ಕಳೆದ ವಾರ ಶತಕದ ಗಡಿ ದಾಟಿದ್ದ ವಿವಿಧ ತರಕಾರಿಗಳು ಸ್ವಲ್ಪ ಇಳಿಕೆಯಾಗಿವೆ. ಹೀರೆಕಾಯಿ, ಬೆಂಡೆಕಾಯಿ, ನವಿಲುಕೋಸು, ಹಾಗಲಕಾಯಿ ಹೀಗೆ ಬಹುತೇಕ ತರಕಾರಿ ದರದಲ್ಲಿ 20-30 ಬೆಲೆ ಇಳಿಕೆಯಾಗಿದೆ. ಬದನೆಕಾಯಿ, ನುಗ್ಗೆಕಾಯಿ ಬೆಲೆಯೂ ಕುಸಿತವಾಗಿದೆ. ಒಂದು ಟ್ರೇ ಬದನೆಕಾಯಿಗೆ 50 ರಿಂದ 80 ರೂ. ಇದೆ. ನುಗ್ಗೆಕಾಯಿ ಒಂದು ಕೆಜಿಗೆ 10 ರೂ. ಮಾರಾಟವಾಗುತ್ತಿದೆ. ಇನ್ನು ಒಂದು ಟ್ರೇ ಟೊಮೇಟೊ ಮಾರುಕಟ್ಟೆಯಲ್ಲಿ 50 ರೂ. ಮಾರಾಟವಾಗುತ್ತಿದೆ. ರೈತರು ಎಕರೆಗೆ 30-50 ಸಾವಿರ ರೂ. ಮಾಡಿರುವ ಖರ್ಚು ಸಹ ವಾಪಸ್ ಬರುತ್ತಿಲ್ಲ. ಜಿಲ್ಲೆಯಲ್ಲಿ ಉತ್ತಮ ಟೊಮೇಟೊ ಬರುವ ಹಿನ್ನೆಲೆಯಲ್ಲಿ ಬೆಲೆ ಕುಸಿತವಾಗಿದೆ ಎನ್ನುತ್ತಾರೆ ತರಕಾರಿ ವ್ಯಾಪಾರಿಗಳು.

## ಸಿಗ್ನಲ್ ಜಂಪ್ ಮಾಡಲು ಹೋಗಿ ರಸ್ತೆ ಮಧ್ಯೆ ಪ್ರಾಣ ಬಿಟ್ಟ ಬೈಕ್ ಸವಾರ

• ಉದಯವಾಹಿನಿ ದಾವಣಗೆರೆ

ಬೈಕ್ ಸವಾರನೊಬ್ಬ ಸಿಗ್ನಲ್ ಜಂಪ್ ಮಾಡಲು ಹೋಗಿ ಎದುರಿಗೆ ಬಂದ ಟಾಟಾ ಏಸ್‌ಗೆ ಡಿಕ್ಕಿ ಹೊಡೆದು ಸಾವಿಗೀಡಾದ ಘಟನೆ ದಾವಣಗೆರೆಯ ಡಿಸಿ ಆಫೀಸ್ ಸರ್ಕಲ್‌ನಲ್ಲಿ ನಡೆದಿದೆ. ಸಾವಿಗೀಡಾದ ಯುವಕನನ್ನು ಮೈಕಲ್ ಕುಮಾರ್ (24) ಎಂದು ಗುರುತಿಸಲಾಗಿದೆ. ಸಿಗ್ನಲ್ ಬಿಟ್ಟ ಬಳಿಕ ಡಿಸಿ ಕಚೇರಿ ಕಡೆಯಿಂದ ಟಾಟಾ ಏಸ್ ವಾಹನ ಹೊರಟಿದೆ. ಈ ವೇಳೆ ರೆಡ್ ಸಿಗ್ನಲ್ ಇದ್ದರೂ ಬೈಕ್ ಸವಾರ ಅಜಾಗರೂಕತೆಯಿಂದ ವೇಗವಾಗಿ ಬೈಕ್ ಚಲಾಯಿಸಿಕೊಂಡು ಬಂದಿದ್ದಾನೆ. ಪರಿಣಾಮ ಬೈಕ್ ಟಾಟಾ ಏಸ್‌ನ ಮಧ್ಯ ಭಾಗಕ್ಕೆ ಡಿಕ್ಕಿಯಾಗಿದೆ. ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವೀಗೀಡಾಗಿದ್ದಾನೆ.

## ಬೆಳ್ಳಂಬೆಳಗ್ಗೆ ಜೆಸಿಬಿ ಘರ್ಜನೆ

• ಉದಯವಾಹಿನಿ ಬಾಗಲಕೋಟೆ

ಬೆಳಂಬೆಳಗ್ಗೆ ಬಾಗಲಕೋಟೆ ಜಿಲ್ಲೆಯ ರಬಕವಿ- ಬನಹಟ್ಟಿ ತಾಲ್ಲೂಕಿನ ಮಹಾಲಿಂಗಪುರ ಪಟ್ಟಣದ ವಾರ್ಡ್ ನಂಬರ್ 13 ಕೆಂಗೇರಿ ಮಡ್ಡಿಯಲ್ಲಿ ಜೆಸಿಬಿಗಳು ಘರ್ಜಿಸಿವೆ. ಐದಾರು ವರ್ಷಗಳಿಂದ ಕೆಲ ಕುಟುಂಬಸ್ಥರು ಪಟ್ಟಣದ ಕೆಂಗೇರಿ ಮಡ್ಡಿಯ ಆಶ್ರಯ ಕಾಲೋನಿಯಲ್ಲಿ ವಾಸವಿದ್ದರು.

ಆದರೆ ಜೆಸಿಬಿ ಆಗಮಿಸುತ್ತಿದ್ದಂತೆಯೇ ಸ್ಥಳೀಯರು ಆತಂಕಗೊಂಡಿದ್ದಾರೆ. ಮಾಹಲಿಂಗಪುರ ಪುರಸಭೆ ಹಾಗೂ ತಹಶೀಲ್ದಾರ್ ನೇತೃತ್ವದಲ್ಲಿ ತೆರವು ಕಾರ್ಯಾಚರಣೆ ನಡೆದಿದ್ದು, ಜನ ವಾಸವಿರುವ ಶೆಡ್‌ಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಲಾಗುತ್ತಿದೆ. ನಮಗೆ ಯಾವುದೇ ರೀತಿಯ ಸೂಚನೆ ನೀಡದೇ, ನೋಟಿಸ್ ಕೊಡದೇ ಏಕಾಏಕಿ ತೆರವು ಕಾರ್ಯಾಚರಣೆ ಮಾಡಿದ್ದಾರೆ ಎಂದು ಜನರು ಆಕ್ರೋಶ ಹೊರಹಾಕಿದ್ದಾರೆ. ಈಗ ತೆರವು ಮಾಡಿದರೆ ನಾವು ಎಲ್ಲಿಗೆ ಹೋಗಬೇಕು, ಚುನಾವಣೆ ವೇಳೆ ವೋಟು ಕೇಳಲು ಬರುವ ಜನಪ್ರತಿನಿಧಿಗಳು ಶೆಡ್ ಹಾಕಿಕೊಂಡು ಇಲ್ಲೇ ಇರಿ ಎಂದು ನೋಟಿಸ್ ನೀಡಿದ್ದರು. ಈಗ ಶೆಡ್ ತೆರವು ಮಾಡುವಾಗ ಯಾರೂ ಬರುತ್ತಿಲ್ಲ ಎಂದು ಮಹಿಳೆಯರು ಕಣ್ಣೀರು ಹಾಕಿ ಅಳಲು ತೋಡಿಕೊಳ್ಳುತ್ತಿದ್ದಾರೆ.

## ಜನಪದ ಸಂಸ್ಕೃತಿಯ ಉಳಿವು ಅಗತ್ಯ

• ಉದಯವಾಹಿನಿ ಆಳಂದ

ಅಮತಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜನನದ ಉತ್ಸವದ ಅಂಗವಾಗಿ ಚಿಕ್ಕಡಿಯ ಮೆರವಣಿಗೆಯಲ್ಲಿ ಕಾಲೇಜು ಸಿಬ್ಬಂದಿಗಳು ಗ್ರಾಮೀಣ ಉಡಿಗೆ ತೊಟ್ಟು ಗಮನ ಸೆಳೆದರು. ಅಧುನಿಕತೆಯ ಭರಾ ಉಳಿಸಿ ಬೆಳೆಸುವ ಜವಾಬ್ದಾರಿ ಪರಾಟೆಯಲ್ಲಿ ನಾವಿಂದು ನಮ್ಮ ಸಂಸ್ಕೃತಿ, ಪರಂಪರೆಯನ್ನು ಮರೆಯುತ್ತಿದ್ದೇವೆ.

ಅದನ್ನು ನಮ್ಮೆಲ್ಲರ ಮೇಲೆ ಇದೆ' ಎಂದು ಪ್ರಾಂಶುಪಾಲರಾದ ಪ್ರೇಮಿಳಾ ಅಂಬಾರಾಯ ಹೇಳಿದರು. ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡ 'ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ' ಘೋಷಣೆಯೊಂದಿಗೆ ಜನಪದ ಉತ್ಸವ ಕಾರ್ಯಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಡಿಸಿಸಿ ಬ್ಯಾಂಕ್ ಶಾಖೆಯಲ್ಲಿ 2014ರ ಜೂನ್ ನಲ್ಲಿ ನಡೆದಿದ್ದ ನಕಲಿ ಗೋಲ್ಡ್ ಪ್ರಕರಣ

# ಡಿಸಿಸಿ ಬ್ಯಾಂಕ್ ನಕಲಿ ಗೋಲ್ಡ್ ಹಗರಣ : ಇಡಿ ತಂಡದ ದಾಳಿ

• ಉದಯವಾಹಿನಿ ಶಿವಮೊಗ್ಗ

ಬೆಳ್ಳಂಬೆಳಗ್ಗೆ ಶಿವಮೊಗ್ಗದಲ್ಲಿ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಡಿಸಿಸಿ ಬ್ಯಾಂಕ್ ನಕಲಿ ಗೋಲ್ಡ್ ಹಗರಣಕ್ಕೆ ಸಂಬಂಧಿಸಿದಂತೆ ಗೋಪಾಲಗೌಡ ಬಡಾವಣೆಯಲ್ಲಿರುವ ಡಿಸಿಸಿ ಬ್ಯಾಂಕ್ ಮ್ಯಾನೇಜರ್ ಆಗಿದ್ದ ಶೋಭಾರವರ ನಿವಾಸದ ಮೇಲೆ ಇಡಿ ಅಧಿಕಾರಿಗಳು ದಾಳಿ ನಡೆಸಿ, ದಾಖಲೆಗಳನ್ನು ಪರಿಶೀಲನೆ ನಡೆಸುತ್ತಿದ್ದಾರೆ.

2014ರಲ್ಲಿ ಡಿಸಿಸಿ ಬ್ಯಾಂಕ್ ನಕಲಿ ಬಂಗಾರ ಹಗರಣಕ್ಕೆ ಸಂಬಂಧಿಸಿ ಜಾರಿನಿರ್ದೇಶನಾಲಯ ಅಧಿಕಾರಿಗಳು ಮಂಗಳವಾರ ಶಿವಮೊಗ್ಗ ಮತ್ತು ಭದ್ರಾವತಿ ಸೇರಿದಂತೆ 8 ಸ್ಥಳಗಳಲ್ಲಿ ದಾಳಿ ನಡೆಸಿದ್ದಾರೆ.

ಹಗರಣದ ಕೇಂದ್ರ ಬಿಂದುವಾಗಿದ್ದ ಡಿಸಿಸಿ ಬ್ಯಾಂಕಿನ ಶಿವಪ್ಪನಾಯಕ ವೃತ್ತದ ಬಳಿ ಇದ್ದ ಶಾಖೆಯ ಬ್ಯಾಂಕ್ ಮ್ಯಾನೇಜರ್ ಆಗಿದ್ದ ಶೋಭಾ ಅವರ ನಿವಾಸ, ಚಾಲಕರಾಗಿದ್ದ ಕಾಮಾಕ್ಷಿ ಬೀದಿಯ ಶಿವಕುಮಾರ್ ಮನೆ, ಭದ್ರಾವತಿ ಜೆಡಿಕಟ್ಟೆಯಲ್ಲಿರುವ ಡಿಸಿಸಿ ಬ್ಯಾಂಕ್ ನ ಸಿಬ್ಬಂದಿ, ಮಾಡ್ರನ್ ಚಲನಚಿತ್ರ ಮಂದಿರದ ಬಳಿಯಿರುವ ಡಿಸಿಸಿ ಬ್ಯಾಂಕ್ ನ ಶಾಖೆ ಸೇರಿದಂತೆ 8 ಕಡೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಗೋಪಾಲ ಗೌಡ ಬಡಾವಣೆಯಲ್ಲಿರುವ ಡಿಸಿಸಿ ಬ್ಯಾಂಕ್‌ನ ಮ್ಯಾನೇಜರ್ ಶೋಭಾ ಅವರ ಮನೆಯ ಮೇಲೆ ಬೆಂಗಳೂರಿನಿಂದ ಇಡಿ ಕಚೇರಿಯ ತಂಡದಿಂದ ದಾಳಿ ನಡೆದಿದೆ. ಬೆಳ್ಳಂಬೆಳಗ್ಗೆ ದಾಳಿ ಆರಂಭವಾಗಿದೆ, ಡಿಸಿಸಿ ಬ್ಯಾಂಕ್ ಹಗರಣಕ್ಕೆ ಸಂಬಂಧಿಸಿದಂತೆ ದಾಳಿ-ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಪ್ರತ್ಯೇಕ ವಾಹನಗಳಲ್ಲಿ ಆಗಮಿಸಿರುವ 96 ಕ್ಕೂ ಹೆಚ್ಚು ಅಧಿಕಾರಿಗಳ ತಂಡ ದಾಳಿ ನಡೆಸಿ ದಾಖಲೆಗಾಗಿ ಶೋಧ ಮುಂದುವರೆಸಿದ್ದಾರೆ.

### ಬ್ಯಾಂಕ್ ಮ್ಯಾನೇಜರ್ ನಿವಾಸದ ಮೇಲೆ ಇ ಡಿ ದಾಳಿ

ಶಿವಮೊಗ್ಗದ ಗಾಂಧಿ ಬಜಾರ್ ನಗರ ಶಾಖೆಯಲ್ಲಿ 2014ರ ಜೂನ್ ನಲ್ಲಿ ನಡೆದಿದ್ದ ನಕಲಿ ಗೋಲ್ಡ್ ಪ್ರಕರಣ ಸಂಬಂಧಿಸಿದಂತೆ, ಆ ವೇಳೆ ಶಾಖೆಯ ಮ್ಯಾನೇಜರ್ ಆಗಿದ್ದ ಶೋಭಾ ರವರ ನಿವಾಸ ಮೇಲೆ ಬೆಂಗಳೂರಿನಿಂದ ಮೂರು ಪ್ರತ್ಯೇಕ ವಾಹನಗಳಲ್ಲಿ ಆಗಮಿಸಿರುವ 8ಕ್ಕೂ ಹೆಚ್ಚು ಅಧಿಕಾರಿಗಳ ತಂಡ ದಾಳಿ ಮಾಡಿ ದಾಖಲೆ ಪರಿಶೀಲನೆ ನಡೆಸುತ್ತಿದೆ. ಇದೇ ವೇಳೆ ಬ್ಯಾಂಕ್ ನ ವಾಹನ ಚಾಲಕನಾಗಿದ್ದ ಶಿವಕುಮಾರ್ ಎಂಬುವರ ನಿವಾಸ ಮೇಲೂ ಇಡಿ ಅಧಿಕಾರಿಗಳು ದಾಳಿ ಮಾಡಿ ದಾಖಲೆ ಪರಿಶೀಲನೆ ನಡೆಸುತ್ತಿದ್ದಾರೆ.


ಉದಯವಾಹಿನಿ ಚಿತ್ರ

- ಶಿವಮೊಗ್ಗದ ಗಾಂಧಿ ಬಜಾರ್ ನಗರ ಡಿಸಿಸಿ ಬ್ಯಾಂಕ್ ಶಾಖೆಯಲ್ಲಿ 2014ರ ಜೂನ್ ನಲ್ಲಿ ನಡೆದಿದ್ದ ನಕಲಿ ಗೋಲ್ಡ್ ಪ್ರಕರಣ
- ಬೆಳ್ಳಂಬೆಳಗ್ಗೆ ಶಿವಮೊಗ್ಗದಲ್ಲಿ ಇಡಿ ಅಧಿಕಾರಿಗಳ ದಾಳಿ
- ಡಿಸಿಸಿ ಬ್ಯಾಂಕ್ ಮ್ಯಾನೇಜರ್ ಆಗಿದ್ದ ಶೋಭಾರವರ ನಿವಾಸದಲ್ಲಿ ದಾಖಲೆಗಳ ಪರಿಶೀಲನೆ
- ಡಿಸಿಸಿ ಬ್ಯಾಂಕ್ ನಕಲಿ ಗೋಲ್ಡ್ ಹಗರಣ, ಶಿವಮೊಗ್ಗದಲ್ಲಿ ಇಡಿ ತಂಡದ ದಾಳಿ

# ಬೆಂಕಿ ಅವಘಡದಲ್ಲಿ ಅಂಧ್ರ ಡಿಸಿಎಂ ಪವಲ್ ಕಲ್ಯಾಣ್ ಪುತ್ರನಿಗೆ ಗಾಯ



**ಹೈದರಾಬಾದ್:** ಅಂಧ್ರ ಪ್ರದೇಶ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಪುತ್ರ ಬೆಂಕಿ ಅವಘಡಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಪವನ್ ಕಲ್ಯಾಣ್ ಕಿರಿಯ ಪುತ್ರ ಮಾರ್ಕ್ ಶಂಕರ್ ಕಲಿಯುತ್ತಿರುವ ಸಿಂಗಾಪುರ ಶಾಲೆಯಲ್ಲಿ ನಡೆದ ಬೆಂಕಿ ಅವಘಡ ನಡೆದಿದ್ದು, ಮಾರ್ಕ್‌ಗೆ ತೀವ್ರ ಸುಟ್ಟ ಗಾಯಗಳಾಗಿವೆ ಎನ್ನಲಾಗುತ್ತಿದೆ. ಇದೇ ಕಾರಣಕ್ಕೆ ಪವನ್ ಕಲ್ಯಾಣ್ ಸಿಂಗಪುರಕ್ಕೆ ತೆರಳಿದ್ದು, ಪುತ್ರನ ಆರೈಕೆಯಲ್ಲಿ ತೊಡಗಲಿದ್ದಾರೆ ಎಂದು ತಿಳಿದುಬಂದಿದೆ. ಪವನ್ ಕಲ್ಯಾಣ್ ಕಿರಿಯ ಪುತ್ರ ಮಾರ್ಕ್, ಸಿಂಗಪುರದ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಅವರ ಪತ್ನಿಯೂ ಸಹ ಸಿಂಗಪುರದಲ್ಲಿಯೇ ನೆಲೆಸಿದ್ದಾರೆ. ಪವನ್ ಕಲ್ಯಾಣ್ ಅವರು ಆಗಾಗ್ಗೆ ಸಿಂಗಪುರಕ್ಕೆ ಹೋಗಿ ಬರುತ್ತಿರುತ್ತಾರೆ. ಇತ್ತೀಚೆಗೆ ಮಾರ್ಕ್ ಶಂಕರ್ ಕಲಿಯುತ್ತಿದ್ದ ಶಾಲೆಯಲ್ಲಿ ಬೆಂಕಿ ಅವಘಡ ನಡೆದಿದ್ದು, ಅವಘಡದಲ್ಲಿ ಮಾರ್ಕ್‌ರ ಕಾಲು, ಬೆನ್ನು, ಕೈಗಳಿಗೆ ತೀವ್ರ ಸುಟ್ಟ ಗಾಯಗಳಾಗಿವೆ. ಇದರ ಜತೆಗೆ ಅತಿಯಾದ ಹೊಗೆಯಿಂದಾಗಿ ಉಸಿರಾಟದ ಸಮಸ್ಯೆಯೂ ಸಹ ಮಾರ್ಕ್‌ಗೆ ಕಾಣಿಸಿಕೊಂಡಿದ್ದು, ಮಾರ್ಕ್ ಶಂಕರ್ ಅನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಪವನ್ ಕಲ್ಯಾಣ್ ಮೂರನೇ ಪತ್ನಿ ಅನ್ನಾ ಲೆಕ್ಷೇವಾ ಅವರಿಗೆ ಇಬ್ಬರು ಮಕ್ಕಳು ಮಾರ್ಕ್ ಶಂಕರ್ ಮತ್ತು ಪೊಲೇನಾ ಅಂಜನಾ. ಈ ಇಬ್ಬರೂ ಸಹ ಸಿಂಗಪುರದಲ್ಲಿ ನೆಲೆಸಿದ್ದಾರೆ. ಅಲ್ಲಿಯೇ ಶಾಲೆ ಕಲಿಯುತ್ತಿದ್ದಾರೆ.

ಪವನ್ ಕಲ್ಯಾಣ್ ಅವರ ಎರಡನೇ ಪತ್ನಿ ರೇಣುಕಾ ಅವರಿಗೂ ಇಬ್ಬರು ಮಕ್ಕಳು. ಅಕಿರಾ ನಂದ ಮತ್ತು ಅದ್ಯಾ, ಅಕಿರಾ ನಂದ ಸಿನಿಮಾ ಹೀರೋ ಆಗಲು ಸಜ್ಜಾಗಿದ್ದಾರೆ. ಈಗಾಗಲೇ ಅವರು ಪವನ್ ಕಲ್ಯಾಣ್ ನಟನೆಯ ಇನ್ನೂ ಬಿಡುಗಡೆ ಆಗದ ಓಜಿ ಸಿನಿಮಾನಲ್ಲಿ ನಟಿಸಿದ್ದಾರೆ ಎನ್ನಲಾಗುತ್ತಿದೆ. ಪವನ್ ಕಲ್ಯಾಣ್ ಅವರ ಮೊದಲೇ ಪತ್ನಿ ನಂದಿನಿಗೆ ಮಕ್ಕಳಾಗಿರಲಿಲ್ಲ. ರಾಜಕೀಯದಲ್ಲಿ ಬ್ಯುಸಿಯಾಗಿರುವ ಪವನ್ ಕಲ್ಯಾಣ್ ಹೆಚ್ಚಿನ ಸಮಯ ಅಂಧ್ರದಲ್ಲಿಯೇ ಕಳೆಯುತ್ತಾರೆ. ತಿಂಗಳಿಗೆ, ವಾರಕ್ಕೆ ಒಮ್ಮೆ ಅವರು ಸಿಂಗಪುರಕ್ಕೆ ಹೋಗಿ ಮಕ್ಕಳು, ಕುಟುಂಬವನ್ನು ಭೇಟಿ ಆಗಿ ಬರುತ್ತಾರೆ. ಪವನ್ ಕಲ್ಯಾಣ್, ರಾಜಕೀಯದಲ್ಲಿ ಸಕ್ರಿಯರಾದ ಬಳಿಕ ಸಿನಿಮಾಗಳಲ್ಲಿ ನಟಿಸುವುದು ಬಹಳ ಕಡಿಮೆ ಮಾಡಿದ್ದಾರೆ. ಈ ಮೊದಲು ಪ್ರಾರಂಭಿಸಿದ್ದ ಕೆಲ ಸಿನಿಮಾಗಳನ್ನು ಪೂರ್ಣಗೊಳಿಸುತ್ತಿದ್ದಾರೆ. ಅವುಗಳಲ್ಲಿ ಹರಿಹರ ವೀರ ಮಲ್ಲು ಸಿನಿಮಾ ಕೆಲವೇ ದಿನಗಳಲ್ಲಿ ಬಿಡುಗಡೆ ಆಗಲಿದೆ. ಅದರ ಬಳಿಕ ಓಜಿ ಸಿನಿಮಾ ತೆರೆಗೆ ಬರಲಿದೆ. ಉಸ್ತಾದ್ ಗಬ್ಬರ್ ಸಿನಿಮಾದ ಚಿತ್ರೀಕರಣ ಇನ್ನಷ್ಟೆ ಆರಂಭ ಆಗಬೇಕಿದೆ)

### ಯುಎಸ್ ಪ್ರತಿಸುಂಕಕ್ಕೆ ಅದೇ ದಾಟಿಯಲ್ಲಿ ಚೀನಾ ಪ್ರತೀಕಾರ ತೆರಿಗೆ

# ಅಮೆರಿಕಾದ ಈ ವಾಣಿಜ್ಯ ನೀತಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ



- ಅಮೆರಿಕಾಗೆ ರಫ್ತಾಗುವ ಚೀನೀ ಸರಕುಗಳ ಮೇಲೆ ಶೇ. 104ರಷ್ಟು ಸುಂಕ ವಿಧಿಸುವ ಸಾಧ್ಯತೆ
- ನಮ್ಮ ವಹಿವಾಟುಗಳು ಅಭಿವೃದ್ಧಿಯನ್ನು ಹೊಂದುತ್ತಲೇ ಇದೆ ಎಂದ ಚೀನಾ ಸರ್ಕಾರದ ಮುಖವಾಣಿ

**ಬೀಜಿಂಗ್:** ಎಂಟು ವರ್ಷಗಳ ಹಿಂದೆ ಅಮೆರಿಕಾವು ನಮ್ಮ ವಾಣಿಜ್ಯ ವ್ಯವಹಾರಕ್ಕೆ ಸದಾ ಒಂದಲ್ಲಾ ಒಂದು ತೊಂದರೆಯನ್ನು ಕೊಡಲು ಆರಂಭಿಸಿತು. ಇದರಿಂದ ಆಕಾಶವೇನೂ ತಲೆ ಮೇಲೆ ಬಿದ್ದಿಲ್ಲ. ಬದಲಿಗೆ, ನಮ್ಮ ವಹಿವಾಟುಗಳು ಅಭಿವೃದ್ಧಿಯನ್ನು ಹೊಂದುತ್ತಲೇ ಇದೆ. ಇದು ಚೀನಾದ ಕಮ್ಯೂನಿಸ್ಟ್ ಪಾರ್ಟಿಯ ಮುಖವಾಣಿ ಪೀಪಲ್ಸ್ ಡೈಲಿಯ ಲೇಖನದಲ್ಲಿ ಉಲ್ಲೇಖವಾದ ವಾಕ್ಯ.

ಡೊನಾಲ್ಡ್ ಟ್ರಂಪ್ ಅವರ ಪ್ರತಿಸುಂಕ ನೀತಿಯಿಂದ ವಿಶ್ವದ ಸುಮಾರು 50 ರಾಷ್ಟ್ರಗಳು ತತ್ತರಿಸಿ ಹೋಗಿವೆ. ಹಲವು ರಾಷ್ಟ್ರಗಳು ಅಮೆರಿಕಾದ ಜೊತೆ ಸಂಧಾನಕ್ಕೆ ಮುಂದಾಗಿವೆ ಎಂದು ಶ್ವೇತಭವನದ ಅಧಿಕಾರಿಗಳೂ ಹೇಳಿದ್ದಾರೆ. ಈ ನಡುವೆ, ಜಾಗತಿಕವಾಗಿ ಷೇರು ಮಾರುಕಟ್ಟೆ ತಲ್ಲಣ ಮುಂದುವರಿದಿದೆ. ತನ್ನ ಮೇಲೆ ವಿಧಿಸಿರುವ ಪ್ರತಿಸುಂಕಕ್ಕೆ ಕೌಂಟರ್ ಕೊಡಲು ಚೀನಾ, ಅಮೆರಿಕಾದ ಮೇಲೆ ಶೇ. 34ರಷ್ಟು ಸುಂಕವನ್ನು ಏರಿಸಿತ್ತು. ಇದಕ್ಕೆ ಕೆಂಡಾಮಂಡಲವಾಗಿರುವ ಡೊನಾಲ್ಡ್ ಟ್ರಂಪ್, ಡ್ರ್ಯಾಗನ್ ದೇಶಕ್ಕೆ ಅಲ್ಟಿಮೇಟಂ ನೀಡಿದ್ದಾರೆ. ಏಪ್ರಿಲ್ 8 ಲಾಸ್ಟ್ ಡೇಟ್ ಎಂದು ಟ್ರಂಪ್ ಎಚ್ಚರಿಕೆಯನ್ನು ನೀಡಿದ್ದಾರೆ.

ಏ. 8ರರೊಳಗೆ ಸುಂಕವನ್ನು ಹಿಂದಕ್ಕೆ ಪಡೆಯದಿದ್ದಲ್ಲಿ ಏ. 9ರಿಂದ ಚೀನಾದ ಉತ್ಪನ್ನಗಳ ಮೇಲೆ ಶೇ.50ರಷ್ಟು ಪ್ರತಿಸುಂಕ ವಿಧಿಸಲಿದೆ ಎಂದು ಎಚ್ಚರಿಕೆಯನ್ನು ಟ್ರಂಪ್ ನೀಡಿದ್ದಾರೆ. ಇದಕ್ಕೆ ಇದೊಂದು, ಬ್ಲ್ಯಾಕ್ ಮೇಲ್ ಟ್ರೇಡ್ ವಾರ್ ಎಂದು ಚೀನಾ ಪ್ರತಿಕ್ರಿಯಿಸಿದೆ. ಒಂದು ವೇಳೆ ಟ್ರಂಪ್ ಅವರು ತಮ್ಮ ನಿರ್ಧಾರಕ್ಕೆ ಬದ್ದರಾದಲ್ಲಿ, ಅಮೆರಿಕಾಗೆ ರಫ್ತಾಗುವ ಚೀನೀ ಸರಕುಗಳ ಮೇಲೆ ಶೇ. 104ರಷ್ಟು ಸುಂಕ ವಿಧಿಸುವ ಸಾಧ್ಯತೆಯಿದೆ. ಇದು, ವಿಶ್ವದ ಎರಡು ಬಲಾಢ್ಯ ರಾಷ್ಟ್ರಗಳ ನಡುವೆ, ಭಾರೀ ವಾಣಿಜ್ಯ ಸಮರಕ್ಕೆ ನಾಂದಿ ಹಾಡುವ ಸಾಧ್ಯತೆ ಇಲ್ಲದಿಲ್ಲ.

ಅಮೆರಿಕಾದ ಈ ವಾಣಿಜ್ಯ ನೀತಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ, ಇದನ್ನು ನಾವು ಖಂಡಿಸುತ್ತೇವೆ. ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಚೀನಾ ಸಿದ್ದವಿದೆ. ಆದರೆ, ನಾವು ಅಮೆರಿಕಾದ ಒತ್ತಡಕ್ಕೆ ಮಣಿಯುವುದಿಲ್ಲ ಎಂದು ಚೀನಾ ಸ್ಪಷ್ಟಪಡಿಸಿದೆ.

ತಪ್ಪಿನ ಮೇಲೆ ಅಮೆರಿಕಾ ತಪ್ಪು ಮಾಡುತ್ತಿದೆ ಎಂದು ಚೀನಾದ ವಾಣಿಜ್ಯ ಸಚಿವಾಲಯ ಹೇಳಿದೆ. ಅಮೆರಿಕಾದ ಬ್ಲ್ಯಾಕ್ ಮೇಲ್ ತಂತ್ರಕ್ಕೆ ನಾವು ಮಣಿಯುವುದಿಲ್ಲ, ಟ್ರಂಪ್ ತಮ್ಮ ದಾರಿಯೇ ಸರಿಯೆಂದು ನಡೆದರೆ, ನಾವು ಕೊನೆಯವರೆಗೂ ಹೋರಾಡುತ್ತೇವೆ. ಏಕಪಕ್ಷೀಯ ದಬ್ಬಾಳಿಕೆಯನ್ನು ಮೊದಲು ನಿಲ್ಲಿಸಿ ಎಂದು ಚೀನಾ ಹೇಳಿದೆ. ಚೀನಾದ ಮೇಲೆ ಶೇ. 34ರಷ್ಟು ಸುಂಕವನ್ನು ಅಮೆರಿಕಾ ವಿಧಿಸಿತ್ತು, ಇದಕ್ಕೆ ಒಟ್ಟಾರೆಯಾಗಿ ಚೀನಾದ ಮೇಲೆ ಶೇ.76ರಷ್ಟು ಏರಿಕೆಯಾದಂಗಾಗಿತ್ತು.

ಇದಕ್ಕೆ ಕೌಂಟರ್ ಕೊಡಲು ಚೀನಾ ಕೂಡಾ ಅಮೆರಿಕಾದ ಉತ್ಪನ್ನಗಳ ಮೇಲೆ ಶೇ. 34 ಸುಂಕ ವಿಧಿಸಿತು. ಈಗ, ಇದನ್ನು ಇಳಿಸಲು ಟ್ರಂಪ್, ಚೀನಾಗೆ ಡೆಡ್ಲೈನ್ ನೀಡಿದ್ದಾರೆ. ಟ್ರಂಪ್ ಅವರ ಪ್ರತಿಸುಂಕ ನೀತಿ ಈಗಾಗಲೇ ಜಾಗತಿಕ ಮಾರುಕಟ್ಟೆಯನ್ನು ಅಲುಗಾಡಿಸಿಬಿಟ್ಟಿದೆ. ಚೀನಾ ದೇಶವು ಅಮೆರಿಕಾದಿಂದ ಕೃಷಿ ಉತ್ಪನ್ನಗಳ ಖರೀದಿಯನ್ನು ನಿಲ್ಲಿಸಬಹುದು. ಸರಿಸಮಾನವಾದ ಸುಂಕವನ್ನು ವಿಧಿಸಿ ರಫ್ತು ನಿಯಂತ್ರಣವನ್ನು ವಿಸ್ತರಿಸುವ ಸಾಧ್ಯತೆಯಿದೆ ಎಂದು ಎಕ್ಸಪರ್ಟ್ ಗಳು ಹೇಳಿದ್ದಾರೆ.

ಚೀನಾ ಮತ್ತು ಅಮೆರಿಕಾದ ನಡುವಿನ ಟ್ರೇಡ್ ವಾರ್, ಭಾರತಕ್ಕೆ ವರವಾಗಿ ಪರಿಣಮಿಸಬಹುದು. ಜಾಗತಿಕ ಮಾರುಕಟ್ಟೆ ಇದೇ ರೀತಿ ಅನಿಶ್ಚಿತತೆಯಿಂದ ಮುಂದುವರಿದರೆ, ಚೀನಾದಲ್ಲಿ ನೆಲೆ ಊರಿರುವ ಕಂಪೆನಿಗಳು ಬೇರೆ ದೇಶಕ್ಕೆ ಶಿಫ್ಟ್ ಆಗಬಹುದು.

ಆಗ, ಭಾರತ ಮೊದಲ ಆದ್ಯತೆ ಆಗಬಹುದು ಎಂದು ವ್ಯಾಖ್ಯಾನಿಸಲಾಗುತ್ತಿದೆ.

**ವಾಣಿಜ್ಯ ಸಮರ ತೀವ್ರ**

**ಅಮೆರಿಕಾ ಮತ್ತು ಚೀನಾದ ನಡುವಿನ ವಾಣಿಜ್ಯ ಸಮರ ತೀವ್ರ ಸ್ವರೂಪ ಪಡೆಯುವತ್ತ ಸಾಗುತ್ತಿದೆ. ಮಂಗಳವಾರ ಪ್ರತೀಕಾರ ತೆರಿಗೆಯನ್ನು ಹಿಂದಕ್ಕೆ ಪಡೆಯದಿದ್ದರೆ, ಶೇ. 50ರಷ್ಟು ಪ್ರತಿಸುಂಕ ಹಾಕುವುದಾಗಿ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಚೀನಾಗೆ ಎಚ್ಚರಿಕೆಯನ್ನು ನೀಡಿದ್ದಾರೆ.**

## ಮಿನಿ ನ್ಯೂಸ್

### ಮೇಘಾಲಯದ ಪ್ರಧಾನ ಕಾರ್ಯದರ್ಶಿ ಉಜ್ಜಕಿಸ್ತಾನದಲ್ಲಿ ಶವವಾಗಿ ಪತ್ತೆ

**ಶಿಲ್ಲಾಂಗ್:** ಮೇಘಾಲಯದ ಪ್ರಧಾನ ಕಾರ್ಯದರ್ಶಿ ಸೈಯದ್ ಮೊಹಮ್ಮದ್ ಎ ರಝಿ ಅವರು ಉಜ್ಜಕಿಸ್ತಾನದ ಹೋಟೆಲ್ ಕೋಣೆಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಕಳೆದ 2021 ರಿಂದ ರಾಜ್ಯಕ್ಕೆ ಡೆಮ್ಯುಟೇಶನ್‌ನಲ್ಲಿರುವ ಐಆರ್‌ಟಿಎಸ್ ಅಧಿಕಾರಿಯಾಗಿರುವ ರಝಿ ಏಪ್ರಿಲ್ 4ರಿಂದ ಉಜ್ಜಕಿಸ್ತಾನದ ಬುಖಾರಾ ನಗರದಲ್ಲಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಅವರು ಹೃದಯ ಸ್ತಂಭನದಿಂದ ಸಾವನ್ನಪ್ಪಿದ್ದಾರೆ ಎಂದು ಶಂಕಿಸಲಾಗಿದೆ.ಹಿರಿಯ ಸರ್ಕಾರಿ ಅಧಿಕಾರಿಯೊಬ್ಬರ ಪ್ರಕಾರ, ನಿನ್ನೆ ರಝಿ ಅವರು ಯಾವುದೇ ಕರೆಗಳಿಗೆ ಪ್ರತಿಕ್ರಿಯಿಸಲಿಲ್ಲ, ಮತ್ತು ನಂತರ ಹೋಟೆಲ್ ಸಿಬ್ಬಂದಿ ಅವರ ಕೋಣೆಯ ಬಾಗಿಲು ಒಡೆದರು. ಅಲ್ಲಿ ಅವರು ಅವರ ನಿರ್ಜೀವ ದೇಹವನ್ನು ಕಂಡುಕೊಂಡರು. ಅಗತ್ಯ ಔಪಚಾರಿಕತೆಗಳು ನಡೆಯುತ್ತಿವೆ ಮತ್ತು ರಝಿ ಅವರ ಪತ್ನಿ ಬುಖಾರಾಗೆ ತೆರಳುತ್ತಿದ್ದಾರೆ ಎಂದು ಮುಖ್ಯಮಂತ್ರಿ ಕಾನಾಡ್ ಕೆ ಸಂಗಾ ಪಿಟಿಐಗೆ ತಿಳಿಸಿದ್ದಾರೆ.

ಜಿಎಎಂನ ಪ್ರಧಾನ ಕಾರ್ಯದರ್ಶಿ ಐಆರ್‌ಟಿಎಸ್ ಸೈಯದ್ ಮೊಹಮ್ಮದ್ ಎ ರಝಿ ಅವರ ಅಕಾಲಿಕ ನಿಧನದ ಸುದ್ದಿ ಕೇಳಿ ತೀವ್ರ ನೋವಾಗಿದೆ ಎಂದು ಸಂಸ್ಥಾ ಎಕ್ಸ್‌ನಲಿ ಪೋಸ್ಟ್ ಹಾಕಿದ್ದಾರೆ. ರಝಿ ಅವರ ನಂಬಲಾಗದ ದಕ್ಷತೆ, ಅಚಲ ಸಮರ್ಪಣೆ ಅವರು ನಿರ್ವಹಿಸಿದ ಪ್ರತಿಯೊಂದು ವಿಭಾಗದಲ್ಲೂ ಸ್ಪಷ್ಟವಾಗಿತ್ತು, ಅವರು ಯಾವಾಗಲೂ ಪ್ರತಿ ಕೆಲಸವನ್ನು ಮಾಲೀಕತ್ವದ ಮಟ್ಟದೊಂದಿಗೆ ತೆಗೆದುಕೊಳ್ಳುತ್ತಿದ್ದರು ಎಂದು ಅವರ ಗುಣಗಾನ ಮಾಡಿದ್ದಾರೆ.

### ಗುಜರಾತ್ : ಟ್ರ್ಯಾಕ್ಟರ್ ಟ್ರಾಲಿಗೆ ಬೈಕ್ ಅಪ್ಪಳಿಸಿ ಮೂವರ ಸಾವು

**ಆನಂದ್:** ಟ್ರ್ಯಾಕ್ಟರ್ ಟ್ರಾಲಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಮೂವರು ಸಾವನ್ನಪ್ಪಿರುವ ಘಟನೆ ಗುಜರಾತ್‌ನ ಆನಂದ್ ಜಿಲ್ಲೆಯಲ್ಲಿ ನಡೆದಿದೆ. ತಡರಾತ್ರಿ 10 ಗಂಟೆ ಸುಮಾರಿಗೆ ಜಿಲ್ಲೆಯ ಅಂಬಾಕುಯಿ ಗ್ರಾಮದ ಬಳಿ ಈ ಘಟನೆ ನಡೆದಿದೆ ಎಂದು ಅಂಕ್ಲಾವ್ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೈಕ್ ಮುಂದೆ ವೇಗವಾಗಿ ಬರುತ್ತಿದ್ದ ಟ್ರ್ಯಾಕ್ಟರ್ ಟ್ರಾಲಿಯನ್ನು ಹಿಂಬಾಲಿಸುತ್ತಿತ್ತು. ಟ್ರ್ಯಾಕ್ಟರ್ ಚಾಲಕ ಹಾಕಿದ ಬ್ರೇಕ್‌ನಿಂದಾಗಿ ಬೈಕ್ ಹಿಂದಿನಿಂದ ಟ್ರ್ಯಾಕ್ಟರ್ ಟ್ರಾಲಿಗೆ ಡಿಕ್ಕಿ ಹೊಡೆದಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಬೈಕ್ ಸವಾರರಾದ ಮನ್ನಾರ್ ಪರ್ಮಾ, ರಂಜಿತ್ ಪಧಿಯಾರ್, ನರೇಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.ಅಂಕ್ಲಾವ್ ಪೊಲೀಸರು ಟ್ರ್ಯಾಕ್ಟರ್ ಚಾಲಕನ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ಘಟನೆಯ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಅವರು ಹೇಳಿದರು.

### ತಿರುವನಂತಪುರಂ ವಿಮಾನ ನಿಲ್ದಾಣ ತಾತ್ಕಾಲಿಕ ಬಂದ್

• ಉದಯವಾಹಿನಿ, ತಿರುವನಂತಪುರಂ

ಜಗತ್ ಪ್ರಸಿದ್ಧ ಪದ್ಮನಾಭಸ್ವಾಮಿ ದೇವಾಲಯವಿರುವ ತಿರುವನಂತ ಪುರಂನಲ್ಲಿ ವಿಮಾನ ನಿಲ್ದಾಣವನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗುತ್ತಿದೆ. ಏ.11 ರಂದು ತಿರುವನಂತಪುರಂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಿಮಾನ ಸೇವೆಗಳು ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿವೆ ಎಂದು ಟಿಐಎಎಲ್ ಹೇಳಿದೆ. ಶ್ರೀ ಪದ್ಮನಾಭಸ್ವಾಮಿ ದೇವಾಲಯದ ಪವಿತ್ರ 'ಪೈಂಕುಣಿ ಅರಟ್ಟು' ಮೆರವಣಿಗೆ ಸುಗಮವಾಗಿ ನಡೆಯುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ವಿಮಾನನಿಲ್ದಾಣವನ್ನು 4 ಗಂಟೆಗಳಿಗೂ ಹೆಚ್ಚು ಕಾಲ ಬಂದ್ ಮಾಡಲಾಗುತ್ತದೆ. ಏ. 11 ರಂದು ಸಂಜೆ 4.45 ರಿಂದ ರಾತ್ರಿ 9 ರವರೆಗೆ ವಿಮಾನ ಸೇವೆಗಳನ್ನು ಸ್ಥಗಿತಗೊಳಿಸ ಲಾಗುವುದು ಎಂದು ತಿರುವನಂತಪುರಂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್, ತಿಳಿಸಿದೆ. ವಿಮಾನಗಳ ನವೀಕರಿಸಿದ ಸಮಯಗಳು ಆಯಾ ವಿಮಾನಯಾನ ಸಂಸ್ಥೆಗಳೊಂದಿಗೆ ಲಭ್ಯವಿದೆ ಎಂದು ಅದು ಹೇಳಿದೆ. ಪದ್ಮನಾಭ ಸ್ವಾಮಿ ದೇವಾಲಯದ ಮೆರವಣಿಗೆ ಹಾದುಹೋಗಲು ತಿರುವನಂತಪುರಂ ವಿಮಾನ ನಿಲ್ದಾಣದಲ್ಲಿನ ರನ್‌ವೇಯನ್ನು ವರ್ಷಕ್ಕೆ ಎರಡು ಬಾರಿ ಮುಚ್ಚಲಾಗುತ್ತದೆ. ವಿಗ್ರಹಗಳ ಧಾರ್ಮಿಕ ಸ್ನಾನಕ್ಕಾಗಿ ಶಂಗುಮುಖಂ ಬೀಚ್‌ಗೆ ಹೋಗುವ ಮಾರ್ಗವನ್ನು ತೆಗೆದುಕೊಳ್ಳುವ ಈ ಸಂಪ್ರದಾಯವು ಶತಮಾನಗಳ ಹಿಂದಿನದ್ದಾಗಿದೆ ಎಂದು ವಿಮಾನ ನಿಲ್ದಾಣ ಸಾಮಾಜಿಕ ಜಾಲತಾಣ ಪೋಸ್ಟ್‌ನಲ್ಲಿ ತಿಳಿಸಿದೆ.

1932 ರಲ್ಲಿ ವಿಮಾನ ನಿಲ್ದಾಣ ಸ್ಥಾಪನೆಯಾದ ನಂತರವೂ ಈ ಆಚರಣೆ ಮುಂದುವರೆದಿದೆ ಮತ್ತು ಪ್ರತಿ ವರ್ಷ ಈ ಎರಡು ದಿನಗಳಲ್ಲಿ ವಿಮಾನಗಳನ್ನು ಮರು ನಿಗದಿಪಡಿಸಲಾಗುತ್ತದೆ. ವಿಮಾನ ನಿಲ್ದಾಣವನ್ನು ನಿರ್ಮಿಸಿದಾಗ, ಆಗಿನ ತಿರುವಾಂಕೂರು ರಾಜ ಶ್ರೀ ಚಿತ್ತಿರ ತಿರುನಾಳ್ ಬಲರಾಮ ವರ್ಮ, ವರ್ಷದಲ್ಲಿ 363 ದಿನಗಳು ಮತ್ತು ರಾಜಮನೆತನದ ನಾಮಸೂಚಕ ದೇವತೆಯಾದ ಭಗವಾನ್ ಪದ್ಮನಾಭನಿಗೆ ಎರಡು ದಿನಗಳವರೆಗೆ ಸೌಲಭ್ಯವು ಸಾರ್ವಜನಿಕರಿಗೆ ತೆರೆದಿರುತ್ತದೆ ಎಂದು ಸ್ಪಷ್ಟಪಡಿಸಿದ್ದರು. ಅಕ್ಟೋಬರ್-ನವೆಂಬರ್‌ನಲ್ಲಿ ಬರುವ ದ್ವೈವಾರ್ಷಿಕ ಅಲ್ಪಸ್ಸಿ ಉತ್ಸವ ಮತ್ತು ಮಾರ್ಚ್-ಏಪ್ರಿಲ್‌ನಲ್ಲಿ ಪೈಂಕುಣಿ ಉತ್ಸವದ ಸಮಯದಲ್ಲಿ ರನ್‌ವೇ ಮುಚ್ಚುವ ಮೊದಲು ವಿಮಾನ ನಿಲ್ದಾಣವು ಪ್ರತಿ ವರ್ಷ ಎರಡು ಬಾರಿ ನೋಟಮ್ ನೀಡುತ್ತದೆ.

### ಮನೋರಂಜನ್ ಕಾಲಿಯಾ ನಿವಾಸದ ಬಳಿ ಭಾರೀ ಸ್ಫೋಟ

**ಜಲಂಧರ್:** ಪಂಜಾಬ್ ರಾಜ್ಯದ ಜಲಂಧರ್‌ನ ಬಿಜೆಪಿ ನಾಯಕ ಮನೋರಂಜನ್ ಕಾಲಿಯಾ ಅವರ ನಿವಾಸದ ಹೊರಗೆ ಭಾರೀ ಸ್ಫೋಟ ಸಂಭವಿಸಿದ್ದು, ಆಂತಕ ಸೃಷ್ಟಿಸಿದೆ. ಮಂಗಳವಾರ ಬೆಳಗಿನ ಜಾವ 1 ಗಂಟೆ ಸುಮಾರಿಗೆ ಸ್ಫೋಟ ಸಂಭವಿಸಿದ್ದು, ಭಾರೀ ಸ್ಫೋಟಕ್ಕೆ ಗಾಢ ನಿದ್ರೆಯಲ್ಲಿದ್ದ ಜನರು ಬೆಚ್ಚಿಬಿದ್ದಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿರುವ ಪೊಲೀಸರು ಪರಿಶೀಲನೆ ನಡೆಸುತ್ತಿದ್ದು, ಸ್ಥಳೀಯ ಸಿಸಿಟಿವಿಗಳನ್ನು ಪರಿಶೀಲನೆ ನಡೆಸುತ್ತಿದ್ದಾರೆ. ಸ್ಥಳಕ್ಕೆ ವಿಧಿವಿಜ್ಞಾನ ತಂಡ ಭೇಟಿ ನೀಡಿದ್ದು, ಗ್ರೇನೇಡ್ ದಾಳಿಯೇ ಅಥವಾ ಮತ್ತಿತರ ವಸ್ತುಗಳಿಂದ ಸಂಭವಿಸಿದ ಸ್ಫೋಟವೇ ಎಂಬುದರ ಕುರಿತು ತನಿಖೆ ನಡೆಸುತ್ತಿದ್ದಾರೆ. ರಾತ್ರಿ 1 ಗಂಟೆ ಸುಮಾರಿಗೆ ಸ್ಫೋಟದ ಶಬ್ಧ ಕೇಳಿಸಿತು.

ಈ ವೇಳೆ ಎಲ್ಲರೂ ಮಲಗಿದ್ದೆವು. ಭೂಮಿಯೇ ನಡುಗಿದ ಶಬ್ಧ ಕೇಳಿಸಿತು. ನಂತರವೇ ಸ್ಫೋಟ ಎಂಬ ವಿಚಾರ ನನ್ನ ಗಮನಕ್ಕೆ ಬಂದಿತು. ಬಳಿಕ ನನ್ನ ಗನ್ ಮ್ಯಾನ್ ಅನ್ನು ಪೊಲೀಸ್ ಠಾಣೆಗೆ ಕಳುಹಿಸಿದೆ. ಸಿಸಿಟಿವಿ ತನಿಖೆ ನಡೆಸಲಾಗುತ್ತಿದೆ. ವಿಧಿವಿಜ್ಞಾನ ತಜ್ಞರು ಸಹ ಸ್ಥಳದಲ್ಲಿದ್ದಾರೆಂದು ಬಿಜೆಪಿ ನಾಯಕ ಮನೋರಂಜನ್ ಅವರು ಹೇಳಿದ್ದಾರೆ. ಜಲಂಧರ್‌ನ ಉಪ ಪೊಲೀಸ್ ಆಯುಕ್ತ ಮನ್ಪ್ರೀತ್ ಸಿಂಗ್ ಘಟನೆಯನ್ನು ದೃಢಪಡಿಸಿದ್ದು, ಮನೋರಂಜನ್ ಕಾಲಿಯಾ ಅವರ ನಿವಾಸದ ಬಳಿ ಸ್ಫೋಟ ಸಂಭವಿಸಿದೆ. ವಿಧಿವಿಜ್ಞಾನ ತಂಡವು ಪರಿಶೀಲನೆ ನಡೆಸಿ ವರದಿಯನ್ನು ನೀಡಲಿದೆ ಎಂದು ಹೇಳಿದ್ದಾರೆ.

# ಮುದ್ರಾ ಯೋಜನೆಯಡಿ 33 ಲಕ್ಷ ಕೋಟಿ ರೂ. ಸಾಲ ಮಂಜೂರು

**ನವದೆಹಲಿ:** ಮುದ್ರಾ ಯೋಜನೆಯಡಿ 33ಲಕ್ಷ ಕೋಟಿ ರೂ.ಗಿಂತ ಹೆಚ್ಚು ಮೇಲಾಧಾರ ರಹಿತ ಸಾಲಗಳನ್ನು ಮಂಜೂರು ಮಾಡಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಯೋಜನೆಯ 10ನೇ ವಾರ್ಷಿಕೋತ್ಸವದಂದು ತಮ್ಮ ನಿವಾಸದಲ್ಲಿ ಪಿಎಂ ಮುದ್ರಾ ಯೋಜನೆಯ, ಆಯ್ದ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದ ಅವರು, ಇದು ದೇಶದ ಯುವಕರಲ್ಲಿ ಉದ್ಯಮಶೀಲತೆಯ ಮನೋಭಾವವನ್ನು ಉತ್ತೇಜಿಸಲು ಸಹಾಯ ಮಾಡಿದೆ, ಉದ್ಯೋಗಾಕಾಂಕ್ಷಿಗಳಿಗಿಂತ ಉದ್ಯೋಗ ಒದಗಿಸುವವರಾಗಲು ಅವರಿಗೆ ವಿಶ್ವಾಸವನ್ನು ನೀಡಿದೆ ಎಂದು ಹೇಳಿದರು.

ಹಣವಿಲ್ಲದವರಿಗೆ ಧನಸಹಾಯ ನೀಡುವ ಉದ್ದೇಶದಿಂದ,ಪ್ರಧಾನಿ ಮೋದಿ ಅವರು ಸದಸ್ಯ ಸಾಲ ನೀಡುವ ಸಂಸ್ಥೆಗಳ ಮೂಲಕ ಮೇಲಾಧಾರ ರಹಿತ ಸಾಂಸ್ಥಿಕ ಸಾಲವನ್ನು ಒದಗಿಸಲು ಪಿಎಂ ಎಂವೈ ಅನ್ನು ಏಪ್ರಿಲ್ 8, 2015 ರಂದು ಪ್ರಾರಂಭಿಸಿದರು. ಮುದ್ರಾ ಫಲಾನುಭವಿಗಳಲ್ಲಿ ಅರ್ಧದಷ್ಟು ಎಸ್ಸಿ, ಎಸ್ಟಿ ಮತ್ತು ಒಬಿಸಿ ಸಮುದಾಯಗಳಿಗೆ ಸೇರಿದವರು ಮತ್ತು ಶೇಕಡಾ 70 ಕ್ಕೂ ಹೆಚ್ಚು ಫಲಾನುಭವಿಗಳು ಮಹಿಳೆಯರು ಎಂಬುದು ವಿಶೇಷವಾಗಿ ಹೃದಯ ಸ್ಪರ್ಶಿಯಾಗಿದೆ. ಪ್ರತಿಯೊಂದು ಮುದ್ರಾ ಸಾಲವು ಘನತೆ, ಸ್ವಾಭಿಮಾನ, ಅವಕಾಶವನ್ನು ತನ್ನೊಂದಿಗೆ ಕೊಂಡೊಯ್ಯುತ್ತದೆ. ಆರ್ಥಿಕ ಸೇರ್ಪಡೆಯ ಜೊತೆಗೆ, ಈ ಯೋಜನೆಯೂ ಇದೆ ಎಂದಿದ್ದಾರೆ.



**ಮಹಿಳೆಯರು ಹೆಚ್ಚಿನ ಸಾಲಗಳಿಗೆ ಅರ್ಜಿ ಸಲ್ಲಿಸಿದ್ದಾರೆ, ಹೆಚ್ಚಿನ ಸಾಲಗಳನ್ನು ಪಡೆದಿದ್ದಾರೆ ಮತ್ತು ಅವುಗಳನ್ನು ವೇಗವಾಗಿ ಮರುಪಾವತಿಸುತ್ತಾರೆ. ಸರ್ಕಾರವು ಯೋಜನೆಯನ್ನು ಪರಿಶೀಲಿಸುತ್ತದೆ ಮತ್ತು ಅದನ್ನು ಮತ್ತಷ್ಟು ಸುಧಾರಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತದೆ**

**-ನರೇಂದ್ರ ಮೋದಿ, ಪ್ರಧಾನಿ**

ಮುದ್ರಾ ಯೋಜನೆಯಲ್ಲಿ ಅತಿ ಹೆಚ್ಚು ಮಹಿಳೆ ಯರು ಮುಂದೆ ಬಂದಿದ್ದಾರೆ ಎಂದರು.

ಮುಂಬರುವ ದಿನಗಳಲ್ಲಿ, ಪ್ರತಿಯೊಬ್ಬ ಮಹತ್ವಾಕಾಂಕ್ಷಿ ಉದ್ಯಮಿಗೆ ಸಾಲದ ಲಭ್ಯತೆ ಇರುವ ದೃಢವಾದ ಪರಿಸರ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಗಮನ ಹರಿಸು ವುದನ್ನು ಮುಂದುವರಿಸುತ್ತದೆ, ಇದರಿಂದಾಗಿ ಅವನಿಗೆ, ಅವಳಿಗೆ ಆತ್ಮವಿಶ್ವಾಸ, ಬೆಳೆಯಲು ಅವಕಾಶ ಸಿಗುತ್ತದೆ ಎಂದು ಅವರು ಹೇಳಿದರು.

ಪಿಎಂಎಂವೈ ಅಡಿಯಲ್ಲಿ, ಸದಸ್ಯ ಸಾಲ ನೀಡುವ ಸಂಸ್ಥೆಗಳು ಅಂದರೆ ನಿಗದಿತ ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಣ್ಣ ಹಣಕಾಸು ಬ್ಯಾಂಕುಗಳು, ಬ್ಯಾಂಕೇತರ ಹಣಕಾಸು ಕಂಪನಿಗಳು, ಮೈಕ್ರೋಫೈನಾನ್ಸ್ ಸಂಸ್ಥೆಗಳು 20 ಲಕ್ಷ ರೂ.ಗಳವರೆಗೆ ಮೇಲಾಧಾರ ರಹಿತ ಸಾಲ ವನ್ನು ನೀಡುತ್ತವೆ. ಉತ್ಪಾದನೆ, ವ್ಯಾಪಾರ ಮತ್ತು ಸೇವಾ ವಲಯಗಳು, ಚಟುವಟಿಕೆಗಳಲ್ಲಿ ಆದಾಯವನ್ನು ಉತ್ಪಾದಿಸುವ ಚಟುವಟಿಕೆಗಳಿಗೆ ಸಾಲಗಳನ್ನು ನೀಡಲಾಗುತ್ತದೆ.

# ಭಾರತ ಹಸ್ತಾಂತರ ತಡೆ ಅರ್ಜಿ ತಿರಸ್ಕರಿಸಿದ ಅಮೆರಿಕಾ ಸುಪ್ರೀಂ



**ನ್ಯೂಯಾರ್ಕ್:** 26/11 ಮುಂಬೈ ಭಯೋತ್ಪಾದಕ ದಾಳಿಯ ಆರೋಪಿ ತಹವ್ವೂರ್ ರಾಣಾ ತನ್ನನ್ನು ಭಾರತಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಗೆ ತಡೆ ನೀಡುವಂತೆ ಕೋರಿ ಸಲ್ಲಿಸಿದ್ದ ಮೇಲ್ಮನವಿಯನ್ನು ಅಮೆರಿಕಾ ಸುಪ್ರೀಂ ಕೋರ್ಟ್ ಸೋಮವಾರ ತಿರಸ್ಕರಿಸಿದೆ. ಪ್ರಸ್ತುತ ರಾಣಾ ಲಾಸ್ ಏಂಜಲೀಸ್‌ನ ಮೆಟ್ರೋಪಾಲಿಟನ್ ಬಂಧನ ಕೇಂದ್ರದಲ್ಲಿದ್ದು, ಕಳೆದ ಫೆಬ್ರವರಿಯಲ್ಲಿ ಒಂಬತ್ತನೇ ಸರ್ಕ್ಯೂಟ್‌ನ ಸರ್ಕ್ಯೂಟ್ ನ್ಯಾಯಾಧೀಶರಿಗೆ ಹಸ್ತಾಂತರವನ್ನು ತಡೆಹಿಡಿಯಲು ತುರ್ತು ಅರ್ಜಿಯನ್ನು ಸಲ್ಲಿಸಿದ್ದರು, ಆದರೆ, ನ್ಯಾಯಾಲಯ ಅದನ್ನು ತಿರಸ್ಕರಿಸಿತ್ತು. ನಂತರ, ರಾಣಾ ಮತ್ತೆ ತುರ್ತು ಅರ್ಜಿಯನ್ನು ಸಲ್ಲಿಸಿ ವಿನಾಯಿತಿ ಕೇಳಿದ್ದರು. ಆದರೆ, ಸುಪ್ರೀಂ ಕೋರ್ಟ್ ಈ ಮನವಿಯನ್ನು ನಿರಾಕರಿಸಿದೆ. 2009ರಿಂದಲೂ ರಾಣಾನನ್ನ ಭಾರತಕ್ಕೆ ಕರೆತರಲು ಭಾರತ ಹೋರಾಡುತ್ತಿದೆ. ಇತ್ತೀಚೆಗೆ ಮೋದಿ ಅಮೆರಿಕಕ್ಕೆ ಭೇಟಿ ನೀಡಿದಾಗ ಟ್ರಂಪ್ ಮೋದಿ ಎದುರಲ್ಲೇ ಭಾರತಕ್ಕೆ ರಾಣಾನನ್ನ ಹಸ್ತಾಂತರಿಸುವುದಾಗಿ ಘೋಷಣೆ ಮಾಡಿದ್ದರು. ಇದೀಗ ಅಮೆರಿಕಾ ಸುಪ್ರೀಂಕೋರ್ಟ್ ರಾಣಾ ಮೇಲ್ಮನವಿಯನ್ನು ತಿರಸ್ಕರಿಸಿರುವುದು, ರಾಣಾನನ್ನು ಭಾರತಕ್ಕೆ ಮರಳಿ ಕರೆತರುವ ದಾರಿ ಮತ್ತಷ್ಟು ಸುಗಮವಾಗುವಂತೆ ಮಾಡಿದೆ. ಮುಂಬೈ ದಾಳಿ ಬಳಿಕ ಪಾಕ್‌ನಿಂದ ಫಲಾಯನ ಮಾಡಿದ್ದ ರಾಣಾ, ಡೆನ್ಮಾರ್ಕ್‌ನಲ್ಲಿ ಭಯೋತ್ಪಾದಕ ದಾಳಿಗೆ ಸಂಚು ರೂಪಿಸಿದ್ದಕ್ಕಾಗಿ ಆತನನ್ನ ಅಮೆರಿಕದಲ್ಲಿ ಬಂಧಿಸಲಾಗಿತ್ತು. 2008ರ ನವೆಂಬರ್ 26 ರಂದು ಪಾಕಿಸ್ತಾನದಿಂದ ಸಮುದ್ರ ಮಾರ್ಗದ ಮೂಲಕ ಭಾರತದ ಆರ್ಥಿಕ ರಾಜಧಾನಿ ಮುಂಬೈಗೆ 10 ಲಷ್ಕರ್-ಎ-ತೈಬಾ ಭಯೋತ್ಪಾದಕರು ಪ್ರವೇಶಿಸಿದ್ದರು. 60 ಗಂಟೆಗಳಿಗೂ ಹೆಚ್ಚು ಕಾಲ ಮುತ್ತಿಗೆ ಹಾಕಿ, ಭಯೋತ್ಪಾದಕರು ಸರಣಿ ಗುಂಡಿನ ದಾಳಿ ಮತ್ತು ಬಾಂಬ್ ಸ್ಫೋಟಗಳನ್ನ ನಡೆಸಿ 166 ಜನರನ್ನು ಹತ್ಯೆಗೈದಿದ್ದರು. 300ಕ್ಕೂ ಹೆಚ್ಚು ಜನರನ್ನ ಗಾಯಗೊಳಿಸಿದ್ದರು. ಛತ್ರಪತಿ ಶಿವಾಜಿ ಟರ್ಮಿನಸ್ ರೈಲು ನಿಲ್ದಾಣ, ಕಾಮಾ ಆಸ್ಪತ್ರೆ, ನಾರಿಮನ್ ಹೌಸ್ ವ್ಯಾಪಾರ ಮತ್ತು ವಸತಿ ಸಂಕೀರ್ಣ, ಲಿಯೋಪೋಲ್ಡ್ ಕೆಫೆ, ತಾಜ್ ಹೋಟೆಲ್ ಮತ್ತು ಒಬೆರಾಯ್ ಟ್ರೈಡೆಂಟ್ ಹೋಟೆಲ್‌ಗಳಲ್ಲಿ ದಾಳಿ ನಡೆಸಲಾಗಿತ್ತು. ಈ ದಾಳಿಯಲ್ಲಿ ರಾಣಾ ಪಾತ್ರವಿದೆ ಎಂದು ಭಾರತ ಆರೋಪಿಸಿತ್ತು.

# ಅಹಮದಾಬಾದ್‌ನಲ್ಲಿ ಎಐಸಿಸಿ ಅಧಿವೇಶನ ಆರಂಭ

**ಅಹಮದಾಬಾದ್:** ಇಂದಿನಿಂದ ಎರಡು ದಿನಗಳ ಕಾಲ ಗುಜರಾತ್‌ನ ಅಹಮದಾಬಾದ್‌ನಲ್ಲಿ ಎಐಸಿಸಿ ಮಹತ್ವದ ಸಭೆ ನಡೆಯುತ್ತಿದೆ. ಸಭೆಯಲ್ಲಿ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ಗಾಂಧಿ ಸೇರಿದಂತೆ ಸುಮಾರು 169 ನಾಯಕರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

ಪಕ್ಷದ ಸಂಘಟನೆಯಲ್ಲಿ ಅಗತ್ಯ ಬದಲಾವಣೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು. ಜಿಲ್ಲಾಧ್ಯಕ್ಷರಿಗೆ ಹೆಚ್ಚಿನ ಅಧಿಕಾರ ನೀಡುವ ಮತ್ತು ಚುನಾವಣೆಯಲ್ಲಿ ಟಿಕೆಟ್ ಹಂಚಿಕೆಯಲ್ಲಿ ಅವರ ಪಾತ್ರವನ್ನು ನಿರ್ಧರಿಸುವ ಬಗ್ಗೆ ಚರ್ಚೆ ನಡೆಸಲಾಯಿತು.

ಪ್ರಧಾನಿ ನರೇಂದ್ರ ಮೋದಿಯವರ ತವರು ರಾಜ್ಯ ಗುಜರಾತ್ ನಲ್ಲಿ ಕಾಂಗ್ರೆಸ್‌ಅನ್ನು ಬಲಪಡಿಸುವ, ಅಧಿಕಾರಕ್ಕೆ ತರುವ ಯೋಜನೆಯನ್ನು ಸಹ ಪರಿಗಣಿಸಲಾಗುವುದು. ಸಭೆಯ ನಂತರ, ಎಲ್ಲಾ ನಾಯಕರು ಸಂಜೆ ಸಬರಮತಿ ಆಶ್ರಮಕ್ಕೆ ಹೋಗಲಿದ್ದಾರೆ. ಏ. 9 ರಂದು ಸಬರಮತಿ ನದಿಯ ದಡದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಲಿದೆ. ಇದರಲ್ಲಿ ಸುಮಾರು 2,500 ನಾಯಕರು, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರು ಭಾಗವಹಿಸಲಿದ್ದಾರೆ. ಈ ಅಧಿವೇಶನದಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಿಷಯಗಳ ಕುರಿತು ನಿರ್ಣಯಗಳನ್ನು ಅಂಗೀಕರಿಸಲಾಗುತ್ತದೆ.

ಅವರನ್ನು ಒಂದು ಪ್ರಮುಖ ರಾಜ್ಯದ ಉಸ್ತುವಾರಿಯನ್ನಾಗಿ ಮಾಡಬಹುದು ಅಥವಾ ಕೆಲವು ಪ್ರಮುಖ ಚುನಾವಣಾ ಜವಾಬ್ದಾರಿಯನ್ನು ನೀಡಬಹುದು ಎಂದು ಪಕ್ಷದ ಮೂಲಗಳು ತಿಳಿಸಿವೆ.ಪ್ರಿಯಾಂಕಾ ಗಾಂಧಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ.



ಆದರೆ ಅವರಿಗೆ ಯಾವುದೇ ನಿರ್ದಿಷ್ಟ ಇಲಾಖೆ ಅಥವಾ ಜವಾಬ್ದಾರಿ ಇಲ್ಲ. ಈ ಕಾರಣಕ್ಕಾಗಿ, ಅನೇಕ ರಾಜ್ಯ ಘಟಕಗಳು ಮತ್ತು ಪಕ್ಷದ ಹಿರಿಯ ನಾಯಕರು ಅವರ ರಾಜಕೀಯ ಅನುಭವ ಮತ್ತು ಸಾರ್ವಜನಿಕರೊಂದಿಗೆ ಸಂಪರ್ಕ ಸಾಧಿಸುವ ಸಾಮರ್ಥ್ಯವನ್ನು ಉತ್ತಮವಾಗಿ ಬಳಸಿಕೊಳ್ಳಬೇಕೆಂದು ಸೂಚಿಸಿದ್ದಾರೆ. ಪ್ರಿಯಾಂಕಾ ಗಾಂಧಿ ಈ ಹಿಂದೆ ಉತ್ತರ ಪ್ರದೇಶ ಮತ್ತು ಹಿಮಾಚಲ ಪ್ರದೇಶದ ಚುನಾವಣೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂಬುದು ಗಮನಿಸಬೇಕಾದ ಸಂಗತಿ.

**ಕೆಲವು ದೊಡ್ಡ ರಾಜ್ಯಗಳಲ್ಲಿ ಚುನಾವಣೆಗಳು ಸಮೀಪಿಸುತ್ತಿರುವಾಗ, ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ದೊಡ್ಡ ಜವಾಬ್ದಾರಿಯನ್ನು ಹೇಗೆ ನೀಡಬಹುದೇ ಎಂಬುದರ ಕುರಿತು ಪಕ್ಷವು ಗಮನಹರಿಸುತ್ತಿದೆ ಎಂದು ಹಿರಿಯ ಕಾಂಗ್ರೆಸ್ ನಾಯಕರೊಬ್ಬರು ಹೇಳಿದ್ದಾರೆ.**

ಅಮೆರಿಕಕ್ಕೆ ಸಂಬಂಧಿಸಿದ ಸುಂಕದ ವಿಷಯವನ್ನೂ ಸಭೆಯಲ್ಲಿ ಚರ್ಚಿಸಲಾಗುವುದು, ಇದರ ಬಗ್ಗೆ ಕಾಂಗ್ರೆಸ್ ಈಗಾಗಲೇ ಸರ್ಕಾರವನ್ನು ಟೀಕಿಸುತ್ತಿದೆ. ಸರ್ಕಾರದ ಸುಂಕ ನೀತಿಯಿಂದಾಗಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆದಾರರು ಸುಮಾರು 19 ಲಕ್ಷ ಕೋಟಿ ರೂ. ನಷ್ಟ ಅನುಭವಿಸಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ, ಗ್ಯಾಸ್ ಸಿಲಿಂಡರ್‌ಗಳ ಬೆಲೆಯನ್ನು ಹೆಚ್ಚಿಸುವ ಮೂಲಕ ಸರ್ಕಾರವು ಸಾಮಾನ್ಯ ಜನರ ಮೇಲೆ ಹೆಚ್ಚಿನ ಹೊರೆ ಹಾಕುತ್ತಿದೆ ಎಂದು ಅವರು ಆರೋಪಿಸಿದರು.

ಮೋದಿಯವರು ಸುಂಕಕ್ಕೆ ಸೂಕ್ತ ಉತ್ತರ ನೀಡಿದ್ದಾರೆ. ಅವರು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಮತ್ತು ಗ್ಯಾಸ್ ಸಿಲಿಂಡರ್‌ಗಳ ಬೆಲೆಯನ್ನು ಹೆಚ್ಚಿಸಿದ್ದಾರೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ

# ಹಿಂದ್ ಸೇನಾ ಎಂಬ ರಾಜಕೀಯ ಪಕ್ಷ ಘೋಷಣೆ



**ಪಾಟ್ನಾ:** ಈ ವರ್ಷದ ಅಕ್ಟೋಬರ್-ನವೆಂಬರ್‌ನಲ್ಲಿ ನಡೆಯಲಿರುವ ಬಿಹಾರ ವಿಧಾನಸಭಾ ಚುನಾವಣೆಗೂ ಮುನ್ನ ಮಾಜಿ ಐಪಿಎಸ್ ಅಧಿಕಾರಿ ಶಿವದೀಪ್ ವಾಮನ್‌ರಾವ್ ಲಾಂಡೆ ಅವರು ಮಂಗಳವಾರ 'ಹಿಂದ್ ಸೇನಾ' ಎಂಬ ಹೊಸ ರಾಜಕೀಯ ಪಕ್ಷ ಘೋಷಿಸಿದ್ದಾರೆ. ಬಿಹಾರ ಕೇಡರ್‌ನ 2006 ಬ್ಯಾಚ್ ಐಪಿಎಸ್ ಅಧಿಕಾರಿ ಲಾಂಡೆ, ತಮ್ಮ ಪಕ್ಷವು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ ಎಂದು ಹೇಳಿದ್ದಾರೆ. ಆದರೆ ಹೊಸದಾಗಿ ಹುಟ್ಟುಹಾಕಿದ ತಮ್ಮ ರಾಜಕೀಯ ಪಕ್ಷವು ಚುನಾವಣೆಯಲ್ಲಿ ಎಷ್ಟು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ ಎಂಬುದನ್ನು ಮಾತ್ರ ಬಹಿರಂಗಪಡಿಸಿಲ್ಲ.

ಹಿಂದ್ ಸೇನಾ ರಾಷ್ಟ್ರೀಯತೆ, ಸಾಮಾಜಿಕ ಸೇವೆ ಮತ್ತು ಭಕ್ತಿಯ ತತ್ವದ ಮೇಲೆ ಕಾರ್ಯನಿರ್ವಹಿಸುತ್ತದೆ ಎಂದು ಅವರು ಹೇಳಿದ್ದಾರೆ. ನಮ್ಮ ಪಕ್ಷವು 'ಜನತಾ ಕಿ ಆವಾಜ್' ಆಗಲು ಪ್ರಯತ್ನಿಸುತ್ತದೆ ಎಂದು ಲ್ಯಾಂಡೆ ಅವರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಸೆಪ್ಟೆಂಬರ್ 22, 2024 ರಂದು ಪೂರ್ಣಿಯಾದಲ್ಲಿ ಐಜಿಯಾಗಿ ನೇಮಕಗೊಂಡಾಗ ಲ್ಯಾಂಡೆ ತಮ್ಮ ಸೇವೆಗೆ ರಾಜೀನಾಮೆ ನೀಡಿದ್ದರು ಮತ್ತು ಬಿಹಾರದಲ್ಲಿಯೇ ಉಳಿದು ಇಲ್ಲಿನ ಜನರಿಗೆ ಸೇವೆ ಸಲ್ಲಿಸುವುದನ್ನು ಮುಂದುವರಿಸುವುದಾಗಿಯೂ ತಿಳಿಸಿದ್ದರು. ಅಂದಿನಿಂದ, ಮಹಾರಾಷ್ಟ್ರದಲ್ಲಿ ಜನಿಸಿದ ಈ ಐಪಿಎಸ್ ಅಧಿಕಾರಿ, ಬಿಹಾರದಲ್ಲಿ ಶೀಘ್ರದಲ್ಲೇ ರಾಜಕೀಯ ಪ್ರವೇಶಿಸುತ್ತಾರೆಯೇ ಎಂಬ ಊಹಾಪೋಹಗಳಿದ್ದವು. ಮಂಗಳವಾರ ಹೊಸ ರಾಜಕೀಯ ಪಕ್ಷ ಘೋಷಿಸುವ ಮೂಲಕ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ. ನೇರ ಮತ್ತು ಪ್ರಾಮಾಣಿಕ ಪೊಲೀಸ್ ಅಧಿಕಾರಿ ಎಂದು ಕರೆಯಲ್ಪಡುವ ಲಾಂಡೆ, ಪಾಟ್ನಾದಲ್ಲಿ ನಗರ ಎಸ್‌ಪಿಯಾಗಿ ಸೇವೆ ಸಲ್ಲಿಸುತ್ತಿರುವಾಗ ಹೆಚ್ಚು ಖ್ಯಾತಿ ಗಳಿಸಿದ್ದರು.

# ಬಾಲಕಿ ಮೇಲೆ ಅತ್ಯಾಚಾರವೆಸಗಿ ಕೊಂದು ಕಾರಿನಲ್ಲಿ ಶವವಿಟ್ಟ ಸಂಬಂಧಿ

**ಛತ್ತೀಸ್‌ಗಡ:** ವ್ಯಕ್ತಿಯೊಬ್ಬ ಆರು ವರ್ಷದ ಬಾಲಕಿ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿ, ಪಕ್ಕದ ಮನೆಯ ಕಾರಿನಲ್ಲಿ ಶವವಿಟ್ಟಿರುವ ಘಟನೆ ಛತ್ತೀಸ್‌ಗಢದ ದುರ್ಗ್‌ನಲ್ಲಿ ನಡೆದಿದೆ. ಮೃತ ಬಾಲಕಿಯ ಸಂಬಂಧಿಯೇ ಅತ್ಯಾಚಾರವೆಸಗಿದ್ದಾನೆ ಎನ್ನುವ ಮಾಹಿತಿ ಲಭ್ಯವಾಗಿದೆ. ಅತ್ಯಾಚಾರ ಮಾಡಿ ಕೊಲೆ ಮಾಡಿ, ಶವವನ್ನು ಕಾರಿನಲ್ಲಿ ಬಚ್ಚಿಟ್ಟು ಬೀಗ ಹಾಕಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ನವರಾತ್ರಿ ಹಬ್ಬದ ಭಾಗವಾಗಿ ಆಯೋಜಿಸಲಾಗಿದ್ದ ಆಚರಣೆಯ ನಂತರ ಅಪ್ರಾಪ್ತ ಬಾಲಕಿ ನಾಪತ್ತೆಯಾಗಿದ್ದಳು. ಕನ್ಯಾ ಭೋಜನದಲ್ಲಿ ಭಾಗವಹಿಸಲು ಮಗು ತನ್ನ ಅಜ್ಜಿಯ ಮನೆಗೆ ಭೇಟಿ ನೀಡಿತ್ತು, ಆದರೆ ಮನೆಗೆ ಹಿಂತಿರುಗಲಿಲ್ಲ. ಆಕೆಯ ಕುಟುಂಬವು ಪೊಲೀಸರಿಗೆ ನಾಪತ್ತೆ ದೂರು ನೀಡುವ ಮೊದಲು ತೀವ್ರ ಹುಡುಕಾಟವನ್ನು ಪ್ರಾರಂಭಿಸಿತ್ತು ಎಂದು ದುರ್ಗ್ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಖನಂದನ್ ರಾಥೋಡ್ ಮಾಹಿತಿ ನೀಡಿದ್ದಾರೆ.



ಬಾಲಕಿಯ ಅಜ್ಜಿ ಮತ್ತು ಇನ್ನೊಬ್ಬ ಸಂಬಂಧಿ ದೇವಸ್ಥಾನಕ್ಕೆ ಹೋಗಿದ್ದರು, ಆರೋಪಿ ಸೋಮೇಶ್ ಯಾದವ್, ಮನೆಯಲ್ಲಿ ಇದ್ದ, ಎಂದು ಅವರು ಹೇಳಿದರು. ಯಾದವ್ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಕೊಂದು, ನಂತರ ಆಕೆಯ ಶವವನ್ನು ಪಕ್ಕದ ಮನೆಯವರ ಕಾರಿನೊಳಗೆ ಇಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರನ್ನು ನಿತ್ಯ ಅಲ್ಲಿಯೇ ನಿಲ್ಲಿಸಲಾಗುತ್ತಿತ್ತು ಮತ್ತು ಅದರ ಒಂದು ಬಾಗಿಲು ಅನ್‌ಲಾಕ್ ಆಗಿರುವುದು ಆರೋಪಿಗೆ ತಿಳಿದಿತ್ತು ಎಂದು ಅಧಿಕಾರಿ ಹೇಳಿದರು. ಘಟನೆಗೆ ಸಂಬಂಧಿಸಿದಂತೆ ವಿಚಾರಣೆಗಾಗಿ ಪೊಲೀಸರು ವಶಕ್ಕೆ ಪಡೆದ ಮೂವರು ಶಂಕಿತರಲ್ಲಿ ಆರೋಪಿಯೂ ಒಬ್ಬ ಎಂದು ಎಎಸ್ಪಿ ತಿಳಿಸಿದ್ದಾರೆ.

ಕಾರು ಮಾಲೀಕರು ಸೇರಿದಂತೆ ಮೂವರು ಶಂಕಿತರಲ್ಲಿ ಇಬ್ಬರನ್ನು ವಿಚಾರಣೆಯ ನಂತರ ಬಿಡುಗಡೆ ಮಾಡಲಾಗಿದೆ. ರಾತ್ರಿ ವೇಳೆ ಕಾರಿನಲ್ಲಿ ಶವವಿರುವುದು ಬೆಳಕಿಗೆ ಬಂದಿತ್ತು, ಹುಡುಗಿಯ ದೇಹದಲ್ಲಿ ಗಾಯದ ಗುರುತುಗಳಿದ್ದವು ಮತ್ತು ವೈದ್ಯಕೀಯ ವರದಿಯು ಲೈಂಗಿಕ ದೌರ್ಜನ್ಯವನ್ನು ದೃಢಪಡಿಸಿದೆ ಎಂದು ರಾಥೋಡ್ ಹೇಳಿದರು.

ತನಿಖೆಯ ಸಮಯದಲ್ಲಿ ಸಂಬಂಧಿಯೇ ಅಪರಾಧದಲ್ಲಿ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ ಮತ್ತು ಅವರನ್ನು ಬಂಧಿಸಲಾಯಿತು ಎಂದು ರಾಥೋಡ್ ಹೇಳಿದರು.


ಆರೋಪಿ ಅಪರಾಧವನ್ನು ಒಪ್ಪಿಕೊಂಡಿದ್ದಾನೆ ಎಂದು ಅವರು ಹೇಳಿದರು.

# ಅಲ್ಲಾಹ್‌ನ ಆದೇಶಕ್ಕಾಗಿ ಕಾಯುತ್ತಿದ್ದೇನೆ ಎಂದ ಬಾಂಗ್ಲಾ ಮಾಜಿ ಪ್ರಧಾನಿ

## ಅಲ್ಲಾಹ್ ನನ್ನನ್ನು ಇದೊಂದು ಕಾರಣಕ್ಕೆ ಜೀವಂತವಾಗಿರಿಸಿದ್ದಾನೆ; 'ಐ ಆ್ಯಮ್ ಕಮಿಂಗ್ ಬಾಂಗ್ಲಾದೇಶ್' ಎಂದ ಶೇಖ್ ಹಸೀನಾ



**ಹೊಸದಿಲ್ಲಿ:** ಭಾರತದಲ್ಲಿ ಆಶ್ರಯ ಪಡೆದಿರುವ ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಇತ್ತೀಚೆಗೆ ಆನ್‌ಲೈನ್ ಸಂವಾದದಲ್ಲಿ ಭಾಗವಹಿಸಿದ್ದು, ಅಲ್ಲಾ ನನ್ನನ್ನು ಬದುಕಿಸಿದ್ದಾನೆ ಅಂದರೆ ಅದಕ್ಕೊಂದು ಕಾರಣ ಇರಬೇಕು, ನಾನು ಶೀಘ್ರದಲ್ಲೇ ಬಾಂಗ್ಲಾದೇಶಕ್ಕೆ ಮರಳುತ್ತೇನೆ ಎಂದು ಹೇಳಿದ್ದಾರೆ.



ಬಾಂಗ್ಲಾದೇಶದಲ್ಲಿ ಅವಾಮಿ ಲೀಗ್ ಕಾರ್ಯಕರ್ತರನ್ನು ಗುರಿಯಾಗಿಸಿಕೊಂಡವರನ್ನು ಶಿಕ್ಷಿಸುವ ದಿನ ಬರುತ್ತದೆ ಎಂದು ಹೇಳುವ ಮೂಲಕ, ಶೇಖ್ ಹಸೀನಾ ಅವರು ಮುಹಮ್ಮದ್ ಯೂನಸ್ ನೇತೃತ್ವದ ಬಾಂಗ್ಲಾದೇಶ ಮಧ್ಯಂತರ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

**ಕಾನೂನಿನಡಿ ಶಿಕ್ಷೆ ಅನುಭವಿಸಲೇ ಬೇಕು**

ಮುಹಮ್ಮದ್ ಯೂನಸ್ ಅವರು ಜನರನ್ನು ಪ್ರೀತಿಸದ ವ್ಯಕ್ತಿ, ಸಣ್ಣ ಮೊತ್ತದ ಸಾಲವನ್ನು ಹೆಚ್ಚಿನ ಬಡ್ಡಿಗೆ ನೀಡಿ, ಆ ಹಣದಿಂದ ವಿದೇಶದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ ವ್ಯಕ್ತಿಯಿಂದ ನಾವು ಬಾಂಗ್ಲಾದೇಶಕ್ಕೆ ಒಳಿತನ್ನು ಬಯಸುವುದು ಮೂರ್ಖತನ.

ನಾವೂ ಕೂಡ ಅವರ ದುಷ್ಟತನವನ್ನು ಅರ್ಥ ಮಾಡಿಕೊಳ್ಳದೇ ಅವರಿಗೆ ತುಂಬ ಸಹಾಯ ಮಾಡಿದೆವು. ಆದರೆ ಇದರಿಂದ ಬಾಂಗ್ಲಾದೇಶದ ಜನರಿಗೆ ಯಾವುದೇ ಲಾಭವಾಗಲಿಲ್ಲ. ಮುಹಮ್ಮದ್ ಯೂನಸ್ ಅಧಿಕಾರದ ದಾಹದಿಂದ ಬಾಂಗ್ಲಾದೇಶವನ್ನು ಸುಡುತ್ತಿದ್ದಾರೆ ಎಂದು ಶೇಖ್ ಹಸೀನಾ ತೀವ್ರ ವಾಗ್ದಾಳಿನಡೆಸಿದ್ದಾರೆ. ಬಾಂಗ್ಲಾದೇಶ ಅಭಿವೃದ್ಧಿಯ ಮಾದರಿಯಾಗಿತ್ತು. ಆದರೆ ಈಗ ಅದು ಭಯೋತ್ಪಾದಕ ದೇಶವಾಗಿ ಮಾರ್ಪಟ್ಟಿದೆ. ನಮ್ಮ ಪಕ್ಷದ ನಾಯಕರು, ಕಾರ್ಯಕರ್ತ ರನ್ನು ವಿವರಿಸಲು ಸಾಧ್ಯವಾಗದ ರೀತಿಯಲ್ಲಿ ಅಮಾ ನವೀಯವಾಗಿ ಕೊಲ್ಲಲಾಗುತ್ತಿದೆ.

**ಅಲ್ಲಾಹ್ ನನ್ನನ್ನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಇದುವರೆಗೂ ಜೀವಂತವಾಗಿರಿಸಿದ್ದಾನೆ. ನನಗೆ ಆ ಉದ್ದೇಶ ಏನೆಂದು ಸ್ಪಷ್ಟವಾಗಿ ಅರ್ಥವಾಗಿದೆ. ನಾನು ಶೀಘ್ರದಲ್ಲೇ ಬಾಂಗ್ಲಾದೇಶಕ್ಕೆ ಮರಳುತ್ತೇನೆ. ಬಾಂಗ್ಲಾದೇಶದ ಜನರನ್ನು ಮಾನವ ಸ್ವರೂಪಿ ರಾಕ್ಷಸರಿಂದ ಮುಕ್ತಗೊಳಿಸುತ್ತೇನೆ**

**-ಶೇಖ್ ಹಸೀನಾ**

ಅವಾಮಿ ಲೀಗ್, ಪೊಲೀಸರು, ವಕೀಲರು, ಪತ್ರಕರ್ತರು, ಕಲಾವಿದರು ಎಲ್ಲರನ್ನೂ ಗುರಿಯಾಗಿಸಲಾಗುತ್ತಿದೆ ಎಂದು ಬಾಂಗ್ಲಾದೇಶದ ಮಾಜಿ ಪ್ರಧಾನಿ ಗಂಭೀರ ಆರೋಪ ಮಾಡಿದ್ದಾರೆ. ಬಾಂಗ್ಲಾದೇಶದಲ್ಲಿ ಮಾಧ್ಯಮ ಗಳ ಮೇಲೆ ನಿರ್ಬಂಧ ಹೇರಲಾಗಿದೆ. ಅತ್ಯಾಚಾರ, ಕೊಲೆ, ದರೋಡೆ ಯಾವುದನ್ನೂ ವರದಿ ಮಾಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದೆ.

ಒಂದು ವೇಳೆ ವರದಿ ಮಾಡಿದರೆ, ಆ ಟಿವಿ ಚಾನೆಲ್, ಪತ್ರಿಕೆಯನ್ನು ಕೂಡ ಹಿಂಸಾತ್ಮಕವಾಗಿ ಗುರಿಯಾಗಿಸಲಾಗುತ್ತದೆ ಎಂದು ಶೇಖ್ ಹಸೀನಾ ಕಿಡಿಕಾರಿದರು. ಶೇಖ್ ಹಸೀನಾ ಅವರ ಹೇಳಿಕೆಗಳು ಬಾಂಗ್ಲಾದೇಶದಲ್ಲಿ ಸಂಚಲನ ಮೂಡಿಸಿವೆ.

ಆವಾಮಿ ಲೀಗ್ ಬೆಂಬಲಿಗರು ಶೇಖ್ ಹಸೀನಾ ಅವರ ಹೇಳಿಕೆಗಳನ್ನು ಸ್ವಾಗತಿಸಿದ್ದು, ಬಾಂಗ್ಲಾದೇಶದ ಜನರ ವಿಮೋಚನೆಗಾಗಿ ಶೇಖ್ ಹಸೀನಾ ಸ್ವದೇಶಕ್ಕೆ ಮರಳಬೇಕು ಎಂದು ಆಗ್ರಹಿಸಿದ್ದಾರೆ.

ಆದರೆ ಶೇಖ್ ಹಸೀನಾ ಅವರ ಹೇಳಿಕೆಯನ್ನು ಟೀಕಿಸಿರುವ ಅವರ ರಾಜಕೀಯ ವಿರೋಧಿಗಳು, ಶೇಖ್ ಹಸೀನಾ ಅವರ ಕಪಿಮುಷ್ಠಿಯಿಂದ ಬಾಂಗ್ಲಾದೇಶದ ಜನರನ್ನು ಪಾರು ಮಾಡಿದ್ದೇ, ಮುಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರ ಎಂದು ಹರಿಹಾಯ್ದಿದ್ದಾರೆ.

ಶೇಖ್ ಹಸೀನಾ ಪದೇ ಪದೇ ಬಾಂಗ್ಲಾದೇಶಕ್ಕೆ ಮರಳುವುದಾಗಿ ಹೇಳಿಕೆ ನೀಡುತ್ತಿದ್ದಾರೆ. ನಾವೂ ಕೂಡ ಅವರ ಮರಳುವಿಕೆಗಾಗಿ ಕಾಯುತ್ತಿದ್ದೇವೆ. ಶೇಖ್ ಹಸೀನಾ ತಮ್ಮ ಅಪರಾಧಗಳಿಗಾಗಿ ಬಾಂಗ್ಲಾದೇಶದ ಕಾನೂನಿನಡಿ ಶಿಕ್ಷೆ ಅನುಭವಿಸಲೇಬೇಕು ಎಂದು ಯೂನಸ್ ಆಡಳಿತ ಗುಡುಗಿದೆ.

**ಶೀಘ್ರದಲ್ಲೇ ಬಾಂಗ್ಲಾದೇಶಕ್ಕೆ ಮರಳುತ್ತೇನೆ**

**ಭಾರತದಲ್ಲಿ ಆಶ್ರಯ ಪಡೆದಿರುವ ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ, ಅಲ್ಲಾ ನನ್ನನ್ನು ಬದುಕಿಸಿದ್ದಾನೆ ಅಂದರೆ ಅದಕ್ಕೊಂದು ಕಾರಣ ಇರಬೇಕು, ನಾನು ಶೀಘ್ರದಲ್ಲೇ ಬಾಂಗ್ಲಾದೇಶಕ್ಕೆ ಮರಳುತ್ತೇನೆ ಶೇಖ್ ಹಸೀನಾ ಅವರ ಈ ಹೇಳಿಕೆ ಬಾಂಗ್ಲಾದೇಶದಲ್ಲಿ ಸಂಚಲನ ಸೃಷ್ಟಿಸಿದ್ದು, ಅವರ ಹೇಳಿಕೆಯನ್ನು ಬೆಂಬಲಿಗರು ಸ್ವಾಗತಿಸಿದ್ದರೆ, ವಿರೋಧಿಗಳು ಕಟುವಾಗಿ ಟೀಕಿಸಿದ್ದಾರೆ. ಬಾಂಗ್ಲಾದೇಶದಲ್ಲಿ ತಮ್ಮ ಸರ್ಕಾರ ಪತನಗೊಂಡ ಬಳಿಕ, ಶೇಖ್ ಹಸೀನಾ ಅವರು ಭಾರತದಲ್ಲಿ ರಾಜತಾಂತ್ರಿಕ ಆಶ್ರಯ ಪಡೆದುಕೊಂಡಿದ್ದಾರೆ.**



# ಅಮೆರಿಕದಲ್ಲಿ ಕೆಲಸ ತೊರೆದು ಚಿತ್ರರಂಗಕ್ಕೆ ಪಾದಾರ್ಪಣೆ

## ರಿಯಾಲಿಟಿ ಶೋ ಮೂಲಕ ಜನಪ್ರಿಯ

ಅಮೆರಿಕದಲ್ಲಿ ಲಕ್ಷಾಂತರ ರೂಪಾಯಿ ಸಂಬಳ ನೀಡುವ ಕೆಲಸವನ್ನು ಅವರು ತೊರೆದು ಈಗ ಸಿನಿಮಾಗಳಲ್ಲಿ ಸದ್ದು ಮಾಡುತ್ತಿದ್ದಾರೆ. ಈ ಸುಂದರಿ ಒಂದು ಅಥವಾ ಎರಡು ಚಿತ್ರಗಳಲ್ಲಿ ಸಣ್ಣ ಪಾತ್ರಗಳನ್ನು ನಿರ್ವಹಿಸಿ ನಂತರ ಬಿಗ್ ಬಾಸ್ ರಿಯಾಲಿಟಿ ಶೋ ಮೂಲಕ ಜನಪ್ರಿಯರಾದರು. ಈಗ ತೆಲುಗಿನ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಟಿಕ್‌ಟಾಕ್ ವಿಡಿಯೋಗಳನ್ನು ಮಾಡುವ ಮೂಲಕ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಿದ್ಧರಾದ ಅನೇಕ ಹುಡುಗಿಯರು ಇದ್ದಾರೆ. ಈ ರೀತಿ ಜನಪ್ರಿಯರಾಗಿ ಈಗ ಸಿನಿಮಾ ಹಾಗೂ ವೆಬ್ ಸೀರಿಸ್‌ಗಳಲ್ಲಿ ಸರಣಿ ಆಫರ್‌ಗಳನ್ನು ಪಡೆಯುತ್ತಿದ್ದಾರೆ. ಅಮೆರಿಕದಲ್ಲಿ ಲಕ್ಷಾಂತರ ರೂಪಾಯಿ ಸಂಬಳ ನೀಡುವ ಕೆಲಸವನ್ನು ಅವರು ತೊರೆದು ಈಗ ಸಿನಿಮಾಗಳಲ್ಲಿ ಸದ್ದು ಮಾಡುತ್ತಿದ್ದಾರೆ. ಈ ಸುಂದರಿ ಒಂದು ಅಥವಾ ಎರಡು ಚಿತ್ರಗಳಲ್ಲಿ ಸಣ್ಣ ಪಾತ್ರಗಳನ್ನು ನಿರ್ವಹಿಸಿ ನಂತರ ಬಿಗ್ ಬಾಸ್ ರಿಯಾಲಿಟಿ ಶೋ ಮೂಲಕ ಜನಪ್ರಿಯರಾದರು. ಅವರೇ ಆಶು ರೆಡ್ಡಿ. ಅಮೆರಿಕದಲ್ಲಿ ವಾಸಿಸುತ್ತಿದ್ದಾಗ ಟಿಕ್‌ಟಾಕ್ ವಿಡಿಯೋಗಳನ್ನು ಮಾಡುತ್ತಿದ್ದರು. ನಂತರ ಬಿಗ್ ಬಾಸ್ ಕಾರ್ಯಕ್ರಮದಲ್ಲಿ ಅವಕಾಶ ಸಿಕ್ಕ ನಂತರ ಭಾರತಕ್ಕೆ ಬಂದರು.

ಇದಕ್ಕೂ ಮುನ್ನ ಅವರು ತೆಲುಗಿನಲ್ಲಿ ಒಂದು ಸಿನಿಮಾ ಮಾಡಿದ್ದಾರೆ. ವಿಶಾಖಪಟ್ಟಣಂನ ಆಶು ರೆಡ್ಡಿ, ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಎಂಬಿಎ ಮುಗಿಸಿದ್ದಾರೆ. ಅವರು ಅಮೆರಿಕದಲ್ಲಿ ಕೆಲವು ವರ್ಷಗಳ ಕಾಲ ಲಕ್ಷ ರೂಪಾಯಿ ಸಂಬಳಕ್ಕೆ ಕೆಲಸ ಮಾಡಿದರು. ಕೆಲಸದಲ್ಲಿರುವಾಗಲೇ ಟಿಕ್‌ಟಾಕ್ ವಿಡಿಯೋಗಳನ್ನು ಮಾಡುವ ಮೂಲಕ ಅವಳು ಪ್ರಸಿದ್ಧರಾದರು.



# ಮುಜುಗರ ಆಗುವ ದೃಶ್ಯ ಇಲ್ಲ

## ಕಾಮಿಡಿ ಸಿನಿಮಾಗಳು ಯಾವತ್ತೂ ಸೋತಿಲ್ಲ

ನಟಿ ಮಲ್ಲೈಕಾ ವಸುಪಾಲ್ ಅವರು ವೃತ್ತಿಜೀವನದ ಆರಂಭದಲ್ಲಿ ಕಾಮಿಡಿ ಸಿನಿಮಾಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಮೊದಲು 'ಉಪಾಧ್ಯಕ್ಷ' ಸಿನಿಮಾದಲ್ಲಿ ನಟಿಸಿದ ಅವರು ಈಗ 'ವಿದ್ಯಾಪತಿ' ಚಿತ್ರದಲ್ಲಿ ನಟಿಸಿದ್ದಾರೆ. ಈ ಸಿನಿಮಾದಲ್ಲಿ ಅವರು ನಾಗಭೂಷಣ್ ಜೊತೆ ತೆರೆ ಹಂಚಿಕೊಂಡಿದ್ದಾರೆ. ಬ್ಯಾಕ್ ಟು ಬ್ಯಾಕ್ ಕಾಮಿಡಿ ಸಿನಿಮಾ ಆರಿಸಿಕೊಂಡಿರುವ ಅವರಿಗೆ ಈ ಪ್ರಕಾರದ ಚಿತ್ರಗಳ ಮೇಲೆ ನಂಬಿಕೆ ಇದೆ. ಉತ್ತಮವಾದ ಕಾಮಿಡಿ ಸಿನಿಮಾಗಳು ಎಂದಿಗೂ ಸೋತಿಲ್ಲ ಎಂದು ಅವರು ಹೇಳಿದ್ದಾರೆ. 'ಉಪಾಧ್ಯಕ್ಷ' ಸಿನಿಮಾ ಹಿಟ್ ಆಯಿತು. ಈಗ 'ವಿದ್ಯಾಪತಿ' ಕೂಡ ಜನರಿಗೆ ಇಷ್ಟ ಆಗಲಿದೆ ಎಂಬ ನಂಬಿಕೆ ಮಲ್ಲೈಕಾ ವಸುಪಾಲ್ ಅವರಿಗೆ ಇದೆ. 'ಜನರು ಉಪಾಧ್ಯಕ್ಷ ಚಿತ್ರವನ್ನು ಹೇಗೆ ಸ್ವೀಕರಿಸುತ್ತಾರೆ ಎಂಬುದು ರಿಲೀಸ್ ಸಮಯದಲ್ಲಿ ನಮಗೂ ಗೊತ್ತಿರಲಿಲ್ಲ. ಜನರು ತುಂಬ ಚೆನ್ನಾಗಿ ಸ್ವೀಕರಿಸಿದರು. ನನಗೆ ಅನಿಸುವ ಪ್ರಕಾರ ಕಾಮಿಡಿ ಸಿನಿಮಾಗಳು ಯಾವತ್ತೂ ಸೋತಿಲ್ಲ' ಎಂದು ಮಲ್ಲೈಕಾ ವಸುಪಾಲ್ ಹೇಳಿದ್ದಾರೆ.

'ನಮ್ಮ ವಿದ್ಯಾಪತಿ ಸಿನಿಮಾ ತುಂಬ ಕ್ಲೀನ್ ಕಾಮಿಡಿ. ಮಕ್ಕಳಿಗೆ ಇಷ್ಟ ಆಗುತ್ತದೆ. ಯಾವುದೇ ಡಬಲ್ ಮೀನಿಂಗ್ ಜೋಕ್ ಇಲ್ಲ. ಮಕ್ಕಳಿಂದ ದೊಡ್ಡವರ ತನಕ ಎಲ್ಲಾರೂ ಆರಾಮಾಗಿ ಕುಳಿತುಕೊಂಡು ನೋಡಬಹುದು. ಮುಜುಗರ ಆಗುವಂತಹ ಒಂದು ಸೀನ್ ಕೂಡ ಈ ಸಿನಿಮಾದಲ್ಲಿ ಇಲ್ಲ. ಗಂಭೀರವಾದ ವಿಚಾರವನ್ನು ಕಾಮಿಡಿ ಮೂಲಕ ಹೇಳಿದ್ರೆ, ಆ ಪ್ರಯತ್ನ ಎಂದಿಗೂ ಸೋಲುವುದಿಲ್ಲ' ಎಂದಿದ್ದಾರೆ ಮಲ್ಲೈಕಾ ವಸುಪಾಲ್. 'ವಿದ್ಯಾಪತಿ' ಸಿನಿಮಾದಲ್ಲಿ ಮಲ್ಲೈಕಾ ಅವರು ಸೂಪರ್ ಸ್ಟಾರ್ ನಟಿಯಾಗಿ ಕಾಣಿಸಿಕೊಂಡಿದ್ದಾರೆ. ಏಪ್ರಿಲ್ 10ರಂದು ಈ ಸಿನಿಮಾ ಬಿಡುಗಡೆ ಆಗಲಿದೆ. ಡಾಲಿ ಧನಂಜಯ್ ಅವರು ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಜೊತೆಗೆ ಒಂದು ಪಾತ್ರವನ್ನು ಕೂಡ ನಿಭಾಯಿಸಿದ್ದಾರೆ.



# ನಿರ್ದೇಶಕನ ಮೇಲೆ ಅಭಿಮಾನಿಗಳ ಆಕ್ರೋಶ

## ಕಾಮಿಡಿ ಅವತಾರದಲ್ಲಿ ಪ್ರಭಾಸ್

ಪ್ರಭಾಸ್ ನಟನೆಯ ಸಾಲು-ಸಾಲು ಸಿನಿಮಾಗಳು ಚಿತ್ರೀಕರಣದ ಹಂತದಲ್ಲಿವೆ. ಬಿಡುವೇ ಇರದಂತೆ ಒಂದರ ಹಿಂದೊಂದರಂತೆ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ ಪ್ರಭಾಸ್. ಅದೂ ಒಂದಕ್ಕಿಂತಲೂ ಒಂದು ಭಿನ್ನವಾದ ಕತೆಗಳಲ್ಲಿ ಪಾತ್ರಗಳಲ್ಲಿ ಪ್ರಭಾಸ್ ನಟಿಸುತ್ತಿದ್ದಾರೆ. ಪ್ರಭಾಸ್ ನಟನೆಯ 'ಕಲ್ಕಿ 2898 ಎಡಿ' ಸಿನಿಮಾ ಕಳೆದ ವರ್ಷ ಜೂನ್ ತಿಂಗಳಲ್ಲಿ ಬಿಡುಗಡೆ ಆಗಿತ್ತು. ಅಸಲಿಗೆ ಈ ವರ್ಷದ ಆರಂಭದಲ್ಲಿಯೇ ಪ್ರಭಾಸ್ ನಟನೆಯ ಹೊಸ ಸಿನಿಮಾ ತೆರೆಗೆ ಬರಬೇಕಿತ್ತು. ಆದರೆ ನಿರ್ದೇಶಕನ ಕಾರಣದಿಂದಾಗಿ ಆ ಸಿನಿಮಾ ತಡವಾಗಿದೆ ಎನ್ನಲಾಗುತ್ತಿದ್ದು, ಇದೀಗ ಪ್ರಭಾಸ್ ಅಭಿಮಾನಿಗಳು ನಿರ್ದೇಶಕನ ಮೇಲೆ ಅಸಮಾಧಾನ ಹೊರಹಾಕುತ್ತಿದ್ದಾರೆ.

ಪ್ರಭಾಸ್ 'ದಿ ರಾಜಾ ಸಾಬ್' ಹೆಸರಿನ ಹಾರರ್ ಆಕ್ಷನ್-ಕಾಮಿಡಿ ಸಿನಿಮಾದಲ್ಲಿ ನಟಿಸಿದ್ದಾರೆ. ಬಹಳ ವರ್ಷಗಳ ಬಳಿಕ ಪ್ರಭಾಸ್ ಇಂಥಹದ್ದೊಂದು ಪಾತ್ರದಲ್ಲಿ ನಟಿಸಿದ್ದಾರೆ. ಪ್ರಭಾಸ್ ಅಭಿಮಾನಿಗಳು ಸಹ ಕಾಮಿಡಿ ಅವತಾರದಲ್ಲಿ ಪ್ರಭಾಸ್ ಅನ್ನು ಕಾಣಲು ಉತ್ಸುಕರಾಗಿದ್ದರು. ಈ ಸಿನಿಮಾ ಕಳೆದ ಡಿಸೆಂಬರ್ ಅಥವಾ ಈ ವರ್ಷದ ಜನವರಿಯಲ್ಲಿ ಬಿಡುಗಡೆ ಆಗಬೇಕಿತ್ತು. ಆದರೆ ಈ ವರೆಗೂ ಬಿಡುಗಡೆ ಆಗಿಲ್ಲ. ಈಗ ಮತ್ತೆ 'ದಿ ರಾಜಾ ಸಾಬ್' ಸಿನಿಮಾದ ಬಿಡುಗಡೆ ಇನ್ನಷ್ಟು ಮುಂದೆ ಹೋಗಿದ್ದು, 'ನಮಗೆ ಇನ್ನಷ್ಟು ಸಮಯ ಕೊಡಿ' ಎಂದು ನಿರ್ದೇಶಕ ಮಾರುತಿ ಕೇಳಿರುವುದು ಪ್ರಭಾಸ್ ಅಭಿಮಾನಿಗಳ ಅಸಮಾಧಾನಕ್ಕೆ ಕಾರಣವಾಗಿದೆ.



# ಶಾರುಖ್ ಮಗಳಿಗೆ ದೀಪಿಕಾ ತಾಯಿ

ದೀಪಿಕಾ ಪಡುಕೋಣೆ ಸದ್ಯ ಬ್ರೇಕ್‌ನಲ್ಲಿದ್ದಾರೆ. ಅವರಿಗೆ ಮಗಳು ಜನಿಸಿದ್ದು, ಅದರ ಆರೈಕೆಯಲ್ಲಿ ಬ್ಯುಸಿ ಇದ್ದಾರೆ. ಈ ಮಧ್ಯೆ ದೀಪಿಕಾ ಪಡುಕೋಣೆ ಅವರು ಸುದ್ದಿಯಲ್ಲಿ ಇದ್ದಾರೆ. ಅವರು ಈಗ ಸಿನಿಮಾ ಒಂದರಲ್ಲಿ ಶಾರುಖ್ ಖಾನ್ ಮಗಳು ಸುಹಾನಾಗೆ ತಾಯಿ ಸ್ಥಾನ ತುಂಬಲಿದ್ದಾರೆ ಎಂದು ವರದಿ ಆಗಿದೆ. ಈ ವಿಚಾರ ಕೇಳಿ ಫ್ಯಾನ್ಸ್ ಫುಲ್ ಖುಷಿ ಆಗಿದ್ದಾರೆ. ಇನ್ನೂ ಕೆಲವರು ತಾಯಿ ಪಾತ್ರ ಈಗಲೇ ಬೇಡವಾಗಿತ್ತು ಎನ್ನುವ ಅಭಿಪ್ರಾಯ ಹೊರಹಾಕಿದ್ದಾರೆ. ತಾಯಿ ಪಾತ್ರಗಳನ್ನು ಮಾಡೋಕೆ ಆರಂಭಿಸಿದರೆ ಮುಂದಿನ ದಿನಗಳಲ್ಲಿ ಅದೇ ರೀತಿಯ ಪಾತ್ರಗಳು ಹುಡುಕಿಕೊಂಡು ಬರುತ್ತವೆ ಎಂಬುದು ಮೊದಲಿನಿಂದಲೂ ಇರುವ ಪ್ರತೀತಿ. ಅದು ನಿಜವಾಗಿದೆ ಕೂಡ. ಈ ಮೊದಲು ದೀಪಿಕಾ ಪಡುಕೋಣೆ ಅವರು 'ಬ್ರಹ್ಮಾಸ್ತ್ರ' ಸಿನಿಮಾದಲ್ಲಿ ತಾಯಿ ಪಾತ್ರ ಮಾಡಿದ್ದಾರೆ. ಇದು ಅತಿಥಿ ಪಾತ್ರ. 'ಜವಾನ್' ಸಿನಿಮಾದಲ್ಲೂ ಅವರಿಗೆ ತಾಯಿ ಪಾತ್ರ ಸಿಕ್ಕಿದೆ. 'ಕಲ್ಕಿ 2898 ಎಡಿ' ಚಿತ್ರದಲ್ಲೂ ದೀಪಿಕಾ ಪಡುಕೋಣೆ ಅವರು ಗರ್ಭಿಣಿ ಆಗಿ ಕಾಣಿಸಿಕೊಂಡಿದ್ದಾರೆ. ಈಗ ಅವರಿಗೆ ಇದೇ ರೀತಿಯ ಪಾತ್ರ ಬಂದಿದೆ.

# ಕೇರೆ ಹಾವು ರಕ್ಷಿಸಿದ ವಿಜಯ್



## ಈ ಹಾವು ರೈತ ಸ್ನೇಹಿ

ಹಾವು ಕಂಡರೆ ಹೊಡೆಯಲು ಮುಂದಾಗುವವರೇ ಹೆಚ್ಚು, ರಕ್ಷಿಸುವವರ ಸಂಖ್ಯೆ ತೀರ ವಿರಳ, ಅದಕ್ಕೆ ಕಾರಣ ಹಾವುಗಳ ಬಗ್ಗೆ ಇರುವ ಮಾಹಿತಿಯ ಕೊರತೆ, ತಪ್ಪು ತಿಳುವಳಿಕೆ ಮತ್ತು ಹಾವುಗಳ ಮಹತ್ವ ನಮಗೆ ತಿಳಿಯದೇ ಇರುವುದು. ನಟ ದುನಿಯಾ ವಿಜಯ್ ಮತ್ತು ಅವರ ಕೆಲವು ಗೆಳೆಯರು ಕೇರೆ ಹಾವೊಂದನ್ನು ರಕ್ಷಿಸಿದ್ದು, ಅದನ್ನು ಸುರಕ್ಷಿತ ಪ್ರದೇಶಕ್ಕೆ ಬಿಟ್ಟಿದ್ದಾರೆ. ಸುರಕ್ಷಿತ ಪ್ರದೇಶಕ್ಕೆ ಬಿಡುವ ಮುಂಚೆ ಹಾವು ಹಿಡಿದುಕೊಂಡು ಆ ಹಾವಿನ ಮಹತ್ವವನ್ನು ಹೇಳಿ ವಿಡಿಯೋ ಮಾಡಿರುವ ದುನಿಯಾ ವಿಜಯ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ದುನಿಯಾ ವಿಜಯ್ ಹಾಗೂ ಅವರ ಕೆಲವು ಗೆಳೆಯರು ಕೇರೆ ಹಾವಿನ ರಕ್ಷಣೆ ಮಾಡಿದ್ದಾರೆ. ದುನಿಯಾ ವಿಜಯ್ ಹೇಳಿರುವಂತೆ ಕೇರೆ ಹಾವು ಬಹುತೇಕ ನಿರುಪದ್ರವಿ ಹಾವು. ಅದು ಮಾತ್ರವೇ ಅಲ್ಲದೆ ಪರಿಸರ ಸಮತೋಲದಲ್ಲಿ ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತಿರುವ ಹಾವು ಈ ಕೇರೆ ಹಾವು. ವಿಶೇಷವಾಗಿ ಈ ಹಾವು ರೈತ ಸ್ನೇಹಿಯಾಗಿದ್ದು ಇಲಿ, ಹೆಗ್ಗಣಗಳನ್ನು ತಿನ್ನುತ್ತವೆ. ಕೇರೆ ಹಾವನ್ನು ಇಂಗ್ಲೀಷ್‌ನಲ್ಲಿ ರ್‍ಯಾಟ್ ಸ್ನೇಕ್ ಎಂದೇ ಕರೆಯುತ್ತಾರೆ. ಮನುಷ್ಯನಿಗೆ ಇದು ಹಾನಿ ಮಾಡುವುದಿಲ್ಲ. ಇದೊಂದು ವಿಷ ರಹಿತ ಹಾವಾಗಿದೆ.



# ತ್ರಿಕೋನ ಸರಣಿಗೆ ಟೀಂ ಇಂಡಿಯಾ ಪ್ರಕಟ

ಶ್ರೀಲಂಕಾದಲ್ಲಿ ನಡೆಯಲಿರುವ ಏಕದಿನ ತ್ರಿಕೋನ ಸರಣಿಗೆ ಭಾರತೀಯ ಮಹಿಳಾ ತಂಡವನ್ನು ಬಿಸಿಸಿಐ ಪ್ರಕಟಿಸಿದೆ. ಭಾರತ ಮತ್ತು ಶ್ರೀಲಂಕಾ ಜೊತೆಗೆ ದಕ್ಷಿಣ ಆಫ್ರಿಕಾ ತಂಡ ಕೂಡ ಈ ಸರಣಿಯಲ್ಲಿ ಭಾಗವಹಿಸಲಿದೆ. ಇದಕ್ಕಾಗಿ ಮಂಡಳಿಯು 15 ಸದಸ್ಯರ ಮಹಿಳಾ ತಂಡವನ್ನು ಘೋಷಿಸಿದೆ. ವಿಶ್ವಕಪ್‌ನ ಸಿದ್ಧತೆಗಳನ್ನು ಗಮನದಲ್ಲಿಟ್ಟುಕೊಂಡು, ಮಂಡಳಿಯು ಮೊದಲ ಬಾರಿಗೆ 3 ಹೊಸ ಆಟಗಾರ್ತಿಯರಿಗೆ ಅವಕಾಶ ನೀಡಿದೆ. ಅದೇ ಸಮಯದಲ್ಲಿ, ನಾಲ್ವರು ಆಟಗಾರ್ತಿಯರನ್ನು ತಂಡದಿಂದ ಕೈಬಿಡಲಾಗಿದೆ. ಇವರಲ್ಲಿ ಆರಂಭಿಕ ಆಟಗಾರ್ತಿ ಶಫಾಲಿ ವರ್ಮಾ ಕೂಡ ಸೇರಿದ್ದಾರೆ. ಆದರೆ, ಐರ್ಲೆಂಡ್ ವಿರುದ್ಧದ ತವರು ಸರಣಿಯಲ್ಲಿ ವಿಶ್ರಾಂತಿ ಪಡೆದಿದ್ದ ತಂಡದ ನಿಯಮಿತ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತೆ ತಂಡಕ್ಕೆ ಮರಳಿದ್ದಾರೆ.

## ನಾಲ್ವರಿಗೆ ಗೇಟ್‌ಪಾಸ್, 3 ಹೊಸ ಬೌಲರ್‌ಗಳಿಗೆ ಅವಕಾಶ

ಶೆಫಾಲಿ ಸೇರಿದಂತೆ ನಾಲ್ವರು ಆಟಗಾರ್ತಿಯರು ಔಟ್ ಬಿಸಿಸಿಐ ಪ್ರಕಟಿಸಿದ ತಂಡದಿಂದ ಟೀಂ ಇಂಡಿಯಾದ ನಾಲ್ವರು ಸ್ಟಾರ್ ಆಟಗಾರ್ತಿಯರನ್ನು ಕೈಬಿಡಲಾಗಿದೆ. ಇದರಲ್ಲಿ ಪ್ರಮುಖ ವೇಗದ ಬೌಲರ್‌ಗಳಾದ ರೇಣುಕಾ ಸಿಂಗ್ ಠಾಕೂರ್, ಟೈಟಾಸ್ ಸಾಧು ಮತ್ತು ಪೂಜಾ ವಸ್ತ್ರಕರ್ ಅವರ ಹೆಸರುಗಳು ಸೇರಿವೆ. ಮೂವರು ಬೌಲರ್‌ಗಳು ಪ್ರಸ್ತುತ ಗಾಯದ ಸಮಸ್ಯೆಯಿಂದ ಬಳಲುತ್ತಿರುವ ಕಾರಣ ಅವರನ್ನು ಏಕದಿನ ತ್ರಿಕೋನ ಸರಣಿಯಿಂದ ಹೊರಗಿಡಲಾಗಿದೆ.

**ಬಿಸಿಸಿಐ ನೀಡಿರುವ 58 ಕೋಟಿ ಬಹುಮಾನದಲ್ಲಿ ಯಾರಿಗೆ ಎಷ್ಟೆಷ್ಟು**

ಈ ಮೂವರನ್ನು ಹೊರತುಪಡಿಸಿ, ತಂಡದ ಸ್ಫೋಟಕ ಆರಂಭಿಕ ಆಟಗಾರ್ತಿ ಶಫಾಲಿ ವರ್ಮಾ ಅವರನ್ನು ಮತ್ತೊಮ್ಮೆ ಕಡೆಗಣಿಸಲಾಗಿದೆ. ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಅದ್ಭುತವಾಗಿ ಬ್ಯಾಟಿಂಗ್ ಮಾಡಿದ್ದ ಶಫಾಲಿ 9 ಇನ್ನಿಂಗ್ಸ್‌ಗಳಲ್ಲಿ 152 ರ ಸ್ಟ್ರೈಕ್ ರೇಟ್‌ನಲ್ಲಿ 304 ರನ್ ಗಳಿಸಿದ್ದರು. ಈ ಮೂಲಕ ಪಂದ್ಯಾವಳಿಯಲ್ಲಿ ನಾಲ್ಕನೇ ಅತಿ ಹೆಚ್ಚು ರನ್ ಗಳಿಸಿದ ಆಟಗಾರ್ತಿಯೂ ಆಗಿದ್ದರು. ಇಷ್ಟೆಲ್ಲಾ ಆದರೂ ಅವರಿಗೆ ತಂಡದಲ್ಲಿ ಸ್ಥಾನ ಸಿಗಲಿಲ್ಲ.

**ಮೂವರು ಹೊಸ ಬೌಲರ್‌ಗಳಿಗೆ ಅವಕಾಶ**

ವಿಶ್ವಕಪ್‌ಗಾಗಿನ ಸಿದ್ಧತೆಗಳನ್ನು ಗಮನದಲ್ಲಿಟ್ಟುಕೊಂಡು, ಬಿಸಿಸಿಐ ಮೊದಲ ಬಾರಿಗೆ ತಂಡದಲ್ಲಿ 3 ಹೊಸ ಬೌಲರ್‌ಗಳನ್ನು ಆಯ್ಕೆ ಮಾಡಿದೆ. ಇದರಲ್ಲಿ ಮೊದಲ ಹೆಸರು ವೇಗದ ಬೌಲರ್ ಕಾಶ್ವಿ ಗೌತಮ್. ಅವರು ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದ್ದರು. ಡಬ್ಲ್ಯೂಪಿಎಲ್ 2025 ರ ಸೀಸನ್‌ನಲ್ಲಿ ಗುಜರಾತ್ ಜೈಂಟ್ಸ್ ಪರ ಕಾಶ್ವಿ 9 ಪಂದ್ಯಗಳಲ್ಲಿ 11 ವಿಕೆಟ್‌ಗಳನ್ನು ಕಬಳಿಸಿದ್ದರು. ಈ ಮೂಲಕ ಭಾರತದ ಪರ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಕೂಡ ಎನಿಸಿಕೊಂಡಿದ್ದರು. ಅವರಲ್ಲದೆ, 20 ವರ್ಷದ ಎಡಗೈ ಸ್ಪಿನ್ನರ್ ಎನ್ ಶ್ರೀ ಚರಣಿ ಕೂಡ ಮೊದಲ ಬಾರಿಗೆ ತಂಡದಲ್ಲಿ ಅವಕಾಶ ಪಡೆದಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ಪರ ಎರಡು ಪಂದ್ಯಗಳನ್ನು ಆಡಿದ ಶ್ರೀ ಚರಣಿ 4 ವಿಕೆಟ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಈ ಇಬ್ಬರಲ್ಲದೆ ಎಡಗೈ ಸ್ಪಿನ್ನರ್ ಶುಚಿ ಉಪಾಧ್ಯಾಯ ಕೂಡ ಮೊದಲ ಬಾರಿಗೆ ತಂಡವನ್ನು ಸೇರಿಕೊಂಡಿದ್ದಾರೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ನಡೆದ ಮಹಿಳಾ ಏಕದಿನ ಟ್ರೋಫಿಯಲ್ಲಿ ಅವರು ಅದ್ಭುತ ಪ್ರದರ್ಶನ ನೀಡಿದ್ದರು. ಪಂದ್ಯಾವಳಿಯಲ್ಲಿ ಮೂರನೇ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಆಗಿದ್ದ ಶುಚಿ 3.48 ರ ಎಕಾನಮಿ ಮತ್ತು 15.44 ರ ಸರಾಸರಿಯಲ್ಲಿ 18 ವಿಕೆಟ್‌ಗಳನ್ನು ಪಡೆದಿದ್ದರು.



### ಪ್ರಿಯಾಂಶ್ ಆರ್ಯ ಆರ್ಭಟಕ್ಕೆ ಸಿಎಸ್‌ಕೆ ಉಡೀಸ್!

# ಸತತ 4ನೇ ಪಂದ್ಯ ಸೋಲು ಕಂಡ ಚೆನ್ನೈ

ಪಂಜಾಬ್ ಕಿಂಗ್ಸ್ ಚಂಡೀಗಢದ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 18 ರನ್‌ಗಳ ರೋಚಕ ಜಯ ಸಾಧಿಸಿದೆ. ಪ್ರಿಯಾಂಶ್ ಆರ್ಯ 103 ರನ್, ಶಶಾಂಕ್ ಸಿಂಗ್ 52 ರನ್ ಅದ್ಭುತ ಬ್ಯಾಟಿಂಗ್ ಮಾಡಿ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

2ನೇ ತವರಿನಂಗಳದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ 6 ವಿಕೆಟ್ ನಷ್ಟಕ್ಕೆ 219 ರನ್ ಗಳಿಸಿತ್ತು. ಪಂಜಾಬ್ ಕಿಂಗ್ಸ್ ಪರ ಆರಂಭಿಕ ಬ್ಯಾಟರ್ ಪ್ರಿಯಾಂಶ್ ಆರ್ಯ 103 ರನ್ ಗಳಿಸಿದರೆ, ಶಶಾಂಕ್ ಸಿಂಗ್ ಅಜೇಯ 52 ರನ್ ಗಳಿಸಿದರು. ಈ ಮೊತ್ತವನ್ನು ಬೆನ್ನಟ್ಟಿದ ಸಿಎಸ್‌ಕೆ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 201 ರನ್‌ಗಳಿಸಲಷ್ಟೇ ಶಕ್ತವಾಗಿ 18 ರನ್‌ಗಳಿಂದ ಸೋಲು ಕಂಡಿತು.

ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಪಂಜಾಬ್ ಕಿಂಗ್ಸ್ ಪರವಾಗಿ ಪ್ರಿಯಾಂಶ್ ಆರ್ಯ ಭರ್ಜರಿ ಶತಕ ಸಿಡಿಸಿ, ರವಿಚಂದ್ರನ್ ಅಶ್ವಿನ್ ಮತ್ತು ನೂರ್ ಅಹ್ಮದ್ ಬೌಲಿಂಗ್‌ನ್ನು ಚಚ್ಚಿದರು. ಪತಿರಾಣ ಅವರ ಓವರ್‌ನಲ್ಲಿ 22 ರನ್ ಬಾರಿಸಿದರು.

2025ನೇ ಸಾಲಿನ 22ನೇ ಪಂದ್ಯದಲ್ಲಿ ಏಪ್ರಿಲ್ 8ರಂದು ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಪಂಜಾಬ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಿದ್ದ ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊಲು ಬ್ಯಾಟಿಂಗ್ ಮಾಡಿದ ಪಂಜಾಬ್ ಪರವಾಗಿ 24 ವರ್ಷದ ಯಂಗ್ ಬ್ಯಾಟರ್ ಪ್ರಿಯಾಂಶ್ ಆರ್ಯ ಭರ್ಜರಿ ಶತಕ ಸಿಡಿಸುವ ಮೂಲಕ ಬೃಹತ್ ಮೊತ್ತ ಕಲೆಹಾಕಲು ನೆರವಾದರು. ಪ್ರಿಯಾಂಶ್ , ಅಶ್ವಿನ್‌ರಂತಹ ಅನುಭವಿ ಬೌಲರ್‌ಗಳನ್ನು ಕೂಡ ಲೆಕ್ಕಕ್ಕೆ ತೆಗೆದುಕೊಳ್ಳದೆ ಚಚ್ಚಿದರು.

ಇದರ ಜೊತೆಗೆ ಐಪಿಎಲ್‌ನ ಟಾಪ್ ಬೌಲರ್ ಆಗಿರುವ ನೂರ್ ಅಹ್ಮದ್ ಅವರಿಗೆ ಕೂಡ ಸಿಕ್ಸರ್ ಮೇಲೆ ಸಿಕ್ಸರ್ ಭಾರಿಸಿ ಪಂಜಾಬ್ ಬೃಹತ್ ಮೊತ್ತಕ್ಕೆ ಕಾರಣರಾದರು. ಇನ್ನೂ ವಿಶೇಷ ಏನಂದ್ರೆ, 2022ರಿಂದ ಚೆನ್ನೈ ತಂಡ ಟಾಪ್ ಬೌಲರ್ ಆಗಿರುವ ವೇಗಿ ಮತೀಷಾ ಪತಿರಾಣ ಅವರನ್ನು ಬೆಂಡೆತ್ತಿದರು. 13ನೇ ಓವರ್ ಬೌಲಿಂಗ್ ಮಾಡಲು ಬಂದ ಪತಿರಾಣ ಅವರ ಮೊದಲ ಓವರ್‌ನಲ್ಲೇ ಬರೋಬ್ಬರಿ 22 ರನ್ ಚಚ್ಚಿ ಹಾಕಿದರು.





## ಪ್ರಿಯಾಂಶ್ 42 ಎಸೆತಗಳಲ್ಲಿ 103 ರನ್

ಅದಾಗಲೇ ವೇಗವಾಗಿ ಬ್ಯಾಟಿಂಗ್ ಮಾಡ್ತಾ ಇದ್ದ ಪ್ರಿಯಾಂಶ್ ಆರ್ಯ ಪತಿರಾಣ ಅವರ ಬೌಲಿಂಗ್‌ನಲ್ಲಿ ಸತತ ಮೂರು ಎಸೆತಗಳಲ್ಲಿ ಮೂರು ಸಿಕ್ಸ್ ಸಿಡಿಸುವ ಮೂಲಕ ಪತಿರಾಣ ಅವರಿಗೆ ಬೆಂಡೆತ್ತಿದರು. ಅಷ್ಟೇ ಅಲ್ಲ ಇದೇ ಓವರ್‌ನ ನಾಲ್ಕನೇ ಎಸೆತದಲ್ಲಿ ಕೂಡ ಫೋರ್ ಬಾರಿಸುವ ಮೂಲಕ ಸತತ ನಾಲ್ಕು ಬಾಲ್‌ಗೆ ನಾಲ್ಕು ಬೌಂಡರಿ ಬಾರಿಸಿದರು. 24 ವರ್ಷದ ಪ್ರಿಯಾಂಶ್ ಆರ್ಯಾ ಮುಂದೆ ಸಿಎಸ್‌ಕೆ ಬೌಲರ್ಸ್ ಕಂಗಾಲಾಗಿ ಹೋಗಿದ್ದಾರೆ. ಅಂತಿಮವಾಗಿ ನಿಗದಿತ 20 ಓವರ್‌ಗಳಲ್ಲಿ ಪಂಜಾಬ್ ತಂಡ 219 ರನ್ ಕಲೆಹಾಕಿತು. ಆ ಮೂಲಕ ಸಿಎಸ್‌ಕೆ ಗೆಲುವಿಗೆ 220 ರನ್ ಟಾರ್ಗೆಟ್ ಸೆಟ್ ಮಾಡಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಪರವಾಗಿ ಯಾವುದೇ ಸ್ಟಾರ್ ಆಟಗಾರರು ಅಬ್ಬರಿಸುವಲ್ಲಿ ವಿಫಲರಾದರು. ಮಾತ್ರವಲ್ಲ ಸ್ಟಾರ್ ಆಟಾಗಾರರು ಎರಡಂಕಿ ಮೊತ್ತ ದಾಖಲಿಸಲು ಕೂಡ ಪರದಾಡಿದರು. ಆರಂಭಿಕ ಆಟಗಾರ, ಪ್ರಭ್‌ಸಿಮ್ರಾನ್ ಖಾತೆ ತೆರೆಯದೆ ಫೆವಿಲಿಯನ್ ಸೇರಿಕೊಂಡರು. ನಂತರ ಬಂದ ಶ್ರೇಯಸ್ ಅಯ್ಯರ್ 9, ಮಾರ್ಕಸ್ ಸ್ಟೋಯಿನಸ್ 4 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು.

ಬಳಿಕ ಬಂದ ನೆಹಾಲ್ ವಡೇರಾ 9, ಗ್ಲೆನ್ ಮ್ಯಾಕ್ಸ್‌ವೆಲ್ 9 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಒಂದು ಹಂತದಲ್ಲಿ ಪಂಜಾಬ್ 150 ರನ್ ಗಳಿಸುವುದು ಕಷ್ಟ ಎಂಬ ವಾತಾವರಣ ಪಂಜಾಬ್ ಪಾಳಯದಲ್ಲಿ ಉಂಟಾಗಿತ್ತು. ಆದ್ರೆ, ವಿಕೆಟ್ ಬೀಳ್ತಾ ಇದ್ರೂ ಕೂಡ ಕ್ರೀಸ್ ಕಚ್ಚಿ ನಿಂತಿದ್ದ ಪ್ರಿಯಾಂಶ್ ಆರ್ಯ 42 ಎಸೆತಗಳಲ್ಲಿ 103 ರನ್ ಗಳಿಸಿದರು. ಇವರ ಇನ್ನಿಂಗ್ಸ್‌ನಲ್ಲಿ 9 ಸಿಕ್ಸರ್ ಹಾಗೂ 7 ಬೌಂಡರಿ ಸಿಡಿಸಿದರು.

### ರಹಾನೆ, ರಿಂಕು ಹೋರಾಟ ವ್ಯರ್ಥ! ಕೆಕೆಆರ್ ವಿರುದ್ಧ 4 ರನ್‌ಗಳ ರೋಚಕ ಜಯ ಸಾಧಿಸಿದ ಲಕ್ನೋ

# ಲಕ್ನೋ ಸೂಪರ್ ಜೈಂಟ್ಸ್‌ಗೆ ರೋಚಕ ಜಯ



## ಕೆಕೆಆರ್ ವಿರುದ್ಧ ಪೂರನ್ ಪರಾಕ್ರಮ

ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆಯುತ್ತಿರುವ ಪ್ರಸಕ್ತ ಋತುವಿನ 21ನೇ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಲಕ್ನೋ ಸೂಪರ್ ಜೈಂಟ್ಸ್ 4 ರನ್‌ಗಳ ರೋಚಕ ಜಯ ಸಾಧಿಸಿದೆ.

ಲಕ್ನೋ ನೀಡಿದ್ದ 239ರನ್‌ಗಳ ಗುರಿಯನ್ನ ಬೆನ್ನಟ್ಟಿದ ಕೆಕೆಆರ್ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 234ರನ್ ಗಳಿಸಿ, ಕೇವಲ 4 ರನ್‌ಗಳ ಸೋಲು ಕಂಡಿತು. ನಾಯಕ ರಹಾನೆ (61), ವೆಂಕಟೇಶ್ ಅಯ್ಯರ್ (45) ಹಾಗೂ ರಿಂಕು ಸಿಂಗ್ (ಅಜೇಯ 38) ಗೆಲುವಿಗಾಗಿ ನಡೆಸಿದ ಹೋರಾಟ ವ್ಯರ್ಥವಾಯಿತು.



ಟಾಸ್ ಗೆದ್ದ ಕೆಕೆಆರ್ ಲಕ್ನೋಗೆ ಬ್ಯಾಟಿಂಗ್ ನೀಡಿತು. ಇನ್ನಿಂಗ್ಸ್ ಆರಂಭಿಸಿದ ಮಾರ್ಷ್-ಮಾರ್ಕ್ರಮ್ ಜೋಡಿ, ಮೊದಲ ವಿಕೆಟ್ ಜೊತೆಯಾಟದಲ್ಲೇ 10.2 ಓವರ್‌ಗಳ ಆಟವಾಡಿ 99 ರನ್ ಸೇರಿಸಿದರು. ಕಳೆದ ಪಂದ್ಯದಲ್ಲಿ ಅರ್ಧಶತಕ ಸಿಡಿಸಿ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದ ಮಾರ್ಕ್ರಮ್ 28 ಎಸೆತಗಳಲ್ಲಿ ಬೌಂಡರಿ, 2 ಸಿಕ್ಸರ್ ಸಹಿತ 47 ರನ್‌ಗಳಿಸಿ ಹರ್ಷಿತ್ ರಾಣಾ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ವಿಕೆಟ್ ಕಳೆದುಕೊಂಡರೂ ಲಕ್ನೋ ಬ್ಯಾಟರ್‌ಗಳ ಅಬ್ಬರ ನಿಲ್ಲಲಿಲ್ಲ. ಮಿಚೆಲ್ ಮಾರ್ಷ್ ಹಾಗೂ ಪೂರನ್ 2ನೇ ವಿಕೆಟ್ ಜೊತೆಯಾಟದಲ್ಲಿ ಕೇವಲ 30 ಎಸೆತಗಳಲ್ಲಿ 71 ರನ್ ಸೇರಿಸಿದರು. ಆಂಡ್ರೆ ರಸೆಲ್ ಈ ಸ್ಫೋಟಕ ಜೋಡಿಯನ್ನ ಬೇರ್ಪಡಿಸಿದರು. ಮಾರ್ಷ್ 48 ಎಸೆತಗಳಲ್ಲಿ 6 ಬೌಂಡರಿ, 5 ಸಿಕ್ಸರ್‌ಗಳ ನೆರವಿನಿಂದ 81 ರನ್‌ಗಳಿಸಿ ಔಟ್ ಆದರು.

# ಗೆಲುವಿನ ಬೆನ್ನಲ್ಲೇ ಪಾಟಿದಾರ್‌ಗೆ ಬಿಸಿಸಿಐ ದಂಡ

ಮುಂಬೈ ಇಂಡಿಯನ್ಸ್ ತಂಡದ ಅಂಗಳದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ರಾಯಲ್ಲಾಗಿಯೇ ಗೆಲುವು ದಾಖಲಿಸಿದೆ. ಈ ಮೂಲಕ ವಾಂಖೆಡೆ ಸ್ಟೇಡಿಯಂನಲ್ಲಿ ಮರೀಚಿಕೆಯಾಗಿದ್ದ ಗೆಲುವನ್ನು ಮರಳಿ ಪಡೆಯುವಲ್ಲಿ ಆರ್‌ಸಿಬಿ ತಂಡ ಯಶಸ್ವಿಯಾಗಿದೆ. ಈ ಯಶಸ್ಸಿನ ಬೆನ್ನಲ್ಲೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ರಜತ್ ಪಾಟಿದಾರ್ ದಂಡದ ಶಿಕ್ಷೆಗೆ ಗುರಿಯಾಗಿದ್ದಾರೆ. ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ನಿಗದಿತ ಸಮಯದೊಳಗೆ 20 ಓವರ್‌ಗಳನ್ನು ಪೂರ್ಣಗೊಳಿಸಿರಲಿಲ್ಲ. ಹೀಗಾಗಿ ಇದೀಗ ಆರ್‌ಸಿಬಿ ತಂಡದ ನಾಯಕ ರಜತ್ ಪಾಟಿದಾರ್‌ಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ. ಇನ್ನು ಈ ಬಾರಿಯ ಐಪಿಎಲ್‌ನಲ್ಲಿ ದಂಡದ ಶಿಕ್ಷೆಗೆ ಗುರಿಯಾಗುತ್ತಿರುವ ನಾಲ್ಕನೇ ನಾಯಕ ರಜತ್ ಪಾಟಿದಾರ್. ಇದಕ್ಕೂ ಮುನ್ನ....

**ಹಾರ್ದಿಕ್ ಪಾಂಡ್ಯ:** ಮಾರ್ಚ್ 30 ರಂದು ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಮುನ್ನಡೆಸಿದ ಹಾರ್ದಿಕ್ ಪಾಂಡ್ಯಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ.

ಅಹಮದಾಬಾದ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಸ್ಲೋ ಓವರ್ ತಪ್ಪು ಮಾಡಿದಕ್ಕಾಗಿ ಪಾಂಡ್ಯಗೆ ಈ ಶಿಕ್ಷೆ ವಿಧಿಸಲಾಗಿದೆ.



## 12 ಲಕ್ಷ ರೂ. ದಂಡ

**ರಿಯಾನ್ ಪರಾಗ್:** ಸಂಜು ಸ್ಯಾಮ್ಸನ್ ಬದಲಿಗೆ ರಾಜಸ್ಥಾನ್ ರಾಯಲ್ಸ್ ತಂಡವನ್ನು 3 ಪಂದ್ಯಗಳಲ್ಲಿ ಮುನ್ನಡೆಸಿದ್ದ ರಿಯಾನ್ ಪರಾಗ್ ಕೂಡ ದಂಡದ ಶಿಕ್ಷೆಗೆ ಗುರಿಯಾಗಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಸ್ಲೋ ಓವರ್ ರೇಟ್ ತಪ್ಪು ಮಾಡಿದ ಕ್ಕಾಗಿ ಪರಾಗ್‌ಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ.

**ರಿಷಭ್ ಪಂತ್:** ಲಕ್ನೋ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಕೂಡ ದಂಡ ತೆತ್ತಿದ್ದಾರೆ. ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ನಿಗದಿತ ಸಮಯದೊಳಗೆ 20 ಓವರ್‌ಗಳನ್ನು ಪೂರ್ಣಗೊಳಿಸದ ಕಾರಣ ಪಂತ್‌ಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**